

ಅಖಿಲ ಭಾರತ ಪತ್ರಿಕೆ
ಮಾರ್ಚ್ 2026
ಅಹಂ
ಬೆಲೆ : 15/-



ಫೋಟೋ: ಇಮೇಜಿಂಗ್ ಸಾವಿತ್ರಿ

# ಅಖಿಲ ಭಾರತ ಪತ್ರಿಕೆ

**ಮಾರ್ಚ್ 2026**

ಸಂಪುಟ: 36 ಸಂಚಿಕೆ: 03


## ಪರಿವಿಡಿ

### ಅಹಂ

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು


**ಅಹಂ ಅಂದರೆ ಏನು** 5

**‘ಅಹಂ’ದ ಸ್ವರೂಪಗಳು** 10

ಅನು: ನಾಗಜ್ಯೋತಿ ಮಾನ್ವಿ

**‘ಅಹಂ’ಕಾರದ ವಿಘಟನೆ** 12

**‘ಅಹಂ’ಕಾರದ ನಿರ್ಮೂಲನೆ** 23

ಅನು: ಡಾ॥ ಮಹಾದೇವ ಸಕ್ರಿ

**ಭಯವೇತಕೆ** 31

**ಅಹಂ** 32

**ಆಧ್ಯಾತ್ಮಿಕ ಅನುಭವಗಳು ಮತ್ತು ‘ಅಹಂ’** 33

ಅನು: ಶ್ರೀಮತಿ ವಿಶಾಲಾಕ್ಷೀ ಸತ್ಯನ್

**‘ಅಹಂ’ಕಾರವನ್ನು ತ್ಯಜಿಸಲೇಬೇಕು** 40

ಅನು: ಶ್ರೀ ಕಿಶೋರಕುಮಾರ ಕಾಸಾರ (ಸಮಷ್ಟಿ)

**ಶ್ರೀ ಅರವಿಂದರ ‘ಉರ್ವಶಿ’** 47

ಅನು: ಶ್ರೀ ಕಿಶೋರಕುಮಾರ ಕಾಸಾರ (ಸಮಷ್ಟಿ)

**‘ಅಹಂ’ದ ಕಾವ್ಯಾತ್ಮಕ ಅಭಿವ್ಯಕ್ತಿ** 56

ಅನು: ಪುಟ್ಟು ಕುಲಕರ್ಣಿ

**ವಾರ್ತಾಪತ್ರ** 58



**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 332.
ಫೋನ್: 9448774920
mayureshwarkp@gmail.com



**ಪರಿಶೀಲನಾ ಸಮಿತಿ:**
ಡಾ॥ ಆರ್.ಕೆ. ಕುಲಕರ್ಣಿ

**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
https://www.sriaurobindo
complex.org/archive.php
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

## ಸಂಪಾದಕರ ಟಿಪ್ಪಣಿ

'ಅಹಂ' ಎನ್ನುವದು 'ಸ್ವ'ತ್ವವನ್ನು ಅಭಿವ್ಯಕ್ತಗೊಳಿಸುವ ಒಂದು ನೈಜ–ಕಲ್ಪನಾಪೂರ್ಣವಾಗಿರುವ ಸಂಗತಿಯಾಗಿದೆ. ಮನಸ್ಸಿನ ಮೂಲದಿಂದಲೇ ಜನಿಸುವ ಇದು ತಾನು ಎಲ್ಲದಕ್ಕಿಂತ ವಿಶೇಷ ಅಥವಾ ಭಿನ್ನ ಎನ್ನುವ ಚಿಂತನವನ್ನು ತುಂಬುತ್ತದೆ. ಆದರೆ ಯಾವಾಗ ಈ 'ಅಹಂ'ಕಾರದ ಸ್ವಂತಿಕೆಯು ಕರಗುತ್ತದೆಯೋ, ಆಗ ಅಲ್ಲಿ ಮನಸ್ಸಿಗೆ ಅತೀತವಾಗಿ ಅಸ್ತಿತ್ವದಲ್ಲಿರುವ 'ಸ್ವ'ತ್ವವು ಮತ್ತು ಅದರ ಸ್ವರೂಪವು ಗೋಚರಗೊಳ್ಳುತ್ತದೆ. ಇದು ಮೂಲ ನೆಲೆಯನ್ನು ಅರಸುತ್ತಿರುವಾಗ ತಾತ್ಕಾಲಿಕವಾಗಿ ವಾಸಿಸಲು ಲಭ್ಯಗೊಳ್ಳುವ ಬಿಡಾರದಂತೆ ಇರುತ್ತದೆ. ಈ ವಿಷಯದ ಹಿನ್ನೆಲೆಯಲ್ಲಿ ಮಾನವನ ಮನಶ್ಶಾಸ್ತ್ರವನ್ನು ಅರಿತುಕೊಳ್ಳಲು ಶ್ರೀ ಅರವಿಂದರು ಮತ್ತು ಶ್ರೀಮಾತೆಯವರು ಅಭಿವ್ಯಕ್ತಿಸಿರುವ ಚಿಂತನಗಳನ್ನು ಈ ಸಂಚಿಕೆಯಲ್ಲಿ ರೂಪಿಸಲಾಗಿದೆ. (ಎಐಎಮ್)

## ಸಂಪಾದಕೀಯ

### 'ಅಹಂ'ಕಾರದ ಆಯಾಮಗಳು

'ಅಹಂ' ಎನ್ನುವ ಶಬ್ದಕ್ಕೆ ಇರುವ ಆಯಾಮಗಳು ತುಂಬ ನಿಗೂಢವಾಗಿವೆ. 'ಅಹಂ ಬ್ರಹ್ಮಾಸ್ಮಿ', 'ಅಹಂಭಾವ' ಮತ್ತು 'ಅಹಂಕಾರ'ಗಳ ಆಯಾಮದಲ್ಲಿ ಜಿಜ್ಞಾಸೆ ಇದೆ. ಇದರ ಜೊತೆಗೆ 'ಅ ದಿಂದ ಹ' (ಹಂ)ದ ವರೆಗೆ ಇರುವ ವರ್ಣಮಾಲೆಗಳಲ್ಲಿಯೇ ಮಾನವನ ಸರ್ವ ಜ್ಞಾನ ಶಾಖೆಗಳೂ ಲಿಖಿತದ ಸ್ವರೂಪದಲ್ಲಿ ದಾಖಲುಗೊಂಡಿವೆ; ವಿಕಾಸಗೊಂಡಿವೆ. ಹೀಗಾಗಿ ಇಲ್ಲಿ 'ಅಹಂ'ದ ವಿಶ್ಲೇಷಣೆಯಲ್ಲಿ ಶ್ರೀ ಅರವಿಂದರು ಮತ್ತು ಶ್ರೀಮಾತೆಯವರು ಹಲವಾರು ನಿದರ್ಶನಗಳ ಮೂಲಕ ಪಥ ನಿರ್ಮಿಸಿದ್ದಾರೆ.

ಸಾಮಾನ್ಯವಾಗಿ ಅಹಂಕಾರ ಎಂದಾಕ್ಷಣ ನಮ್ಮೆದುರಿಗೆ ಬರುವದು ರಾಕ್ಷಸ ಸ್ವರೂಪದ ನಿದರ್ಶನಗಳೇ ಆಗಿವೆ. ಗುಣದಲ್ಲಾಗಲೀ, ಸ್ವಭಾವದಲ್ಲಾಗಲಿ ಒಂದು ಹಂತದ ವರೆಗೆ ದೈಹಿಕ ಸಂರಚನೆಯಲ್ಲಿಯು ರಾಕ್ಷಸೀ ಭಾವದ ವಿನ್ಯಾಸಗಳೇ ನಮ್ಮ ಚಿಂತನದಲ್ಲಿ ತುಂಬಿಕೊಂಡಿವೆ. ಇದು 'ಅಹಂಕಾರದ ಸಾಕಾರ ರೂಪ'ವೆಂದು

ಇದರಿಂದ ಮುಕ್ತಿ ಪಡೆಯಬೇಕೆಂದು ಆಶಿಸುವ ಚಿತ್ರಣಗಳು ನಮ್ಮಲ್ಲಿವೆ. ಶ್ರೀ ಅರವಿಂದರು ಅಭಿವ್ಯಕ್ತಿಸಿರುವಂತೆ 'ರಾಕ್ಷಸ ಎಂದರೆ ಹಿಂಸಾತ್ಮಕವಾಗಿರುವ ಕ್ರಿಯಾ ಪ್ರವೃತ್ತಿಯ ಅಹಂಕಾರದಲ್ಲಿ ಮೆರೆಯುತ್ತಿರುವವನು ಎಂದರ್ಥವಿದೆ. ಈ ಜಗತ್ತಿನಲ್ಲಿ ಪಶು ಭಾವದ ಹೃದಯವನ್ನು ಸದಾ ನೆಲೆಸಲೆಂದು, ತನ್ನದೇ ಪ್ರಭುತ್ವವಿರಬೇಕೆಂದು ಹಪಹಪಿಸುತ್ತಿರುತ್ತಾನೆ. ಅದಕ್ಕಾಗಿ ಪಾಶವೀಯ ವಿಚಾರಗಳ ಮೂಲಕವೇ ನಿಯಂತ್ರಣ ಸಾಧಿಸುವ ಬೌದ್ಧಿಕ ಸ್ವರೂಪವನ್ನು ಮತ್ತು ಅಹಂಕಾರವನ್ನು ಎಂದಿಗೂ ನಿಯಂತ್ರಣಗೊಳಿಸಿಕೊಳ್ಳಲು ಯತ್ನಿಸದಿರುವ ಅವಸ್ಥೆಯನ್ನು ಹೊಂದಿರುತ್ತಾನೆ. ಈ ರೀತಿಯಲ್ಲಿರುವ ಎಲ್ಲ ಪ್ರಕಾರದ ಹಂತದಲ್ಲಿಯೂ ಸಹಿತ ತನ್ನದೇ ದೃಷ್ಟಿಕೋನದಲ್ಲಿಯೇ ಪ್ರಜ್ಞೆಯನ್ನು (ಚಿಂತನವನ್ನು) ಗಮನಿಸುತ್ತ, ಅಲ್ಲಿ ಇರುವ ದಿವ್ಯತೆಯನ್ನು ತನ್ನದೇ ದೃಷ್ಟಿಕೋನದಲ್ಲಿ ಪರಿಗಣಿಸುತ್ತಾ, ಈ ಜಗತ್ತಿನಲ್ಲಿ ಇದೂ ಸಹಿತ ಪ್ರಕೃತಿಯಂತೆಯೇ ಎಂದು ಭಾವಿಸುತ್ತ, ಜಗನ್ಮಾತೆಯಿಂದ ದೂರವಿದ್ದು ಅಸ್ತಿತ್ವವಿರಲು ಬಯಸುತ್ತದೆ' ಎಂದು ಈ ವಿಷಯವನ್ನು ಶ್ರೀ ಅರವಿಂದರು 'ರಾಕ್ಷಸ' ಎನ್ನುವ ಕವನದಲ್ಲಿ ಅಭಿವ್ಯಕ್ತಿಸಿದ್ದಾರೆ.

'ಜೀವನದಲ್ಲಿ ವೈಭವ. ಆದ್ಯತೆ ಇದ್ದರೆ ಮಾತ್ರ ಸಂತೋಷ, ಸಾಮರ್ಥ್ಯ, ಗರ್ವ, ಸದಾ ಜಯವನ್ನು ಪಡೆದುಕೊಳ್ಳುವದು, ಅದಕ್ಕಾಗಿ ಸದಾ ಬಲಶಾಲಿಯಾಗಿರಲು ಯತ್ನಿಸುವದೇ ಮಾನವನ ಇಚ್ಛೆಗಳಾಗಿವೆ. ವನ್ಯಜೀವಿಗಳೂ ಸಹಿತ ಇದೇ ರೀತಿಯಲ್ಲಿಯೇ ವಿಹರಿಸುತ್ತವೆ. ಸ್ತ್ರೀ ಸಮುದಾಯದ ಗಡಣದ ಜೊತೆಗೆ ಪೌರುಷ ಪ್ರದರ್ಶನವನ್ನೇ ಸಾಮ್ರಾಜ್ಯವಾಗಿಸಿಕೊಳ್ಳಲು ಯತ್ನಿಸುವ 'ಅಹಂ'ಕಾರವೇ 'ರಾಕ್ಷಸ' ಪ್ರವೃತ್ತಿಯನ್ನು ರೂಪಿಸುತ್ತದೆ. ಅದಕ್ಕಾಗಿ ನಾನು ಇದೇ ರೀತಿಯ ಸಾಮ್ರಾಜ್ಯವನ್ನೇ ಹೊಂದಲು ಬಯಸುತ್ತೇನೆ ಎನ್ನುವದೇ ರಾಕ್ಷಸನ ಧ್ಯೇಯವಾಗಿರುತ್ತದೆ. ಅದನ್ನು ಪುಷ್ಟಿಗೊಳಿಸಿಕೊಂಡು ಸಾಗಲು ನನ್ನಲ್ಲಿ ಸಾಮರ್ಥ್ಯವೂ ಇದೆ. ನಾನು ಜಯಿಸಲಾಗದ ಯಾವುದೇ ಸ್ಥಳವೂ ಇಲ್ಲ. ನನ್ನ ಅಧಿಪತ್ಯಕ್ಕೆ ದಕ್ಕದೇ ಯಾವುದೂ ಉಳಿಯುವದಿಲ್ಲ. ಮನುಕುಲವನ್ನು ಸೃಷ್ಟಿಸಿರುವ ಓ ಶಕ್ತಿಯೇ, ನೀನು ಅದಾವ ಕಠಿಣ ಕಾರ್ಯವನ್ನು ಅಪೇಕ್ಷಿಸುತ್ತೀಯಾ? ರಕ್ತ ತರ್ಪಣದಲ್ಲಿ ಜೊತೆಗೆ ಕಡು ಕಠಿಣ ಶ್ರಮದಲ್ಲಿ ಮತ್ತು ಸುದೀರ್ಘಾವಧಿಯೊಳಗೆ, ಹಲವು ರೀತಿಯ ಅಸಾಧಾರಣ ಧ್ಯಾನಗಳಲ್ಲಿ ಕಾಲ ಕಳೆದೆ, ಪ್ರತಿ ಪರಿವರ್ತನೆಯ ಪೀಠದಲ್ಲಿ ಕಂಡದ್ದು ಪಾಶವೀಯ ಪ್ರದರ್ಶನವೋ ಅಥವಾ ಮನುಕುಲದ ವೇದನೆಯೋ. ಇಲ್ಲವೇ ಸ್ವರ್ಣದಾಶೆಯ ತೋರಿ

ಅವರನ್ನೆಲ್ಲ ಖರೀದಿಸುವ ವಸ್ತುಗಳೆಂದು ಭಾವವೇ? ಶ್ರೀಮಂತರು ಬಲಾಢ್ಯರು ನಿನ್ನ ದೇವಸ್ಥಾನವನ್ನು ಜೊತೆ ಪೂಜಕರನ್ನೂ ನುಂಗಿಹಾಕಲು ಕಾತರರಾಗಿದ್ದಾರೆ.

ನನಗಿದೋ ಹೃದಯವಿದೆ, ಅದಕ್ಕಿಂತ ಮಿಗಿಲಾಗಿ ಸಾಮರ್ಥ್ಯಪೂರ್ಣ ತ್ಯಾಗಕ್ಕೆ ನನ್ನ ಕರಗಳು ಸಿದ್ಧವಿವೆ. ನನ್ನ ಅತ್ಯುಗ್ರ ಸ್ವಭಾವದ ಶಾಂತತೆಯಲ್ಲಿಯೂ ಸಹಿತ ಪ್ರಚಂಡ ಧೈರ್ಯ ತುಂಬಿಕೊಂಡಿದೆ. ಅದನ್ನು ನಿನಗೆ ಅರ್ಪಿಸಲು ಸಿದ್ಧನಿದ್ದೇನೆ' ಎನ್ನುವ ಚಿತ್ರಣದಲ್ಲಿ **'ಅಹಂಕಾರ'**ದಿಂದ ಮುಕ್ತಿ ಪಡೆಯುವ ಹಂತವನ್ನು ಅಭಿವ್ಯಕ್ತಿಸಿದ್ದಾರೆ.

## 'ಅಹಂ'ಭಾವದ ಸೃಷ್ಟಿ

ನಿರಾಕಾರವಾಗಿರುವ ತತ್ತ್ವಗಳು ನಿಯತಿಯ ಪ್ರಕಾರವಾಗಿ ವಿಕಸಗೊಳ್ಳಲು 'ಸಾಕಾರ'ಗೊಂಡಾಗ ಅಲ್ಲಿ 'ಅಹಂ' ಎನ್ನುವ ಭೌತಿಕ ತತ್ತ್ವವು (ತಾತ್ಕಾಲಿಕವಾದರೂ) ಅಸ್ತಿತ್ವ ಪಡೆದುಕೊಳ್ಳುತ್ತದೆ. ಹೀಗಾಗಿ ಇದು 'ನನ್ನ ದೇಹ', ಇದು 'ನನ್ನ ಭಾವ', ಇದು 'ನಾನು' ಎನ್ನುವ ತಾತ್ಕಾಲಿಕ ಅಸ್ತಿತ್ವವು ವಿಕಾಸದ ಪಥದಲ್ಲಿ ಸಾಗಬೇಕಾಗುತ್ತದೆ. ಇದನ್ನು ಅರಿತುಕೊಂಡವನು ಹಾಗು ಇದು ಕೇವಲ ನಿಗದಿತ ಅವಧಿಗೆ ಎಂದು ಅರಿತುಕೊಂಡವನು ರಾಕ್ಷಸತ್ವದ ಅಹಂಕಾರ'ದಿಂದ ಮುಕ್ತಿಪಡೆದುಕೊಂಡು 'ಮಾನವನಾಗುವತ್ತ' ಯಾನ ಮಾಡುತ್ತಾನೆ.

## 'ಅಹಂ ಬ್ರಹ್ಮಾಸ್ಮಿ'

'ರಾಕ್ಷಸತ್ವದ ಅಹಂಕಾರದಿಂದ, ಮನುಸಹಜವಾಗಿರುವ ಸಾಕಾರರೂಪಿನ 'ಅಹಂಭಾವ'ದಿಂದ ಬಿಡುಗಡೆ ಹೊಂದಿ, ಮೂಲ ನೆಲೆಯನ್ನು ಸ್ಪಂದಗೊಂಡಾಗ ಈ 'ಅಹಂ ಬ್ರಹ್ಮವೇ'ಆಗಿದೆ ಎನ್ನುವದು ಸಾಕ್ಷಾತ್ಕಾರಗೊಳ್ಳುತ್ತದೆ. 'ಅಹಂ ಬ್ರಹ್ಮಾಸ್ಮಿ' ಎಂದು ಅಭಿವ್ಯಕ್ತಪಡಿಸುವ 'ಅಹಂಭಾವ'ದ ಸ್ವರೂಪವು 'ಅಹಂಕಾರದಿಂದ ಸಂಪೂರ್ಣವಾಗಿ ಮುಕ್ತಗೊಂಡಿರುತ್ತದೆ. ಇದನ್ನೇ ಮಾನವನು ತನಗೆ ವರವಾಗಿ ದತ್ತಗೊಂಡಿರುವ ಭಾಷಾ ವಿನ್ಯಾಸದಲ್ಲಿ 'ಅ' ದಿಂದ 'ಹಂ'ದ ವರೆಗಿನ ವರ್ಣಗಳಲ್ಲಿಯೇ ದಾಖಲಾತಿಗೊಳಿಸಿಕೊಂಡಿದ್ದಾನೆ, ವಿಕಾಸಗೊಳಿಸಿಕೊಳ್ಳುತ್ತಿದ್ದಾನೆ.' (ಪಿಪಿಕೆ)

# ಅಹಂಕಾರ ಅಂದರೆ ಏನು

**– ಅನು: ನಾಗಜ್ಯೋತಿ ಮಾನ್ವಿ**

*ಪ್ರಶ್ನೆ: ಅಹಂಕಾರ ಎಂದರೇನು?*

ಎಲ್ಲಾ ರೀತಿಯಿಂದಲೂ, ಪ್ರತಿಯೊಬ್ಬರನ್ನೂ ಒಂದು ಬೇರೆಯದೇ ಆದ ವ್ಯಕ್ತಿಯನ್ನಾಗಿಸುವದು ಅಹಂಕಾರವೇ ಎಂದು ನನಗನಿಸುತ್ತಿದೆ. ಎಲ್ಲಾ ರೀತಿಯಿಂದಲೂ ಬೇರೆಯವರಿಂದ ಪ್ರತ್ಯೇಕ ಎಂದು ಭಾವಿಸಿಕೊಳ್ಳುವದೂ ಇದೇ 'ಅಹಂಕಾರವೇ' ಆಗಿದೆ. "ನಾನು", "ನಾನಿದ್ದೇನೆ", "ನನಗೆ ಬೇಕು", "ನಾನು ಮಾಡುತ್ತೇನೆ", "ನಾನು ಅಸ್ತಿತ್ವದಲ್ಲಿದ್ದೇನೆ", "ನಾನು ವಿಚಾರ ಮಾಡುತ್ತೇನೆ, ಆದ್ದರಿಂದಲೇ ನಾನಿದ್ದೇನೆ" ಎನ್ನುವ ಗಾದೆಯೂ ಸೇರಿದಂತೆ, ಎಲ್ಲವೂ ಅಹಂಕಾರವನ್ನು ತರುತ್ತಿವೆ. ನನ್ನನ್ನು ಕ್ಷಮಿಸಿ, ಆದರೆ ಇದೊಂದು ಬಹುತೇಕವಾಗಿ ಕೊಂಡಾಡಲ್ಪಟ್ಟ ಮೂರ್ಖತನವಾಗಿದೆ. ಆದಾಗ್ಯೂ ಇದೂ ಸಹಿತ ಅಹಂಕಾರವೇ ಅಗಿದೆ. ನಾನು 'ಮನೋಜನು' ಎನ್ನುವ ಭಾವನೆ ಅಹಂಕಾರವಾಗಿದೆ ಮತ್ತು ನಾನು ಸಂಪೂರ್ಣವಾಗಿ ಇವರಿಂದ ಮತ್ತು ಅವರಿಂದ ಬೇರೆಯಾಗಿದ್ದೇನೆ; ಈ ಸಾಮಾನ್ಯ ಭೌತಿಕ ಕಂಪನದೊಳಗೆ ನಿನ್ನ ದೇಹವು ಕರಗಿ ಹೋಗದ ಹಾಗೆ ತಡೆದಿರುವದು ಅಹಂಕಾರವೇ ಆಗಿದೆ; ನಿನಗೆ ಒಂದು ನಿರ್ದಿಷ್ಟ ರೂಪ, ನಿರ್ದಿಷ್ಟ ಗುಣ, ಪ್ರತ್ಯೇಕವಾದ ಪ್ರಜ್ಞೆ, ನೀನು ನಿನ್ನೊಳಗೆ ಇರುವ ಭಾವನೆ, ಬೇರೆಯವರಿಂದ ಸ್ವತಂತ್ರನಾಗಿರುವೆ; ನಾವು ವಿಚಾರ ಮಾಡದಿದ್ದರೆ, ಮತ್ತು ಒಂದು ವೇಳೆ ನಾಶವಾದರೂ ನಾನು ಇದ್ದೇ ಇರುತ್ತೇನೆ ಎನ್ನುವ ಸಹಜ ಭಾವವಿರುತ್ತದೆ. ನಾನು ಹೇಗಿರುವೆನೋ ಹಾಗೆ ಇರುವೆ ಎಂದು ಅನಿಸುತ್ತಿದೆ. ಇದು ಅಹಂಕಾರದ ಅತಿರೇಕವಾಗಿದೆ.

ಖಚಿತವಾಗಿಯೂ, ನಾವು ನಮ್ಮ ಅಹಂಕಾರವನ್ನು ಶೀಘ್ರವಾಗಿ ಕಳೆದುಕೊಂಡರೂ ಪ್ರಾಣಿಕ ಮತ್ತು ಮಾನಸಿಕ ದೃಷ್ಟಿಯಿಂದ ಆಕೃತಿಯಿಲ್ಲದ ಸಮೂಹವಾಗುತ್ತೇವೆ. ಅಹಂಕಾರವು ನಿಜವಾಗಿಯೂ ವೈಯಕ್ತಿಕವಾದ ಉಪಕರಣವಾಗಿದೆ. ಅಂದರೆ, ವೈಯಕ್ತೀಕರಣಗೊಂಡ ಸತ್ತೆಯಾಗಿರುವವರೆಗೆ ನನ್ನೊಳಗೆ ನಿರ್ಮಾಣ ಮಾಡಿಕೊಳ್ಳುವವರೆಗೆ ಈ ಅಹಂಕಾರವು ಅತೀ ಅವಶ್ಯವೇ ಆಗಿದೆ. ಅಹಂಕಾರವನ್ನು ಕಾಲಕ್ಕಿಂತ ಮೊದಲೇ ನಾಶ ಮಾಡುವ ಶಕ್ತಿ ನಮ್ಮಲ್ಲಿದ್ದರೆ

ನಾವು ನಮ್ಮ ವೈಯಕ್ತಿಕತೆಯನ್ನು ಕಳೆದುಕೊಳ್ಳುತ್ತೇವೆ. ಆದರೆ ಒಮ್ಮೆ ವೈಯಕ್ತೀಕರಣವು ರೂಪುಗೊಂಡ ನಂತರ ಅಹಂಕಾರದ ಉಪಯೋಗವು ಇರುವದೇ ಇಲ್ಲ. ಅದೂ ಅಲ್ಲದೇ ಅದನ್ನು ಉಳಿಸಿಕೊಳ್ಳಲು ಯತ್ನಿಸಿದರೆ ಅದು ಹಾನಿಕಾರಕ ನಡೆಯೇ ಆಗಿರುತ್ತದೆ. ಆ ಸಮಯ ಬಂದಾಗ ಮಾತ್ರ ನಾವು ಅದನ್ನು ನಾಶ ಮಾಡಬೇಕು. ಆದರೆ ಸಹಜವಾಗಿ, ಅದನ್ನು ನಿರ್ಮಾಣ ಮಾಡಲು ತೊಂದರೆ ತೆಗೆದುಕೊಳ್ಳುತ್ತೀರಿ. ಅದು ತನ್ನನ್ನು ಅಷ್ಟು ಸುಲಭವಾಗಿ ಬಿಟ್ಟು ಕೊಡುವದಿಲ್ಲ, ಅಲ್ಲದೇ ತಾನು ಮಾಡಿದ ಪ್ರಯತ್ನಕ್ಕೆ ಫಲವನ್ನು ಬಯಸುತ್ತದೆ. ಅಂದರೆ ತನ್ನ ವೈಯಕ್ತಿಕತೆಯನ್ನು ಸುಖಿಸಲು ಬಯಸುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 7/11–12**

## ಅಹಂಕಾರ ಮತ್ತು ಅಹಂಭಾವ

ಅಹಂಭಾವವನ್ನು ತಿದ್ದುವದು ಸಾಪೇಕ್ಷವಾಗಿ ಸುಲಭವೇ ಆಗಿದೆ. ಏಕೆಂದರೆ ಎಲ್ಲರಿಗೂ ಅದೇನೆಂದು ತಿಳಿದಿದೆ. ನಾವು ನಿಜವಾಗಿ ಅಹಂಭಾವದಿಂದ ಮುಕ್ತರಾಗಬೇಕೆಂದು ಬಯಸಿದರೆ, ಅದನ್ನು ಸುಲಭವಾಗಿ ಕಂಡುಕೊಳ್ಳಬಹುದು ಮತ್ತು ಅಷ್ಟೇ ಸಹಜವಾಗಿ ತಿದ್ದಬಹುದು.

ಆದರೆ ಅಹಂಕಾರವನ್ನು ಕಂಡುಹಿಡಿಯುವದು ಕಷ್ಟವಾಗಿದೆ. ಏಕೆಂದರೆ ಅಹಂಕಾರವನ್ನು ಕಂಡುಹಿಡಿಯಲು ಅದನ್ನು ಮೀರಿರಬೇಕಾಗುತ್ತದೆ. ಇಲ್ಲದಿದ್ದರೆ ಅದನ್ನು ಕಂಡುಹಿಡಿಯುವದೇ ಕಷ್ಟವಾಗುತ್ತದೆ. ನಾವು ಅಹಂಕಾರದಿಂದ ಸಂಪೂರ್ಣವಾಗಿ ರಚಿತಗೊಂಡಿದ್ದೇವೆ– ತಲೆಯಿಂದ ಪಾದದವರೆಗೂ, ಬಹಿರಂಗದಿಂದ ಅಂತರಂಗದವರೆಗೂ, ಭೌತಿಕದಿಂದ ಅಧ್ಯಾತ್ಮಿಕ ಹಂತದವರೆಗೂ ನಾವು ಅಹಂಕಾರದಲ್ಲಿಯೇ ಮುಳುಗಿರುತ್ತೇವೆ. ಅದು ಎಲ್ಲದರೊಂದಿಗೆ ಕಲಬೆರಕೆಯಾಗಿದೆ, ಜೊತೆಗೆ ಅದು ಏನೆಂದು ನಿಮಗೆ ಅದರ ಅರಿವೂ ಇರುವದಿಲ್ಲ. ಅಹಂಕಾರವೆಂದರೇನು ಎಂದು ತಿಳಿಯಬೇಕಾದರೆ, ನಾವು ಮೊದಲು ಅದನ್ನು ಜಯಿಸಿರಬೇಕು, ಅದರಿಂದ ಮುಕ್ತಗೊಂಡಿರಬೇಕು. ಸ್ವಲ್ಪ ಪ್ರಮಾಣದಲ್ಲಾದರೂ ಸರಿ, ಅಥವಾ ನಿಮ್ಮ ಸತ್ತೆಯ ಒಂದು ಚಿಕ್ಕ ಮೂಲೆಯಲ್ಲಿ ಆದರೂ ಅದರಿಂದ ಹೊರಬಂದಿರಬೇಕು.

ನಮ್ಮ ವೈಯಕ್ತೀಕರಣಕ್ಕೆ ಸಹಾಯ ಮಾಡುವದೇ ಅಹಂಕಾರ ಮತ್ತು ದೈವೀಮಯವಾಗಲು ಅಡಚಣೆಯನ್ನು ಒಡ್ಡುತ್ತಿರುವದೂ ಇದೇ ಅಹಂಕಾರವೇ ಆಗಿದೆ. ಅಹಂಕಾರವಿಲ್ಲದೇ, ಪ್ರಸ್ತುತ ಜಗತ್ತು ಸಂಘಟನೆಗೊಂಡ ರೀತಿಯಲ್ಲಿ ಯಾವುದೇ ವೈಯಕ್ತಿಕತೆಯೂ ಇರುವದಿಲ್ಲ. ಆದರೆ ಎಲ್ಲಿಯವರೆಗೂ ಅಹಂಕಾರ–ವಿರುತ್ತದೆಯೋ ಅಲ್ಲಿಯವರೆಗೂ ಜಗತ್ತು ದಿವ್ಯತ್ವವನ್ನು ಪಡೆದುಕೊಳ್ಳುವದಿಲ್ಲ.

ತಾರ್ಕಿಕವಾಗಿ ಈ ನಿರ್ಧಾರಕ್ಕೆ ಬರಬಹುದು ಎಂದುಕೊಳ್ಳೋಣ, 'ಸರಿ, ಮೊದಲು ನಾವು ಪ್ರಜ್ಞಾಪೂರ್ವಕವಾಗಿ ವೈಯಕ್ತಿಕತೆಯನ್ನು ಬೆಳೆಸಿಕೊಳ್ಳಬೇಕು ಮತ್ತು ನಂತರ ಅಹಂಕಾರವನ್ನು ಓಡಿಸಿ, ದೈವತ್ವವನ್ನು ಪಡೆದುಕೊಳ್ಳಬೇಕು'. ನಾವು ಪ್ರಜ್ಞಾಪೂರ್ವಕವಾಗಿರುವ ವೈಯಕ್ತಿಕತೆಯನ್ನು ಹೊಂದಿರುವಾಗ ಅಹಂಕಾರದ ಜೊತೆಗೆ ಎಷ್ಟು ಅನ್ಯೋನ್ಯತೆಯಿಂದ ಬದುಕುತ್ತಿರುತ್ತೇವೆ ಎಂದರೆ, ಅದನ್ನು ಕಂಡುಹಿಡಿಯಲು ಸಾಧ್ಯವಾಗುವದಿಲ್ಲ ಜೊತೆಗೆ ಅದರ ಸಾನಿಧ್ಯವನ್ನು ಅರಿಯಲು ಬಹಳ ಶ್ರಮಪಡಬೇಕಾಗುತ್ತದೆ.

ಇನ್ನೊಂದು ರೀತಿಯಲ್ಲಿ ಹೇಳಬೇಕೆಂದರೆ, ಅಹಂಭಾವ ಎನ್ನುವದು ಎಲ್ಲರಿಗೂ ತಿಳಿದಿದೆ. ಎಲ್ಲವನ್ನೂ ನಿನ್ನೆಡೆಗೆ ತಿರುಗಿಸಿಕೊಳ್ಳುವದು ಮತ್ತು ಬೇರೆ ಜನರ ಬಗೆಗೆ ನಿನಗೆ ಆಸಕ್ತಿ ಇಲ್ಲದಿರುವದೇ ಅಹಂಭಾವ; ನಿನ್ನನ್ನು ನೀನು ವಿಶ್ವದ ಕೇಂದ್ರದಲ್ಲಿರಿಸಿಕೊಂಡು ಎಲ್ಲಾ ವಸ್ತುಗಳನ್ನು ಕೇವಲ ನಿನ್ನ ಸಂಬಂಧದ ಮೂಲಕ ನೋಡುವದೇ ಅಹಂಭಾವವಾಗಿದೆ. ಆದರೆ ವಾಸ್ತವವಾಗಿ ಇರುವದೇನೆಂದರೆ, ನನ್ನಲ್ಲಿ ಅಹಂಭಾವ ಇಲ್ಲ ಎನ್ನಲು ನೀವು ಕುರುಡರೇ ಆಗಿರಬೇಕಾಗುತ್ತದೆ. ಹೆಚ್ಚು ಕಡಿಮೆ ಎಲ್ಲರಲ್ಲಿಯೂ ಸ್ವಲ್ಪವಾದರೂ ಅಹಂಭಾವ ಇದ್ದೇ ಇರುತ್ತದೆ. ಮತ್ತು ಸ್ವಲ್ಪಮಟ್ಟಿಗೆ ಇರುವ ಅಹಂಭಾವವನ್ನು ಸಹಜವೆಂದು ಒಪ್ಪುತ್ತಾರೆ; ಆದರೆ ಸಾಮಾನ್ಯ ಜೀವನದಲ್ಲಿ ಸಹ, ಅಹಂಭಾವವು ಅತಿರೇಕವಾದರೆ, ಅವನು ಪೆಟ್ಟು ತನ್ನಲು ಸಿದ್ಧನಾಗಬೇಕಾಗುತ್ತದೆ. ಏಕೆಂದರೆ ಎಲ್ಲರೂ ಅಹಂಭಾವದಿಂದಿರುತ್ತಾರೆ. ಎಲ್ಲದರಲ್ಲಿಯೂ ಅಹಂಭಾವ ಇರುತ್ತದೆ. ಆದರೆ ಯಾರಿಗೂ ಇನ್ನೊಬ್ಬರ ಅಹಂಭಾವ ಇಷ್ಟವಾಗುವದಿಲ್ಲ.

ಅಹಂಭಾವವಿರುವದು ಜನ ಸಾಮಾನ್ಯರ ನೈತಿಕ ಭಾಗವಾಗಿದೆ. ಅದನ್ನು ಸಹಜವೆಂದೇ ಅವರು ತಿಳಿಯುತ್ತಾರೆ. ಹೌದು, ಅಹಂಭಾವೆನ್ನುವದು ಸ್ವಲ್ಪವಾದರೂ

ಇರಲೇಬೇಕು. ಆದರೆ ಅದು ಅತಿರೇಕವಾಗಬಾರದು, ಏಕೆಂದರೆ ಅದು ಇನ್ನೊಬ್ಬರಿಗೆ ಕಾಣಬಾರದು! ಇನ್ನೋಂದು ರೀತಿಯಲ್ಲಿ ಹೇಳಬೇಕೆಂದರೆ, ಯಾರೂ ಅಹಂಭಾವದ ಬಗೆಗೆ ಮಾತನಾಡುವದಿಲ್ಲ. ಏಕೆಂದರೆ ಯಾರಿಗೂ ಇದು ತಿಳಿದೇ ಇಲ್ಲ. ಅಹಂಕಾರವೆನ್ನುವದು ಎಷ್ಟು ಅನ್ಯೋನ್ಯತೆಯಿಂದ ಕೂಡಿದ ಸಂಗತಿ ಎಂದರೆ ಯಾರಿಗೂ ಅದನ್ನು ಗುರುತಿಸಲು ಆಗುವದೇ ಇಲ್ಲ; ಮುಖ್ಯವಾಗಿ ಎಲ್ಲಿಯವರೆಗೂ ಅಹಂಕಾರವಿರುತ್ತದೆಯೋ ಅಲ್ಲಿವರೆಗೂ ನಾವು ದೈವೀ ಪ್ರಜ್ಞೆಯನ್ನು ಪಡೆದುಕೊಳ್ಳಲು ಸಾಧ್ಯವಾಗುವದಿಲ್ಲ.

**ಬೇರೆ ಎನ್ನುವ ಭಾವ**

ನಾವು ಇನ್ನೊಬ್ಬರಿಂದ ಬೇರೆ ಇದ್ದೇವೆ ಎನ್ನುವ ಅರಿವನ್ನು ಅಹಂಕಾರವೇ ಸೃಷ್ಟಿಸುತ್ತದೆ. ಅಹಂಕಾರವಿಲ್ಲದಿದ್ದರೆ, ನಾನು ಇನ್ನೊಬ್ಬರಿಂದ ಬೇರೆಯಾಗಿದ್ದೇನೆ ಎನ್ನುವ ಅರಿವೂ ಇರುತ್ತಿರಲಿಲ್ಲ. ಅಹಂಕಾರವಿಲ್ಲದಿದ್ದರೆ ಆಗ 'ಆ ಸಂಪೂರ್ಣತೆಯ' ಚಿಕ್ಕ ಭಾಗ ನಾನು ಎನ್ನುವದು ತಿಳಿಯುತ್ತಿತ್ತು. ಆದರೆ ನಿಮಗೆಲ್ಲರಿಗೂ ನಾನು ಇನ್ನೊಬ್ಬರಿಗಿಂತ ಬೇರೆ ಇದ್ದೇನೆ ಎನ್ನುವ ಅರಿವನ್ನು ತರಿಸುತ್ತಿರುವದೇ ಅಹಂಕಾರವಾಗಿದೆ. ಎಲ್ಲಿಯವರೆಗೂ ಈ ರೀತಿಯ ಅರಿವು ನಿಮ್ಮಲ್ಲಿ ಇರುತ್ತದೆಯೋ, ಅಲ್ಲಿಯವರೆಗೂ ನೀವು ಅಹಂಕಾರದಿಂದ ತುಂಬಿಕೊಂಡಿದ್ದೀರಿ ಎಂದೇ ಅರ್ಥವಾಗಿದೆ.

ಯಾವಾಗ ಎಲ್ಲವೂ ನಾನೇ ಎನ್ನುವದರ ಅರಿವು ಪ್ರಾರಂಭವಾಗುತ್ತದೆಯೋ ಮತ್ತು ಅಸ್ತಿತ್ವದಲ್ಲಿರುವ ಸಾವಿರಾರು ಬಿಂದುಗಳಲ್ಲಿ ನೀನೂ ಒಂದು ಬಿಂದು ಮತ್ತು ಅವೆಲ್ಲದರಲ್ಲಿಯೂ ನಾನೇ ಇದ್ದೇನೆ ಹಾಗೂ ಯಾವಾಗಲೂ ನಾನಿದ್ದೇನೆ, ಅಲ್ಲದೇ ಇವೆರಡರ ಮಧ್ಯದಲ್ಲಿ ಏನೂ ವ್ಯತ್ಯಾಸವಿಲ್ಲ ಎಂದು ಗೊತ್ತಾಗುತ್ತದೆಯೋ, ಆಗ ನೀವು ಅಹಂಕಾರದಿಂದ ಮುಕ್ತನಾಗಿರುವ ಸ್ಥಿತಿಯಲ್ಲಿ ಇರುತ್ತೀರಿ ಎಂದು ಹೇಳಬಹುದು.

"ಇದು ನಾನಲ್ಲ" ಎಂದು ಹೇಳಲು ಅಸಾಧ್ಯವಾದ ಸಮಯವೊಂದು ಬರುತ್ತದೆ, ಈರೀತಿಯಲ್ಲಿ ವ್ಯಕ್ತಪಡಿಸಿದರೂ ಸಹಿತ, ಎಲ್ಲವೂ ನಾನೇ, ನಾನೇ ಎಲ್ಲ ಅಥವಾ ನಾನೇ ದೈವ ಅಥವಾ ದೈವವೇ ನಾನು ಎನ್ನುವ ಏನೋ ಒಂದು ಉಳಿದುಕೊಂಡಿರುತ್ತದೆ.

ಆದರೆ ಒಂದು ಕ್ಷಣ ಬರುತ್ತದೆ, – ಇದು ಒಂದು ಕ್ಷಣಾರ್ಧದಲ್ಲಿಯೇ ಘಟಿಸುತ್ತದೆ ಮತ್ತು ಅದು ಬಹು ಕಾಲ ಇರುವದಿಲ್ಲ. ಯಾವಾಗ 'ಎಲ್ಲವೂ' ಯೋಚಿಸುತ್ತದೆಯೋ, ಆಗ ಆ 'ಎಲ್ಲವೂ' ತಿಳಿಯಲ್ಪಡುತ್ತದೆ. ಆ 'ಎಲ್ಲವೇ' ಭಾವಿಸುತ್ತದೆ ಕೂಡ. ಆ 'ಎಲ್ಲವೇ' ಬದುಕುತ್ತದೆ. ಈ ಸ್ಥಿತಿಗೆ ತಲುಪಿದ್ದೇನೆ ಎನ್ನುವ ಭಾವವೂ ಅಲ್ಲಿರುವದಿಲ್ಲ.

ಹೀಗಾದರೆ ಎಲ್ಲವೂ ಸರಿ, ಆದರೆ ಅಲ್ಲಿಯವರೆಗೆ ಅಹಂಕಾರದ ಒಂದು ಸಣ್ಣ ಅಂಶವು ಎಲ್ಲಿಯಾದರೂ ಇದ್ದೇ ಇರುತ್ತದೆ. ಸಾಮಾನ್ಯವಾಗಿ ಸಾಕ್ಷಿಯಾಗಿ ನೋಡುವ ಭಾವದಲ್ಲಿ ಇರುತ್ತದೆ.

ಹಾಗಾಗಿ ನನ್ನಲ್ಲಿ ಅಹಂಕಾರವಿಲ್ಲವೆಂದು ಹೇಳಬಾರದು. ಅದು ನಿಖರತೆಯನ್ನು ತೋರುವದಿಲ್ಲ. ನಾನು ಅಹಂಕಾರದಿಂದ ಮುಕ್ತನಾಗುವ ಮಾರ್ಗದಲ್ಲಿದ್ದೇನೆ ಎಂದು ಹೇಳಿರಿ, ಇದು ಹೇಳುವ ಸರಿಯಾದ ಮಾರ್ಗವಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/240–242**

**ಅಹಂಕಾರ ಮತ್ತು ಚೈತ್ಯ ಪುರುಷ**

'ಅಹಂಕಾರ ಮತ್ತು ಭೌತಿಕ ಪ್ರಜ್ಞೆಗಳು ನಾನಲ್ಲ' ಎಂದು ಹೇಳುತ್ತೀರಿ. ಈ ಸತ್ಯವನ್ನು ನಿಮ್ಮ ಆತ್ಮ ಮಾತ್ರ ಹೇಳಲು ಸಾಧ್ಯ. ನಿಶ್ಚಿತವಾಗಿಯೂ ನಿಮ್ಮ ಆತ್ಮವು ಅಹಂಕಾರ ಮತ್ತು ಭೌತಿಕ ಪ್ರಜ್ಞೆ ಅಲ್ಲ; ಆದರೆ ಮಾನಸಿಕ, ಪ್ರಾಣಿ ಭೌತಿಕ ಸತ್ತೆಗಳು ಅಹಂಕಾರದಿಂದ ರೂಪಿಸಲ್ಪಟ್ಟಿವೆ. ಇವುಗಳು ಅಹಂಕಾರದ ಮೂಲಕವೇ ತಮ್ಮನ್ನು ತಾವು ವ್ಯಕ್ತಪಡಿಸಿಕೊಳ್ಳುತ್ತವೆ. ಅಹಂಕಾರದ ಮೂಲಕವೇ ಬೇರೆಯವರೊಂದಿಗೆ ಸಂಪರ್ಕದಲ್ಲಿ ಬರುತ್ತವೆ ಅಲ್ಲದೇ ಆ ಸಂಪರ್ಕಕ್ಕೆ ಸ್ಪಂದಿಸುತ್ತವೆ.

ದೈವೀ ಹಸ್ತಕ್ಷೇಪವಿಲ್ಲದೇ ಅಹಂಕಾರದಿಂದ ಹೊರಬರುವದು ಅಸಾಧ್ಯದ ... ಕಷ್ಟದ ಕೆಲಸವಾಗಿದೆ.

ಅಹಂಕಾರವನ್ನು ನಾಶಮಾಡಲಾಗುವದಿಲ್ಲ, ಆದರೆ ಸತತ ಸಂಪೂರ್ಣವಾಗಿ ಅದರಿಂದ ಬೇರೆಯಾಗಿರಿಸಿಕೊಳ್ಳುವ ಮೂಲಕ ಅದನ್ನು ಮೀರಬಹುದು. ನಾನು ಹೇಳುತ್ತಿರುವ 'ತಯಾರಿ' ಇದೇ ಆಗಿದೆ.

ನಾನು ನಿಮಗೆ ಸಂಪೂರ್ಣವಾಗಿ ಅರ್ಥಮಾಡಿಸಬೇಕೆಂದರೆ, ಇನ್ನೂ ಹೆಚ್ಚಿನ ವಿವರಣೆಯನ್ನು ಕೊಡುತ್ತೇನೆ. ಸಾವಿರಾರು ಜನ್ಮಗಳ ಮೂಲಕ ಮನುಷ್ಯ ಪ್ರಜ್ಞೆಯ ಎಲ್ಲಾ ಅಂಶಗಳೂ ಅವನ ಆತ್ಮದ ರೂಪದ ಸುತ್ತಲೂ ಸೇರಿ ತಮ್ಮನ್ನು ಸಂಘಟಿಸಿಕೊಂಡಿರುತ್ತವೆ. ಇದನ್ನೇ ಚೈತ್ಯ ಪುರುಷ ಎನ್ನುವದು. ಈ ಚೈತ್ಯ ಪುರುಷ ಸರಿಯಾಗಿ ರೂಪಿಸಲ್ಪಟ್ಟಾಗ ಮಾತ್ರ, 'ಅವನು' ಆತ್ಮ ಮತ್ತು ಭೌತಿಕ ಸತ್ತೆಯ ನಡುವೆ ಪ್ರಜ್ಞಾಪೂರ್ವಕವಾಗಿರುವ ಮಧ್ಯವರ್ತಿಯಾಗಿರುತ್ತಾನೆ.

ಚೈತ್ಯ ಪುರುಷನು ಈ ಮುಕ್ತತೆಯನ್ನು ಪಡೆದಾಗ, ಅಹಂಕಾರ ಮತ್ತು ಭೌತಿಕ ಪ್ರಜ್ಞೆ ಕೇವಲ ವಿಶ್ವಾತ್ಮಕ ಪ್ರಕೃತಿಯ ಬಹಿರಂಗದ ಚಲನವಲನಗಳೆಂದು ತೋರುತ್ತವೆ, ಅವು ತನಗೆ ಪರಕೀಯದಂತೆ ಕಾಣುತ್ತದೆ; ಆಗ ಚಲನವಲನಗಳು ಚೈತ್ಯ ಪುರುಷನಿಗೆ ಯಾವುದೇ ರೀತಿಯಲ್ಲಿ ಪರಿಣಾಮ ಬೀರುವದಿಲ್ಲ.

**– ಶ್ರೀಮಾತೆ, ಶ್ವೇತ ಗುಲಾಬಿ: 23–24**

## 'ಅಹಂ'ದ ಸ್ವರೂಪಗಳು

'ಅಹಂ'ಕಾರದ ಅನೇಕ ರೂಪಗಳು

ಒಬ್ಬರೊಳಗೆ ಅನೇಕ ಅಹಂಕಾರಗಳಿರುತ್ತವೆ. ಅವುಗಳನ್ನು ನಾಶ ಮಾಡಲು ಆರಂಭಿಸಿದಾಗ ಅವುಗಳ ಅರಿವು ಬರುತ್ತದೆ; ಒಂದು ಅಹಂಕಾರವನ್ನು ನಾಶ ಮಾಡಿದಾಗ, ಯಾವುದು ನಮಗೆ ಬಹಳ ತೊಂದರೆ ಕೊಡುತ್ತಿತ್ತೋ, ಸಾಮಾನ್ಯವಾಗಿ ಅದು ಅಂತರಂಗದಲ್ಲಿ ಒಂದು ಬಿರುಗಾಳಿಯನ್ನೇ ಸೃಷ್ಟಿಸುತ್ತಿರುತ್ತದೆ. ಈ ಬಿರುಗಾಳಿಯಿಂದ ಹೊರಗೆ ಬಂದಾಗ, "ಓಹ್, ಈಗ ಇದು ಮುಗಿಯಿತು, ಎಲ್ಲವೂ ಮಾಡಲ್ಪಟ್ಟಿದೆ. ನನ್ನ ಒಳಗಿರುವ ವೈರಿಯನ್ನು ನಾಶ ಮಾಡಿದ್ದೇನೆ, ಎಲ್ಲವೂ ಮುಗಿದುಹೋಗಿದೆ" ಎಂದು ನನಗನಿಸುತ್ತದೆ. ಆದರೆ ಸ್ವಲ್ಪ ಸಮಯದ ನಂತರ ನನ್ನಲ್ಲಿ ಇನ್ನೊಂದು ಅಹಂಕಾರವು ಇದೆ ಎಂದು ಗುರುತಾಗುತ್ತದೆ. ನಂತರ ನಾವು ಸಣ್ಣ ಸಣ್ಣ ಅಹಂಕಾರಗಳ ರಾಶಿಯಿಂದಲೇ ಮಾಡಲ್ಪಟ್ಟಿದ್ದೇವೆ ಮತ್ತು ಅವೆಲ್ಲವೂ ಸಂಪೂರ್ಣವಾಗಿ ಉಪದ್ರವಗಳೇ ಆಗಿವೆ ಮತ್ತು ಅವುಗಳೆಲ್ಲವನ್ನೂ ಒಂದಾದ ಮೇಲೆ ಒಂದರಂತೆ ಹೊರಹಾಕಿ ಸಾಗಬೇಕಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 7/11**

**ಅಹಂಕಾರದ ವಿಸ್ತರಣೆ**

ಒಂದು ಕೌಟುಂಬಿಕ ಅಹಂಕಾರವಿರುತ್ತದೆ, ಮತ್ತು ಇದು ಬಹುತೇಕವಾಗಿ ಆಸಕ್ತಿಪೂರ್ಣವೂ ಆಗಿದೆ. ಏಕೆಂದರೆ ಈ ಕೌಟುಂಬಿಕ ಅಹಂಕಾರವೇ ಕುಟುಂಬದ ಎಲ್ಲ ಸದಸ್ಯರನ್ನು ಒಂದು ಅಥವಾ ಇನ್ನೊಂದು ರೀತಿಯಲ್ಲಿ ಒಂದೇ ಎಂದು ತೋರಿಸುತ್ತಿರುತ್ತದೆ; ಅವರು ಒಂದೇ ಆಗಿರುವದಿಲ್ಲ. ಆದರೆ ಒಂದೇ ಎನ್ನುವಂತೆ ಕಾಣುತ್ತಿರುತ್ತಾರೆ. ಅವರು ಒಂದೇ ಕುಟುಂಬಕ್ಕೆ ಸೇರಿರುತ್ತಾರೆ ಮತ್ತು ನಾವು ಅವರ ಪೂರ್ವಜರ ಬಗೆಗೆ ತಿಳಿದುಕೊಂಡಾಗ, ಅಲ್ಲಿಂದ ಇಲ್ಲಿಯವರೆಗೂ ಏನೋ ಒಂದು ಏಕರೂಪತೆಯನ್ನು ಕಾಣಬಹುದು. ಸರಿ, ವೈಯಕ್ತಿಕ ಅಹಂಕಾರಕ್ಕಿಂತಲೂ, ಕೌಟುಂಬಿಕ ಅಹಂಕಾರವು ದೀರ್ಘವಾಗಿ ಉಳಿದಿರುತ್ತದೆ, ಮತ್ತು ಇದು ಒಂದು ರಾಷ್ಟ್ರೀಯ ಅಹಂಕಾರವಾಗಿಯೂ ಇರುತ್ತದೆ. ಕುಟುಂಬಗಳು ಬೇರೆಯವರ ಜೊತೆ ಕಲಬೆರಕೆಯಾಗದೆ ಉಳಿದಾಗ– ಉದಾಹರಣೆಗೆ– ಯುರೋಪಿನ ಶ್ರೀಮಂತರ ಸಮಯದಲ್ಲಿ ಅವರು ಬೇರೆಯವರೊಡನೆ ಸೇರುತ್ತಿರಲಿಲ್ಲ. ಅವರು ಒಂದೇ ವಂಶಾವಳಿಯನ್ನು ಹೊಂದಿದ್ದರು. ಹೀಗಾಗಿ ಅವರ ಅಹಂಕಾರದ ಗುಣಗಳು ಬಹಳ ಸ್ಪಷ್ಟವಾಗಿರುತ್ತವೆ. ಉದಾಹರಣೆಗೆ ಹೇಳುವದಾದರೆ ಬೋರಮನ್ ಕುಟುಂಬಗಳು, ಫ್ರಾನ್ಸ್‌ನ ಕೆಲವು ಕುಟುಂಬಗಳು ಹೀಗೆ ಇದ್ದವು. ಅವರು ನೋಡಲೂ ಅಡಿಯಿಂದ ಮುಡಿಯವರೆಗೂ ಒಂದೇ ರೀತಿಯಂತೆ ಕಾಣುತ್ತಿದ್ದರು. ಸಹಜವಾಗಿ, ಜನಾಂಗಗಳು, ಪ್ರಭೇದಗಳು, ರಾಷ್ಟ್ರೀಯತೆಗಳು ಸಂಕರವಾದಾಗ (ಮಿಶ್ರಣಗೊಂಡಾಗ) ಅಹಂಕಾರದ ಸಂಕರವನ್ನು ಸೃಷ್ಟಿ ಮಾಡುತ್ತದೆ. ಇದರಿಂದಾಗಿ ದಿಗಂತವೂ ವಿಶಾಲಗೊಳ್ಳಲು ಪ್ರಾರಂಭಿಸುತ್ತದೆ. ಇದು ಹೇಗೆ ಎಂದರೆ, ನಾವು ನಮ್ಮ ಮನಸ್ಸನ್ನು ವಿಶಾಲಗೊಳಿಸಲು ಯತ್ನಿಸಿದಾಗ, ಅನೇಕ ವಿಷಯಗಳನ್ನು ಅರ್ಥಮಾಡಿಕೊಳ್ಳಲು ಯತ್ನಿಸಿದಾಗ, ಅನೇಕ ಭಾಷೆಗಳನ್ನು ಅರಿತುಕೊಳ್ಳಲು ಅಭ್ಯಸಿಸತೊಡಗಿದಾಗ, ಅನೇಕ ದೇಶಗಳ ಮತ್ತು ಯುಗಗಳ ಜ್ಞಾನವನ್ನು ಪಡೆದುಕೊಂಡಾಗ 'ಅಹಂಕಾರವು' ವಿಶಾಲಗೊಳ್ಳುತ್ತದೆ. ಅವನಲ್ಲಿಯ ಸಂಕುಚಿತ ಮನೋಭಾವ ಕಡಿಮೆಯಾಗುತ್ತದೆ. ಸಹಜವಾಗಿ, ಯೋಗದ ಮೂಲಕ ಇದೆಲ್ಲದರಿಂದ ಪ್ರಜ್ಞಾಪೂರ್ವಕವಾಗಿ ಮುಕ್ತಗೊಳ್ಳಬಹುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 7/12–13**

# ‘ಅಹಂ’ಕಾರದ ವಿಘಟನೆ

**– ಅನು: ಡಾ॥ ಮಹಾದೇವ ಸಕ್ರಿ, ವಿಜಯಪುರ**

**ಮನೋಭಾವದ ಬದಲಾವಣೆ**

*ನಾನು, ನನ್ನದು, ನನ್ನಿಂದ ... ಎಂಬ ಭಾವದಿಂದ (ಅಹಂಕಾರದಿಂದ) ಹೊರಬರಲು ನಾವು ಯಾವ ಮನೋಭಾವವನ್ನು ಹೊಂದಬೇಕು?*

ಮನೋಭಾವ? ಅದೊಂದು ಬಯಕೆ, ಅಲ್ಲವೇ? ನೀವು ಅದನ್ನು ಬಯಸಬೇಕು.... ನಾವು ಏನು ಮಾಡಬೇಕು, ಎನ್ನುವುದನ್ನು ನೀವು ಕೇಳುತ್ತಿದ್ದೀರಾ?

ಅದಕ್ಕೆ ಅತ್ಯಂತ ಖಚಿತವಾದ ಮಾರ್ಗವೆಂದರೆ ನಿಮ್ಮನ್ನು ನೀವು ಆ ಭಗವಂತನಿಗೆ ಒಪ್ಪಿಸಿಕೊಳ್ಳುವುದು; ಭಗವಂತನನ್ನು ನಿಮ್ಮ ಕಡೆಗೆ ಎಳೆಯಲು ಪ್ರಯತ್ನಿಸದೆ ನಿಮ್ಮನ್ನು ನೀವು ಆ ಭಗವಂತನಿಗೆ ಒಪ್ಪಿಸಿಕೊಳ್ಳಲು ಪ್ರಯತ್ನಿಸುವುದು. ಆಗ, ಕನಿಷ್ಠ ಪಕ್ಷ ಶುರುವಾತಿಗೆ, ನೀವು ನಿಮ್ಮೊಳಗಿಂದ (ನಾನು ಎಂಬ ಭಾವದಿಂದ) ಕೊಂಚವಾದರೂ ಹೊರಬರಲು ಬದ್ಧರಾಗುವಿರಿ. ನೋಡಿ, ಸಾಮಾನ್ಯವಾಗಿ, ಜನರು ದೇವರ ಬಗ್ಗೆ ಯೋಚಿಸಿದಾಗ, ಅವರು ಮಾಡುವ ಮೊದಲ ಕೆಲಸವೆಂದರೆ, ಅವರು ತಮ್ಮೊಳಗೆ (ದೇವರನ್ನು) ಸಾಧ್ಯವಾದಷ್ಟು ಹೆಚ್ಚು "ಸೆಳೆದುಕೊಳ್ಳುವುದು". ಆಮೇಲೆ, ಸಾಮಾನ್ಯವಾಗಿ, ಅವರಿಗೆ ಏನೂ ಸಿಗುವುದಿಲ್ಲ. "ಆಹ್! ನಾನು ಕೂಗಿದೆ, ನಾನು ಪ್ರಾರ್ಥಿಸಿದೆ ಆದರೆ ನನಗೆ ಯಾವುದೇ ಉತ್ತರ ಸಿಗಲಿಲ್ಲ, ಎಂದು ಅವರು ನಿಮಗೆ ಹೇಳುತ್ತಾರೆ. ನನಗೆ ಯಾವುದೇ ಉತ್ತರ ಸಿಗಲಿಲ್ಲ, ಏನೂ ಬರಲಿಲ್ಲ." ಆದರೆ, "ನಿಮ್ಮನ್ನು ನೀವು ಒಪ್ಪಿಸಿಕೊಂಡಿರಾ?" ಎಂದು ಕೇಳಿದಾಗ — "ಇಲ್ಲ, ನಾನು ಸೆಳೆದೆ." — "ಆಹ್, ಹೌದು, ಅದಕ್ಕೇ ಅದು ಬರಲಿಲ್ಲ!" ಅದು ಬರಲಿಲ್ಲವೆಂದಲ್ಲ, ನೀವು ಎಳೆದಾಗ, ನೀವು ನಿಮ್ಮ ನಾನು ಎಂಬ ಭಾವದಲ್ಲಿ ಎಷ್ಟು ಹುದುಗಿ ಹೋಗಿರುತ್ತೀರಿ ಎಂದರೆ, ನಾನು ಈಗ ತಾನೆ ಹೇಳಿದಂತೆ, ಅದು ನೀವು ಪಡೆದುಕೊಳ್ಳಬೇಕಾಗಿದ್ದರೆ ಮತ್ತು ನಿಮ್ಮ ನಡುವೆ ಒಂದು ಗೋಡೆಯನ್ನು ನಿರ್ಮಿಸುತ್ತದೆ. ನಿಮ್ಮನ್ನು ನೀವೇ ಬಂದೀಖಾನೆಯಲ್ಲಿ ಹಾಕಿಕೊಂಡು, ನಂತರ ನಿಮ್ಮ ಬಂದೀಖಾನೆಯಲ್ಲಿ ನೀವು ಏನನ್ನೂ ಅನುಭವಿಸಲಿಲ್ಲ ಎಂದು ಆಶ್ಚರ್ಯ ಪಡುತ್ತೀರಿ. ಒಂದು ಬಂದೀಖಾನೆ, ಮತ್ತು ಅದಕ್ಕಿಂತ ಕೆಟ್ಟದ್ದು: ರಸ್ತೆಯ ಕಡೆ ಯಾವುದೇ ಕಿಟಕಿಗಳಿಲ್ಲದ್ದು.

ಹೊರ ಬನ್ನಿ, ಮುಕ್ತರಾಗಿ, (ಶ್ರೀಮಾತೆಯವರು ತಮ್ಮ ಕೈಗಳನ್ನು ಹೊರ ಚಾಚುತ್ತಾರೆ), ಏನನ್ನೂ ಹಿಡಿದಿಟ್ಟುಕೊಳ್ಳದೆ ನಿಮ್ಮನ್ನು ನೀವು ಒಪ್ಪಿಸಿಕೊಳ್ಳಿ, ಕೇವಲ ನಿಮ್ಮನ್ನು ನೀವು ಒಪ್ಪಿಸಿಕೊಳ್ಳುವ ಆನಂದಕ್ಕಾಗಿ. ಆಗ ನೀವು ಏನನ್ನಾದರೂ ಅನುಭವಿಸುವ ಒಂದು ಅವಕಾಶವಿರುತ್ತದೆ.

ಆದರೆ ನಾವು ಅನುಭವಿಸಲು ಪ್ರಯತ್ನಿಸಿದರೆ...

ಯಾರಾದರೂ ಅನುಭವಿಸಲು ಪ್ರಯತ್ನಿಸಿದರೆ, ಅಂದರೆ? ಅನುಭವಿಸಲು ಪ್ರಯತ್ನಿಸುತ್ತಿರುವುದು, ಇದೂ ಕೂಡ ಒಂದು ಅಹಂಕಾರವಲ್ಲವೇ?... ಇನ್ನೂ ಅಹಂಕಾರದಿಂದ ತುಂಬಿದ ನಾವು, ಅಹಂಕಾರದಿಂದ ಹೊರ ಬರಲು ಬಯಸಿದರೆ, ಅದು ತುಂಬಾ ಕಷ್ಟಕರ ಕೆಲಸ, ಅಲ್ಲವೇ? ಇವೆರಡೂ ಸಂಗತಿಗಳು ಪರಸ್ಪರ ವಿರೋಧಾತ್ಮಕವಾಗಿವೆ.

"ಅನುಭವಿಸಲು ಪ್ರಯತ್ನಿಸಿ" – ಯಾಕೆ? ನಿಮ್ಮ ಸ್ವಂತ ತೃಪ್ತಿಗಾಗಿ?

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/137–38**

*ನಾವು ಅಸ್ತಿತ್ವದಲ್ಲಿ ಇಲ್ಲ, ಅಸ್ತಿತ್ವದಲ್ಲಿರುವುದು ದೇವರು ಮಾತ್ರ ಎಂಬ ಅನಿಸಿಕೆಯನ್ನು ಯಾರಾದರೂ ಹೊಂದಲು ಪ್ರಯತ್ನಿಸಿದರೆ, ಅದು ನಾನು ಎನ್ನುವ ಭಾವದಿಂದ ಹೊರಬರುವ ಒಂದು ಮಾರ್ಗವೆ?*

ನಾವು ಅಸ್ತಿತ್ವದಲ್ಲಿ ಇಲ್ಲವೇ? ನಾವು ಮಾನಸಿಕವಾಗಿ ಪ್ರಯತ್ನಿಸುವ ಮೂಲಕ ಯಾವುದರಲ್ಲಾದರೂ ಯಶಸ್ವಿಯಾಗಬಹುದೇ ಎಂದು ನನಗೆ ಗೊತ್ತಿಲ್ಲ, ಏಕೆಂದರೆ ಇದು ಒಂದು ರೀತಿಯ ಮಾನಸಿಕ ಪ್ರಯತ್ನವಾಗಿದೆ. ಆದ್ದರಿಂದ ನಾವು ಮಾನಸಿಕ ರಚನೆಗಳನ್ನು ಮಾಡುತ್ತೇವೆ ಮತ್ತು ಅಂತಹದನ್ನೇನೂ ಸಾಧಿಸುವುದಿಲ್ಲ. ಇಲ್ಲ, ಅಗತ್ಯವಾದದ್ದು ಏನೆಂದರೆ, ಏನೋ ಒಂದು ಸ್ವಾಭಾವಿಕವಾದ್ದು, ತೀವ್ರವಾದದ್ದು, ಪುರುಷನಲ್ಲಿ ಉರಿಯುತ್ತಿರುವ ಒಂದು ಜ್ಯೋತಿ, ಅಭೀಪ್ಸೆಯ ಒಂದು ಜ್ಯೋತಿ, ಏನೋ ಒಂದು ...ಅದನ್ನು ಹೇಗೆ ಹೇಳಬೇಕೆಂದು ನನಗೆ ಗೊತ್ತಿಲ್ಲ.

ಒಂದು ವೇಳೆ ಆ ವಿಷಯ ತಲೆಯಲ್ಲಿ ಮುಂದುವರೆದರೆ, ಏನೂ, ಏನೂ ನಡೆಯೋದಿಲ್ಲ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/138**

**ಅಹಂಕಾರದ (ನಾನು ಎನ್ನುವ) ಗಂಟನ್ನು ಕತ್ತರಿಸುವುದು**

*ಪ್ರೀತಿಯ ಮಾತೆಯವರೆ, ನಾವು ಅಹಂಕಾರದ ಗಂಟನ್ನು ಹೇಗೆ ಕತ್ತರಿಸಬಹುದು?*

ಅದನ್ನು ಹೇಗೆ ಕತ್ತರಿಸುವುದು? ನಾವು ಅದರ ಬಗ್ಗೆ ಅರಿವನ್ನು ಹೊಂದಿದಾಗ, ಒಂದು ಕತ್ತಿಯನ್ನು ತೆಗೆದುಕೊ, ಅದನ್ನು ಕತ್ತರಿಸಿಬಿಡು (ನಗು). ಸಾಮಾನ್ಯವಾಗಿ, ಅದರ ಅರಿವು ನಮಗಿರುವುದಿಲ್ಲ; ನಮಗೆ ಏನಾಗುತ್ತದೆಯೋ ಅದು ಸಾಮಾನ್ಯ ಎಂದು ನಾವು ಭಾವಿಸುತ್ತೇವೆ; ವಾಸ್ತವವಾಗಿ ಅದು ತುಂಬಾ ಸಾಮಾನ್ಯ, ಆದರೆ ನಾವು ಅದನ್ನು ಒಳ್ಳೆಯದೆಂದೂ ಸಹ ಭಾವಿಸುತ್ತೇವೆ. ಮೊದಲಿಗೆ, ನಮ್ಮನ್ನು ಬಂಧನದಲ್ಲಿ ಹಿಡಿದಿರುವ ಈ ಎಲ್ಲಾ ಗಂಟುಗಳಲ್ಲಿ ನಾವು ಸಿಲುಕಿಕೊಂಡಿದ್ದೇವೆ ಎಂಬುದನ್ನು ಅರಿಯಲು ಒಂದು ಅದ್ಭುತವಾದ ಸ್ಪಷ್ಟ–ದೃಷ್ಟಿಯನ್ನು ನಾವು ಹೊಂದಿರಬೇಕು. ನಂತರ, ಪೂರ್ತಿ ಬಿಗಿಯಾಗಿ ಮುಚ್ಚಲ್ಪಟ್ಟಿರುವ ಯಾವುದೋ ಸಂಗತಿಯು ಅಲ್ಲಿರುವುದೆಂಬ ಅರಿವು ನಮಗಾದಾಗ — ಎಷ್ಟು ಬಿಗಿ ಎಂದರೆ, ಅದನ್ನು ಚಲಿಸಲು ಪ್ರಯತ್ನ ಮಾಡಿದರೂ ನಾವು ವಿಫಲರಾಗಿದ್ದೇವೆ — ಆಗ ನಾವು ನಮ್ಮ ಇಚ್ಛೆಯನ್ನು ಬಹಳ ಹರಿತವಾದ ಕತ್ತಿಯ ಅಲಗೆಂದು ಕಲ್ಪಿಸಿಕೊಳ್ಳೀವಿ, ಮತ್ತು ನಮ್ಮ ಎಲ್ಲಾ ಶಕ್ತಿಯೊಂದಿಗೆ ಈ ಗಂಟಿನ ಮೇಲೆ ಒಂದು ಪೆಟ್ಟು ಕೊಡುತ್ತೇವೆ (ಕಲ್ಪನೆಯಲ್ಲಿ ಮಾತ್ರ, ನಿಜವಾಗಿ ಖಡ್ಗವನ್ನು ತೆಗೆದುಕೊಳ್ಳುವುದಿಲ್ಲ), ಮತ್ತು ಇದು ಒಂದು ಫಲಿತಾಂಶವನ್ನು ತರುತ್ತದೆ. ಸಜಹವಾಗಿ, ಈ ಗಂಟನ್ನು ನಿರ್ಮಾಣ ಮಾಡಿರುವ ಎಲ್ಲಾ ತತ್ತ್ವಗಳನ್ನು, ನಿಮ್ಮನ್ನು ಬಿಗಿಯಾಗಿ ಬಂಧಿಸಿಡುವ ಎಲ್ಲಾ ಪ್ರತಿರೋಧಗಳನ್ನು, ಅಭ್ಯಾಸಗಳನ್ನು, ಆದ್ಯತೆಗಳನ್ನು ಎಲ್ಲವನ್ನೂ ಪತ್ತೆ ಮಾಡುತ್ತ ಮನೋವೈಜ್ಞಾನಿಕ ದೃಷ್ಟಿಕೋನದಿಂದ ನೀವು ಈ ಕೆಲಸವನ್ನು ಮಾಡಬಹುದು. ಹೀಗೆ, ಇದರ ಬಗ್ಗೆ ನೀವು ಅರಿವನ್ನು ಪಡೆದಾಗ, ನೀವು ಏಕಾಗ್ರವಾಗಿ ದೈವೀ ಶಕ್ತಿಯನ್ನು ಹಾಗೂ ದೈವೀ ಅನುಗ್ರಹವನ್ನು ಕರೆದು ಈ ರಚನೆಯ ಮೇಲೆ, ಅಂದರೆ ಅವುಗಳನ್ನು ಯಾವುದೂ ಬೇರ್ಪಡಿಸಲಾಗದಂತ ಬಿಗಿಯಾಗಿ ಹಿಡಿಯಲ್ಪಟ್ಟ ಈ ವಿಷಯಗಳ ಮೇಲೆ ಒಂದು ಉತ್ತಮವಾದ ಪೆಟ್ಟನ್ನು ಕೊಡಬಹದು. ಆ ಕ್ಷಣದಲ್ಲಿ, ನೀವು ಇನ್ನೆಂದೂ ಈ ಸಂಗತಿಗಳಿಗೆ ಕಿವಿಗೊಡುವುದಿಲ್ಲವೆಂದು, ದೈವೀ ಪ್ರಜ್ಞೆಯನ್ನು ಮಾತ್ರ ಕೇಳುವಿರೆಂದು ಮತ್ತು ವೈಯಕ್ತಿಕ ಫಲಿತಾಂಶಗಳ ಬಗ್ಗೆ ಚಿಂತಿಸದೆ, ಎಲ್ಲ ಬಂಧನದಿಂದ ಮುಕ್ತವಾಗಿ, ಎಲ್ಲ ಆದ್ಯತೆಯಿಂದ ಮುಕ್ತವಾಗಿ, ಯಶಸ್ಸಿಗಾಗಿ,

ಅಧಿಕಾರಕ್ಕಾಗಿ, ತೃಪ್ತಿಗಾಗಿ, ಪ್ರತಿಷ್ಠೆಗಾಗಿ ಎಲ್ಲ ಬಯಕೆಯಿಂದ ಮುಕ್ತವಾಗಿ ದೈವೀ ಕಾರ್ಯವನ್ನಲ್ಲದೆ ಬೇರೆ ಯಾವುದೇ ಕೆಲಸವನ್ನು ಮಾಡುವುದಿಲ್ಲವೆಂದು ತೀರ್ಮಾನಿಬೇಕು... ಇದೆಲ್ಲವೂ ಮಾಯವಾಗಬೇಕು ಮತ್ತು ನಿಮ್ಮ ಬಯಕೆಯಲ್ಲಿ ದೈವೀ ಇಚ್ಛೆಯು ಅವತರಿಸುವುದನ್ನು ಹಾಗೂ ನೀವು ಕಾರ್ಯಶೀಲವಾಗುವುದನ್ನು ಮಾತ್ರ ನೀವು ಕಾಣಬೇಕು. ಆಗ, ನೀವು ಈ ರೀತಿಯಲ್ಲಿ ಗುಣಮುಖರಾಗುವಿರಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/390–91**

**ವೀಕ್ಷಕನ ಅಹಂಕಾರ**

*ಶ್ರೀಮಾತೆಯವರೆ, ನಾವೊಂದು ಪ್ರಯತ್ನವನ್ನು ಮಾಡಿದಾಗ, ಸ್ವಯಂ-ತೃಪ್ತವಾಗುವ ಹಾಗೂ ಬಡಾಯಿ ಕೊಚ್ಚಿಕೊಳ್ಳುವ ಮತ್ತು ಈ ಪ್ರಯತ್ನದಿಂದ ಸಂತೃಪ್ತವಾಗುವ ಯಾವದೋ ಒಂದು ಸಂಗತಿ ನಮ್ಮಲ್ಲಿದೆ, ಅದು ಎಲ್ಲವನ್ನೂ ಹಾಳು ಮಾಡುತ್ತದೆ. ಹಾಗಿದ್ದರೆ, ನಾವು ಇದನ್ನು ತೊಡೆದುಹಾಕುವುದು ಹೇಗೆ?*

ಅಹ್, ಅದು ಏನು ಮಾಡ್ತಾ ಇದೆ ಅನ್ನೋದನ್ನ ನೋಡ್ತಾ ಇದೆ! ನಾವು ಏನನ್ನಾದರೂ ಮಾಡುತ್ತಿರುವಾಗ ಅದನ್ನು ವೀಕ್ಷಿಸುವವ ಯಾರೋ ಒಬ್ಬನು ಯಾವಾಗಲೂ ಅಲ್ಲಿರುತ್ತಾನೆ. ಕೆಲವೊಮ್ಮೆ, ಅವನು ಹೆಮ್ಮೆ ಪಡುತ್ತಾನೆ. ನಿಸ್ಸಂಶಯವಾಗಿ, ಇದು ಪ್ರಯತ್ನದಿಂದ ಬಹಳಷ್ಟು ಬಲವನ್ನು ತೆಗೆದುಹಾಕುತ್ತದೆ. ನಾನು ಅದನ್ನು ಈ ರೀತಿಯಾಗಿ ಭಾವಿಸುತ್ತೇನೆ: ಅದು ನಮ್ಮ ಸ್ವಂತ ನಡವಳಿಕೆಯನ್ನು ನೋಡುವ, ನಮ್ಮ ಜೀವನವನ್ನು ನೋಡುವ ಅಭ್ಯಾಸವಾಗಿದೆ. ನಮ್ಮನ್ನು ನಾವೇ ಗಮನಿಸುವುದು ಅಗತ್ಯವಾಗಿದೆ ಆದರೆ ನಾವು ಮಾಡೋದ್ರಲ್ಲಿ ಸಂಪೂರ್ಣ ಪ್ರಾಮಾಣಿಕ ಮತ್ತು ಸಹಜವಾಗಿರಲು ಪ್ರಯತ್ನಿಸೋದು ಇನ್ನೂ ಹೆಚ್ಚು ಅಗತ್ಯವಾಗಿದೆ ಎಂದು ನಾನು ಅನ್ಕೊಳ್ತೀನಿ,: ಯಾವಾಗಲೂ ನಮ್ಮನ್ನು ನಾವೇ ಗಮನಿಸಿಕೊಳ್ತಾ, ನಾವು ಮಾಡ್ತಿರೋದನ್ನ ನೋಡ್ತಾ, ನಮ್ಮನ್ನು ನಾವೇ ವಿಮರ್ಶೆ ಮಾಡ್ಕೊಳ್ತಾ (ಕೆಲವೊಮ್ಮೆ ಬಹಳ ಕಠೋರವಾಗಿ) ಮುಂದುವರೆಯಬಾರದು. ವಾಸ್ತವವಾಗಿ, ಇದು, ತೃಪ್ತಿಯಿಂದ ತನ್ನ ಬೆನ್ನನ್ನು ತಾನೆ ಚಪ್ಪರಿಸಿಕೊಂಡಷ್ಟೇ ಕೆಟ್ಟದ್ದು, ಎರಡೂ ಅಷ್ಟೇ ಕೆಟ್ಟದ್ದಾಗಿವೆ. ನಾವು ನಮ್ಮ ಅಭೀಪ್ಸೆಯಲ್ಲಿ ಎಷ್ಟು ಪ್ರಾಮಾಣಿಕರಾಗಿರಬೇಕೆಂದರೆ ನಾವು ಅಭೀಪ್ಸೆ ಪಡುತ್ತಿದ್ದೇವೆ ಎನ್ನುವುದೂ ಸಹ

ನಮಗೆ ತಿಳಿಯಬಾರದು. ಇದನ್ನು ನಿಜವಾಗಿಯೂ ಅರಿತುಕೊಂಡಾಗ, ನಾವು ನಿಜವಾಗಿಯೂ ಅಸಾಧಾರಣ ಶಕ್ತಿಯೊಂದನ್ನು ಪಡೆದುಕೊಳ್ಳುತ್ತೇವೆ.

ಒಂದು ಕ್ಷಣ, ಇದರ ಒಂದು ಕ್ಷಣ, ಮತ್ತು ನೀವು ವರ್ಷಗಳ ಸಾಕ್ಷಾತ್ಕಾರಕ್ಕೆ ತಯಾರಿ ಮಾಡಬಹುದು. ಯಾವಾಗ ನಾವು ನಮ್ಮ ಬಗ್ಗೆ ಮಾತ್ರ ಯೋಚಿಸುವ ವ್ಯಕ್ತಿಯಾಗಿರುವುದಿಲ್ಲವೋ, ತನ್ನ ಕ್ರಿಯೆಗಳನ್ನು ನೋಡುತ್ತಾ ಇರುವ ಅಹಂ ಆಗಿರುವುದಿಲ್ಲವೋ, ಯಾವಾಗ ನಾವು ಕ್ರಿಯೆಯೇ ಆಗಿಬಿಡುತ್ತೇವೆಯೋ, ಮುಖ್ಯವಾಗಿ ಆಕಾಂಕ್ಷೆಯಲ್ಲಿ, ಇದು ನಿಜವಾಗಿಯೂ ಒಳ್ಳೆಯ ಸಂಗತಿ. ಯಾವಾಗ ಅಭೀಪ್ಸೆ ಪಡುವಂಥ ವ್ಯಕ್ತಿಯೇ ಇರುವುದಿಲ್ಲವೋ, ಯಾವಾಗ ಅದು ಪೂರ್ಣ ಏಕಾಗ್ರತೆಯ ಪ್ರೇರಣೆಯೊಂದಿಗೆ ಮೇಲಕ್ಕೆ ನೆಗೆಯುವ ಆಕಾಂಕ್ಷೆಯಾಗಿರುತ್ತದೆಯೋ, ಆಗ ಅದು ನಿಜವಾಗಿಯೂ ತುಂಬಾ ದೂರ ಹೋಗುತ್ತದೆ. ಇಲ್ಲದಿದ್ದರೆ, ಸ್ವಲ್ಪ ದುರಭಿಮಾನ, ಸ್ವಲ್ಪ ಸ್ವಯಂ–ಸಂತೃಪ್ತಿ, ಸ್ವಲ್ಪ ಸ್ವಯಂ–ಕರುಣೆ, ಬಂದು ಎಲ್ಲವನ್ನೂ ಹಾಳು ಮಾಡುವಂಥ ಎಲ್ಲಾ ರೀತಿಯ ಚಿಕ್ಕ ಚಿಕ್ಕ ವಿಷಯಗಳು ಕೂಡ ಅದರಲ್ಲಿ ಯಾವಾಗಲೂ ಬೆರೆತುಕೊಂಡಿರುತ್ತವೆ. ಆದರೆ ಇದು ಕಷ್ಟ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/402**

**ಅಹಂಕಾರವನ್ನು ತೆಗೆದುಹಾಕುವುದು**

*ಪ್ರೀತಿಯ ಮಾತೆಯವರೆ, ಅಹಂಕಾರದ ಬಯಕೆಯನ್ನು ನಾವು ಹೇಗೆ ತೆಗೆದುಹಾಕಬಹುದು?*

ಇದು, ನಾವು ಅಹಂಕಾರವನ್ನು ಹೇಗೆ ತೆಗೆದುಹಾಕಬಹುದು ಎಂದು ಕೇಳುವ ಹಾಗಿದೆ. ಅದನ್ನು ಯೋಗದ ಮೂಲಕ ಮಾತ್ರ ಮಾಡಲು ಸಾಧ್ಯವಿದೆ. ಮಾನವ ಕುಲದ ಆಧ್ಯಾತ್ಮಿಕ ಇತಿಹಾಸದುದ್ದಕ್ಕೂ, ಅನೇಕ ಯೋಗ ವಿಧಾನಗಳು ಇದ್ದವು—ಅವುಗಳನ್ನು ಶ್ರೀ ಅರವಿಂದರು ಅವರ ಯೋಗ ಸಮನ್ವಯ ಗ್ರಂಥದಲ್ಲಿ (The Synthesis of Yoga) ನಮಗೆ ವರ್ಣಿಸಿದ್ದಾರೆ ಮತ್ತು ಅದರ ಬಗ್ಗೆ ಸ್ಪಷ್ಟ ವಿವರಣೆಯನ್ನೂ ನೀಡಿದ್ದಾರೆ.

ಆದರೆ, ಅಹಂಕಾರದ ಬಯಕೆಯನ್ನು ತೆಗೆದುಹಾಕುವ ಮೊದಲು (ಅದಕ್ಕೆ ದೀರ್ಘ ಸಮಯ ಬೇಕು), ನಾವು ಅಹಂಕಾರದ ಬಯಕೆಯನ್ನು, ಅವಕಾಶ

ದೊರೆತಾಗಲೆಲ್ಲ ದೈವೀ ಬಯಕೆಗೆ ಒಪ್ಪಿಸುತ್ತ ಮತ್ತು ಕೊನೆಯಲ್ಲಿ ನಿರಂತರವಾಗಿ (ಅಹಂಕಾರದ ಬಯಕೆಯನ್ನು) ಒಪ್ಪಿಸುತ್ತ ಆರಂಭ ಮಾಡಬಹುದು. ಇದಕ್ಕಾಗಿ, ನಮ್ಮ ಆಧ್ಯಾತ್ಮಿಕ ಪ್ರಗತಿಗೆ ಮಾತ್ರವಲ್ಲದೆ ನಮ್ಮ ಪ್ರಾಪಂಚಿಕ ಸೌಖ್ಯಕ್ಕಾಗಿ, ನಮ್ಮ ದೇಹದ ಆರೋಗ್ಯಕ್ಕಾಗಿ ಮತ್ತು ನಮ್ಮ ದೇಹದ ಎಲ್ಲ ಚಟುವಟಿಕೆಗಳ ಸರಿಯಾದ ಕಾರ್ಯನಿರ್ವಹಣೆಗಾಗಿ ಕೂಡ ನಮಗೆ ಯಾವುದು ಒಳ್ಳೆಯದು ಮತ್ತು ನಮಗೆ ನಿಜವಾಗಿ ಏನು ಬೇಕು ಎನ್ನುವುದರ ಬಗ್ಗೆ ನಮಗಿಂತ ಚನ್ನಾಗಿ ದೇವರಿಗೆ ತಿಳಿದಿದೆ ಎನ್ನುವ ಸಂಗತಿಯನ್ನು ಅರ್ಥಮಾಡಿಕೊಳ್ಳಬೇಕಾಗಿರುವುದು ಮೊದಲ ಹೆಜ್ಜೆಯಾಗಿದೆ.

ಸ್ವಾಭಾವಿಕವಾಗಿ, ಇದು ಅಹಂಕಾರದ ಅಭಿಪ್ರಾಯವಲ್ಲ, ಏಕೆಂದರೆ ಅದು ತನಗೇನು ಬೇಕು ಎನ್ನುವುದನ್ನು ಬೇರೆಯವರಿಗಿಂತ ಚನ್ನಾಗಿ ತಿಳಿದುಕೊಂಡಿದೆ ಎಂದು ಯೋಚಿಸುತ್ತದೆ ಮತ್ತು ತನಗೆ ನಿರ್ಣಯ ಹಾಗೂ ನಿರ್ಧಾರ ಮಾಡುವ ಸ್ವಾತಂತ್ರ್ಯವಿದೆ ಎಂದು ಹೇಳಿಕೊಳ್ಳುತ್ತದೆ. ಆದರೆ ಅದು ಹೀಗೆ ಯೋಚಿಸುವುದು ಮತ್ತು ಅನುಭವಿಸುವುದು ಯಾಕೆಂದರೆ ಅದು ಅಪ್ರಬುದ್ಧವಾಗಿದೆ, ಮತ್ತು ಅದರ ಗ್ರಹಿಕೆ ಮತ್ತು ತಿಳುವಳಿಕೆಯು ಅದಕ್ಕೆ ನಿಜವಾಗಿಯೂ ಅರಿತುಕೊಳ್ಳಲು ಸಾಧ್ಯವಾಗುವಷ್ಟು ಸೀಮಿತವಾಗಿದೆ ಎನ್ನುವುದನ್ನು ಮತ್ತು ಅದು ಕೇವಲ ಅದರ (ಕುರುಡು) ಬಯಕೆಗಳ ಪ್ರಕಾರ ತೀರ್ಮಾನಿಸುತ್ತದೆ, ಸತ್ಯದನುಸಾರವಾಗಿ ಅಲ್ಲ ಎನ್ನುವುದನ್ನು ನಾವು ಕ್ರಮೇಣವಾಗಿ ಅದಕ್ಕೆ ಮನವರಿಕೆ ಮಾಡಿಕೊಡಬೇಕಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 16/224 – ಶ್ರೀಮಾತೆ**

**ನಾನು ಎನ್ನುವುದರಿಂದ ಸ್ವಯಂ–ಸಮರ್ಪಣೆಯ ಕಡೆಗೆ**

ಆದರೆ ನೀವು ಮಾತನಾಡುವ ಈ ನಾನು (ಅಹಂ) ಅಂದರೆ ಏನು? ಎಲ್ಲರಲ್ಲೂ ಅಹಂಭಾವವಿದೆ ಮತ್ತು ಅದನ್ನು ಸಂಪೂರ್ಣವಾಗಿ ತೆಗೆದುಹಾಕುವುದು ಎರಡು ಸಂಗತಿಗಳ ಹೊರತು ಅಸಾಧ್ಯ – ಅವು ಯಾವೆಂದರೆ – ಒಳಗಿನ ಚೈತ್ಯನ ತೆರೆದುಕೊಳ್ಳುವಿಕೆ ಮತ್ತು ಮೇಲಿನಿಂದ ಅಹಂ–ಮುಕ್ತ ವಿಶಾಲ ಪ್ರಜ್ಞೆಯ ಅವರೋಹಣ. ಚೈತ್ಯ ಪುರುಷನ ತೆರೆಯುವಿಕೆಯು ತಕ್ಷಣಕ್ಕೆ ಅಹಂನಿಂದ ಮುಕ್ತಿಯನ್ನು ನೀಡುವುದಿಲ್ಲ, ಆದರೆ ಅದನ್ನು ಶುದ್ಧಗೊಳಿಸುತ್ತದೆ ಮತ್ತು ಎಲ್ಲಾ ಕ್ರಿಯೆಗಳನ್ನು ದೇವರಿಗೆ ಅರ್ಪಿಸುತ್ತದೆ, ಹೀಗಾಗಿ ನಾವು ಸ್ವಯಂ–ಸಮರ್ಪಣೆ ಮತ್ತು ಶರಣಾಗತಿಯ ಮೂಲಕ ಅಹಂಕಾರದಿಂದ ಮುಕ್ತರಾಗುತ್ತೇವೆ. ಅದೇ

ಸಮಯದಲ್ಲಿ ಮೇಲೆ ಪ್ರಕೃತಿಯು ತೆರೆದುಕೊಳ್ಳುತ್ತದೆ ಮತ್ತು ವಿಶಾಲವಾದ ಅಹಂನಿಂದ ಮುಕ್ತವಾದ ಪ್ರಜ್ಞೆಯು ಕೆಳಗೆ ಬರುತ್ತದೆ ಮತ್ತು ಅಹಂ ಕಣ್ಮರೆಯಾಗುತ್ತದೆ ಮತ್ತು ಶ್ರೀಮಾತೆಯವರ ಒಂದು ಭಾಗವಾದ ಚೈತ್ಯನ ಶಕ್ತಿಯಿಂದ ನೀವು ನಿಮ್ಮ ನೈಜ ಸ್ವರೂಪವನ್ನು ತಿಳಿಯುತ್ತೀರಿ. ಸಂಭವಿಸಬೇಕಾಗಿರುವುದು ಇದಾಗಿದೆ, ಆದರೆ ಇಷ್ಟೊಂದು ಅಲ್ಪಾವಧಿಯಲ್ಲಿ ಅದು ಸಂಭವಿಸಲಾರದು. ಯಾವಾಗಲೂ, ಪ್ರಾಣಿಕ ಚಲನೆಗಳು ಮತ್ತು ಅಹಂ ಇವುಗಳ ಬಗ್ಗೆ ಯೋಚಿಸುತ್ತಿರುವುದು ಬೇಡ – ನೀವು ಅವುಗಳನ್ನು ನೋಡಿದ್ದೀರಿ ಮತ್ತು ಅವುಗಳು ಇವೆ ಎಂದು ಗೊತ್ತು, ಇಷ್ಟು ಸಾಕು. ಹೃದಯದಲ್ಲಿ, ಅಲ್ಲಿ ತೆರೆಯುವಿಕೆಯ ಮೇಲೆ ಕೇಂದ್ರೀಕರಿಸಿ; ನಿರಂತರವಾಗಿ ಕೇಂದ್ರೀಕರಿಸಿ ಮತ್ತು ನಿರಂತರವಾಗಿ ಹಾತೊರೆಯಿರಿ ಮತ್ತು ಅದು ಸಮಯ ತೆಗೆದುಕೊಂಡರೂ ತಲೆ ಕೆಡಿಸಿಕೊಳ್ಳಬೇಡಿ. ಯಾವುದೇ ರೀತಿಯಾದರೂ ಸರಿ, ಕರೆಯಿರಿ, ನೀವು ಆಳವಾಗಿ ಕರೆಯಲು ಸಾಧ್ಯವಾಗದಿದ್ದರೂ ಸಹ – ನಂತರ ಆಳವಾದ ಕರೆ ಬರುತ್ತದೆ.

*

ನಿಮ್ಮ ಪ್ರಜ್ಞೆಯು ಕ್ರಿಯೆಯೊಂದಿಗೆ ತನ್ನನ್ನು ತಾನು ಸಂಯೋಜಿಸಿಕೊಂಡರೆ ಇದು (ಬಲದ ಕ್ರಿಯೆಯಿಂದ ಅಹಂಕಾರವನ್ನು ಕುಂದಿಸುವುದು) ಸಾಧ್ಯವಿದೆ; ಆಗ ಕನಿಷ್ಠ ಪಕ್ಷ ನಾವು ಅದರ ಪ್ರಮುಖ ಕ್ರಿಯೆಯಿಂದ ಮುಕ್ತಿ ಹೊಂದಿ ಕೇವಲ ಸಣ್ಣ ಕುರುಹುಗಳನ್ನು ಮಾತ್ರ ಬಿಡಬಹುದು. ಸಾಮಾನ್ಯವಾಗಿ, ಅಹಂಕಾರವನ್ನು ಸಂಪೂರ್ಣವಾಗಿ ತೊಡೆದುಹಾಕಲು ಬರುವುದು, ಮೇಲಿನಿಂದ ಪ್ರಜ್ಞೆಯ ಅವರೋಹಣದಿಂದ ಮತ್ತು ಪ್ರಕೃತಿಯಲ್ಲಿ ಚೈತ್ಯನ ಆಜ್ಞೆಯಿಂದ ಸಹಾಯ ಪಡೆದ ಅದರ ಸಮಗ್ರ ಪುರುಷನ ವೃತ್ತಿಯಿಂದ.

**ಅಹಂಕಾರದಿಂದ ಸ್ವಾತಂತ್ರ್ಯಕ್ಕೆ ಅತೀಂದ್ರಿಯ ಮಾರ್ಗ**

ಮಾನವೀಯತೆಯ ಸ್ವಭಾವದಲ್ಲಿ ಹೆಣೆದುಕೊಂಡಿರುವ ಅಹಂ ಮತ್ತು ಇತರ ಅಂಶಗಳಿಗೆ ನೀವು ಇನ್ನೂ ಕೂಡ ಉತ್ಪ್ರೇಕ್ಷಿತ ಪ್ರಾಮುಖ್ಯತೆ ಮತ್ತು ಗಮನವನ್ನು ನೀಡುತ್ತೀರಿ ಎಂದು ನಾನು ಭಾವಿಸುತ್ತೇನೆ ಮತ್ತು ಉನ್ನತ ಕ್ರಿಯೆಗಳಿಂದ ಅವುಗಳನ್ನು ಪ್ರತಿಸ್ಥಾಪಿಸಲ್ಪಡುವಂಥ ಹೊಸ ಪ್ರಜ್ಞೆಯ ಆಗಮನವನ್ನು ಹೊರತುಪಡಿಸಿ

ಸಂಪೂರ್ಣವಾಗಿ ತೊಡೆದುಹಾಕಲು ಸಾಧ್ಯವಿಲ್ಲ. ನಾವು ನಮ್ಮ ಮನಸ್ಸಿನ ಕೇಂದ್ರದಿಂದ ಮತ್ತು ಪೂರ್ಣ ಪ್ರಾಮಾಣಿಕತೆಯಿಂದ ಅಹಂಕಾರವನ್ನು ಮತ್ತು ರಜೋ ಗುಣವನ್ನು ತಿರಸ್ಕರಿಸಿದರೆ, ಅವುಗಳ ಪ್ರಾಬಲ್ಯ ಕುಂದುತ್ತದೆ ಮತ್ತು ಸತ್ವ ಗುಣವು ಮೇಲುಗೈ ಸಾಧಿಸಬಹುದು, ಆದರೆ ಎಲ್ಲಾ ಅಹಂಕಾರ ಹಾಗೂ ರಜೋ ಗುಣವನ್ನು ಹೊರಹಾಕುವುದು ಕೇವಲ ಇಚ್ಛೆ ಮತ್ತು ಅದರ ಪ್ರಯತ್ನದಿಂದ ಸಾಧ್ಯವಿಲ್ಲ. ನಾವು, ಸಿದ್ಧತೆಯ ಒಂದು ನಿಶ್ಚಿತ ಹಂತದ ನಂತರ, ತ್ಯಜಿಸುವಿಕೆಯ ಋಣಾತ್ಮಕ ಭಾಗಕ್ಕಿಂತ ಸಾಧನೆಯ ಧನಾತ್ಮಕ ಭಾಗದ ಮೇಲೆ ಹೆಚ್ಚು ಒತ್ತು ನೀಡಬೇಕು, – ಆದರೆ ಅದು ಇನ್ನೊಂದಕ್ಕೆ ಸಹಾಯ ಮಾಡಲು ಖಂಡಿತವಾಗಿ ಇರಲೇಬೇಕು. ಇನ್ನೂ ಮುಖ್ಯವಾದ ಕೆಲಸವೇನೆಂದರೆ, ನಮ್ಮೊಳಗಿನ ಚೈತ್ಯನನ್ನು ವಿಕಸನಗೊಳಿಸುವುದು ಮತ್ತು ಮೇಲಿನಿಂದ ಉನ್ನತ ಪ್ರಜ್ಞೆಯನ್ನು ಕೆಳಗೆ ತರುವುದು. ಚೈತ್ಯನು ಬೆಳೆದಂತೆ ಮತ್ತು ಪ್ರಕಟವಾದಂತೆ, ಎಲ್ಲ ತಪ್ಪು ಕ್ರಿಯೆಗಳನ್ನು ಅಥವಾ ಅಂಶಗಳನ್ನು ಕೂಡಲೆ ಗುರುತಿಸುತ್ತಾನೆ ಮತ್ತು ಅದೇ ಸಮಯದಲ್ಲಿ ಅವುಗಳನ್ನು ಬದಲಾಯಿಸಬಹುದಾದ ನಿಜವಾದ ತತ್ವ ಅಥವಾ ಕ್ರಿಯೆಯನ್ನ ಸ್ವಯಂಪ್ರೇರಿತವಾಗಿ ಒದಗಿಸುತ್ತಾನೆ – ಈ ಚೈತ್ಯ ಕ್ರಿಯೆಯು, ಶುದ್ಧತೆಯ ಕಠಿಣವಾದ ತಪಸ್ಸಿಗಿಂತ ಹೆಚ್ಚು ಸುಲಭ ಹಾಗೂ ಹೆಚ್ಚು ಪರಿಣಾಮಕಾರಿಯಾಗಿದೆ. ಉನ್ನತ ಪ್ರಜ್ಞೆಯು ಅವರೋಹಣವಾಗುವಾಗ, ತನ್ನೊಡನೆ ಶಾಂತಿಯನ್ನು ಮತ್ತು ಶುದ್ಧತೆಯನ್ನು ತರುತ್ತದೆ ಮತ್ತು ಎಲ್ಲ ಆಂತರಿಕ ಭಾಗಗಳಿಗೆ ಪೂರೈಸುತ್ತದೆ; ಅಂತಃಪುರುಷನು ಪರಿಪೂರ್ಣವಲ್ಲದ ಬಾಹ್ಯ ಪ್ರಜ್ಞೆಯಿಂದ ತನ್ನನ್ನು ತಾನು ಬೇರ್ಪಡಿಸಿಕೊಳ್ಳುತ್ತಾನೆ ಮತ್ತು ಅದೇ ಸಮಯದಲ್ಲಿ ಬರುವಂಥ ಶಾಂತಿಯು, ಶಾಂತಿ ಮತ್ತು ಪರಿಶುದ್ಧತೆಗೆ ವಿರುದ್ಧವಾದದ್ದನ್ನು ಹೊರಹಾಕಬಲ್ಲ ಶಕ್ತಿಯನ್ನು ತನ್ನಲ್ಲಿ ಹೊತ್ತು ತರುತ್ತದೆ. ಅಹಂಕಾರವು ನಿಧಾನವಾಗಿ ಅಥವಾ ವೇಗವಾಗಿ ಆದರೆ ಖಂಡಿತವಾಗಿ ಕಣ್ಮರೆಯಾಗಬಹುದು — ರಜೋ ಗುಣ ಮತ್ತು ತಮೋ ಗುಣಗಳು ಅವುಗಳ ದೈವೀ ಪ್ರತಿವಸ್ತುಗಳಾಗಿ ಬದಲಾಗುತ್ತವೆ.

*

ಇದು, ಅಹಂಕಾರದಿಂದ ಮುಕ್ತಿ ಪಡೆಯಲು ಅಗತ್ಯವಾದಂಥ ಉನ್ನತ ಪ್ರಜ್ಞೆಗಿಂತ ವಿಶಾಲವಾದ ಒಂದು ಪ್ರಜ್ಞೆಯಾಗಿದೆ. ಉನ್ನತ ಮಟ್ಟಕ್ಕೆ ಹೋಗುವುದು ಖಂಡಿತವಾಗಿ ಅಗತ್ಯವಾಗಿದೆ, ಆದರೆ ಅದೊಂದೇ ಸಾಕಾಗುವುದಿಲ್ಲ.

*

ನಿರಂತರವಾದ ತ್ಯಜಿಸುವಿಕೆಯಿಂದ ಅದನ್ನು (ಅಹಂಕಾರದ ಕ್ರಿಯೆಗಳಿಂದ ಮುಕ್ತಿಯನ್ನು) ಸಾಧಿಸಲಾಗದು. ತನ್ನೊಳಗೆ ಮೇಲಕ್ಕೆ ಹೋಗುವ ಕ್ರಿಯೆಯು ಉನ್ನತ ಭಾಗಗಳನ್ನು ಮುಕ್ತಗೊಳಿಸುತ್ತದೆ ಆದರೆ ಅಹಂಕಾರವು ನಿಮ್ನ ಭಾಗಗಳಲ್ಲಿ ಉಳಿದುಕೊಳ್ಳುತ್ತದೆ. ಈ ಬಿಡುಗಡೆಗೆ ಅತ್ಯಂತ ಪರಿಣಾಮಕಾರಿ ಶಕ್ತಿ ಎಂದರೆ ಚೈತ್ಯ ನಿಯಂತ್ರಣ ಮತ್ತು ಅದರ ಜೊತೆಗೆ ನಿರಂತರ ತ್ಯಜಿಸುವಿಕೆಯಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 31/236–37**

ಅಹಂಕಾರದ ಭಾವನೆಯು ಆತ್ಮನಲ್ಲಿ ಅಥವಾ ಪುರುಷನಲ್ಲಿ ಮಾಯವಾಗಬಹುದು ಆದರೆ ಅದು ಮಾತ್ರ ಪ್ರಕೃತಿಯಲ್ಲಿ ಹಳೆಯ ಅಹಂಕಾರದ ಪ್ರತಿಕ್ರಿಯೆಗಳ ಅದೃಶ್ಯವಾಗುವಿಕೆಯನ್ನು ತರುವುದಿಲ್ಲ. ಪುರುಷನು, ನಿರಂತರ ತ್ಯಜಿಸುವಿಕೆಯ ಮತ್ತು ಪುನಃ ರೂಪಿಸುವಿಕೆಯ ಪ್ರಕ್ರಿಯೆಯ ಮೂಲಕ ಇವುಗಳನ್ನು ತೊಲಗಿಸಬಹುದು. ಪುನಃ ರೂಪಿಸುವಿಕೆಯು, ಎಲ್ಲವನ್ನೂ ಶ್ರೀಮಾತೆಯವರಿಗೆ ಅರ್ಪಿಸುವುದರಲ್ಲಿ ಮತ್ತು ನಮ್ಮ ಬಗ್ಗೆ, ನಮ್ಮ ಆಸೆಗಳ ಬಗ್ಗೆ, ಅಭಿಪ್ರಾಯಗಳ ಬಗ್ಗೆ, ಪ್ರಾಣಿಕ ಪ್ರತಿಕ್ರಿಯೆಗಳ ಬಗ್ಗೆ ಯೋಚಿಸದೆ, ಅವುಗಳು ನೆರವೇರಿಸಬೇಕಾದ ವಿಷಯಗಳೇನೋ ಎಂಬಂತೆ ಎಲ್ಲವನ್ನೂ ಶ್ರೀಮಾತೆಯವರಿಗಾಗಿ ಮಾಡುವುದರಲ್ಲಿದೆ. ಚೈತ್ಯ ಪುರುಷನು ನಿಜಕ್ಕೂ ಜಾಗೃತನಾದರೆ ಇದನ್ನು ಮಾಡುವುದು ಅತ್ಯಂತ ಸುಲಭ.

*

ಚೈತ್ಯ ಪುರುಷನ ವಿಮೋಚನೆಯಿಲ್ಲದೆ ಮತ್ತು ಆತ್ಮನ ಸಾಕ್ಷಾತ್ಕಾರವಿಲ್ಲದೆ ನಾನು ಎನ್ನುವ ಭಾವ ಹೋಗದು. ನಾನು ಎನ್ನುವುದು ತೊಲಗಬೇಕಾದರೆ, ಇವೆರಡೂ ಅವಶ್ಯಕ. ಆತ್ಮನ ಬಗ್ಗೆ ಪ್ರಜ್ಞೆಯೇ ಇರದಿದ್ದರೆ, ಅಹಂಕಾರವು ಮಾಯವಾಗುವುದಾದರೂ ಹೇಗೆ? ಪ್ರೇಮ ಹಾಗೂ ಭಕ್ತಿಯಿಂದ ಚೈತ್ಯ ಪುರುಷನನ್ನು ಸ್ವತಂತ್ರಗೊಳಿಸಬಹುದು, ಆದರೆ ನಾನು ಹೇಳುತ್ತಿರುವುದು ಚೈತ್ಯ ಪುರುಷನು ಅಷ್ಟೊಂದು ಸ್ವತಂತ್ರನಾಗಿರದ ಮತ್ತು ಆತ್ಮನ ಸಾಕ್ಷಾತ್ಕಾರವು ಹೆಚ್ಚು ಸುಲಭ ಎಂದು ತೋರುವಂಥ ಪ್ರಕರಣದ ಬಗ್ಗೆ – ನಿನ್ನೆಯ ಒಂದು ಪ್ರಕರಣದಂತೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 31/238 – ಶ್ರೀ ಅರವಿಂದರು**

ಜೀವನದಲ್ಲಿ ಎಲ್ಲ ಕಹಿ ಅನುಭವ ಬರುವುದು ನಾನು ಎನ್ನುವ ಭಾವ ನಮ್ಮನ್ನು ತೊರೆಯಲು ನಿರಾಕರಿಸುವುದರಿಂದ.

*

ಎಲ್ಲಾ ಸಂಗತಿಗಳು ಸಂಭವಿಸುವುದು ನಮಗೊಂದು ಪಾಠವನ್ನು ಕಲಿಸಲೆಂದು, ನಾವು ನಾನು ಎಂಬ ಭಾವವನ್ನು ತೊರೆಯದ ಹೊರತು ನಮಗೂ ಅಥವಾ ಇತರರಿಗೂ ನೆಮ್ಮದಿ ಎನ್ನುವುದಿಲ್ಲ. ನಮ್ಮಿಂದ ನಾನು ˆ ಎಂಬ ಭಾವವನ್ನು ಹೊರಹಾಕಿದರೆ, ಜೀವನವು ಅದ್ಭುತ ವಿಸ್ಮಯವಾಗುತ್ತದೆ!...

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/257**

ಖಿನ್ನತೆ ಎನ್ನುವುದು, ಯಾವಾಗಲೂ, ಒಂದು ತೀವ್ರ ಅಹಂಭಾವದ ಸಂಕೇತವಾಗಿದೆ. ಅದು ಹತ್ತಿರ ಬರುತ್ತಿದೆ ಎನ್ನುವ ಅನುಭವ ನಿಮಗಾದಾಗ, "ನಾನು ಅಹಂಭಾವವೆಂಬ ವ್ಯಾಧಿಯ ಅವಸ್ಥೆಯಲ್ಲಿದ್ದೇನೆ, ನಾನು ಅದರಿಂದ ಗುಣಮುಖನಾಗಲೇಬೇಕಾಗಿದೆ" ಎಂದು ನಿಮ್ಮಷ್ಟಕ್ಕೆ ನೀವು ಹೇಳಿಕೊಳ್ಳಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/10**

ನಾವು ಆಂತರಿಕ ಸಾಮರಸ್ಯದ ಅವಸ್ಥೆಯಲ್ಲಿದ್ದಾಗ ಮತ್ತು ಗಮನವು ದೇಹದ ಕಡೆಗೆ ಹೊರಳದಿದ್ದಾಗ, ದೇಹವು ಪರಿಪೂರ್ಣವಾಗಿ ಕಾರ್ಯನಿರ್ವಹಿಸುತ್ತದೆ. ಎಲ್ಲವನ್ನೂ ಅವ್ಯವಸ್ಥೆಗೊಳಿಸುವುದು ಈ "ಸ್ವ–ಏಕಾಗ್ರತೆ" ಎನ್ನುವ ಸಂಗತಿಯಾಗಿದೆ. ನಾನಿದನ್ನು ಅನೇಕ ಬಾರಿ ಗಮನಿಸಿದ್ದೇನೆ... ವಾಸ್ತವದಲ್ಲಿ, ನಮ್ಮನ್ನು ನಾವೇ ಅಸ್ವಸ್ಥರನ್ನಾಗಿ ಮಾಡಿಕೊಳ್ಳುತ್ತೇವೆ. ಅದು ಪ್ರಜ್ಞೆಯ ಸಂಕುಚಿತತೆಯಾಗಿದೆ, ವಿಭಜನೆಯಾಗಿದೆ. ಅದನ್ನು ಅದರ ಪಾಡಿಗೆ ಕಾರ್ಯಮಾಡಲು ಬಿಟ್ಟರೆ, ಎಲ್ಲೆಡೆಯೂ ಪ್ರಜ್ಞೆ ಇರುತ್ತದೆ ಮತ್ತು ಎಲ್ಲವನ್ನೂ ಮಾಡುವಂಥ ಅನುಗ್ರಹ ಅಲ್ಲಿರುತ್ತದೆ, ಇದರಿಂದ ಎಲ್ಲವೂ ಸರಿಯಾಗಿ ನಡೆದು ಹೋಗುತ್ತದೆ. ಮತ್ತು ಈ ತಿಳಿಗೇಡಿತನದಿಂದ ಎಲ್ಲವೂ ತಪ್ಪಾಗಿ ನಡೆದು ಹೋಗುತ್ತದೆ – ಇದು ಆಶ್ಚರ್ಯದ ಸಂಗತಿ! ಅಹಂಭಾವದ ತಿಳಿಗೇಡಿತನ. ....

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 11/207**

... ನೀವು ಯಾವುದೇ ವೈಯಕ್ತಿಕ ಉದ್ದೇಶವಿಲ್ಲದೆ ಮತ್ತು ಯಾವುದೇ ಲಾಭದ ನಿರೀಕ್ಷೆ ಇಲ್ಲದೆ ಸಂಪೂರ್ಣವಾಗಿ ನಿಮ್ಮನ್ನು ನೀವು ಪರಮಾತ್ಮನಿಗೆ ಒಪ್ಪಿಸಲು ಸಿದ್ಧರಾಗಿರುವಾಗ ಮಾತ್ರ ಅಹಂಕಾರವು ಕಣ್ಮರೆಯಾಗುತ್ತದೆ, — ನೀವು ಅದನ್ನು ಮಾಡುವುದು ಏಕೆಂದರೆ ನೀವು ಬೇರೆ ಏನೂ ಮಾಡಲು ಸಾಧ್ಯವಿಲ್ಲದಿರುವಾಗ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 10/16**

ಎಂದಿಗೂ ಸ್ವಾರ್ಥವಿಲ್ಲದ ಆದಾಗ್ಯೂ ಅಹಂಕಾರಿಯಾದ ಒಂದು ಪ್ರಯತ್ನವು ಅಲ್ಲಿರಬಹುದು, ಏಕೆಂದರೆ ವ್ಯಕ್ತಿಗತವಾದ ಕ್ಷಣಕ್ಕೆ ಅದು ದುರಹಂಕಾರಿಯಾಗುತ್ತದೆ – ಅಂದರೆ, ಅದು ಅಹಂಕಾರದ ಮೇಲೆ ಅವಲಂಬಿಸಿದೆ ಎಂದು ಅರ್ಥ. ಆದರೆ ಇದರರ್ಥ, ಅದು ಉದಾರವಾಗಿಲ್ಲ, ಅನುಕಂಪ ಹೊಂದಿಲ್ಲ, ನಿಸ್ವಾರ್ಥವಾಗಿಲ್ಲ ಅಥವಾ ಅದು ಸಂಕುಚಿತ ಸ್ವ–ಹಿತಾಸಕ್ತಿಗಳಿಗಾಗಿ ಅಲ್ಲವೆಂದಲ್ಲ. ಅದು ಹಾಗಲ್ಲ. ಅದು ಅತೀ ನಿಸ್ವಾರ್ಥ ಕೆಲಸಕ್ಕಾಗಿ ಇರಬಹುದು. ಆದರೆ ಅಹಂಕಾರವಿರುವವರೆಗೆ ಅದು ಅಹಂಕಾರಿಯಾಗಿರುತ್ತದೆ. ಮತ್ತು ನಮ್ಮ ಸ್ವಂತ ವ್ಯಕ್ತಿತ್ವದ ಭಾವನೆ ಇರುವವರೆಗೆ, ಸಹಜವಾಗಿ ಅದು ಸ್ವಾರ್ಥಪರವಾಗಿರುತ್ತದೆ; ಅಹಂಕಾರದ ಅಸ್ತಿತ್ವ ಇರುವಲ್ಲಿ ಅದು ಕಂಡುಬರುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 16/377**

ನಿಮ್ಮ ಚೈತ್ಯ ಪುರುಷನ ಬಗ್ಗೆ ಅರಿವನ್ನು ಹೊಂದಬೇಕಾದರೆ ಮತ್ತು ಚೈತ್ಯ ಜೀವನವನ್ನು ನಡೆಸಬೇಕಾದರೆ, ನೀವು ಎಲ್ಲ ಅಹಂಭಾವವನ್ನು ಅಳಿಸಿಹಾಕಲೇಬೇಕು; ಆದರೆ ನೀವು ಒಂದು ಆಧ್ಯಾತ್ಮಿಕ ಜೀವನವನ್ನು ನಡೆಸಬೇಕಾದರೆ ನೀವು ಎಂದಿಗೂ ಅಹಂಕಾರವನ್ನು ಹೊಂದಿರಲೇಬಾರದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 12/35–36**

ಕರ್ಮವು ಅಹಂಕಾರದ ಒಂದು ಸೃಷ್ಟಿಯಾಗಿದೆ; ಅಹಂಕಾರವು ಏನನ್ನಾದರು ಮಾಡಲೇಬೇಕು, ಆದರೆ ಅದಕ್ಕಾಗಿ ಎಲ್ಲವನ್ನೂ ಮಾಡಲು ಸಾಧ್ಯವಿಲ್ಲ. ಕರ್ಮವೆನ್ನುವುದು ಅಹಂಕಾರದ ಕ್ರಿಯೆಗಳ ಪರಿಣಾಮವಾಗಿದೆ, ಮತ್ತು

ಅಹಂಕಾರವನ್ನು ತ್ಯಜಿಸಿದಾಗ ಮಾತ್ರ ಕರ್ಮವು ಕರಗಿ ಹೋಗುತ್ತದೆ: ಇದು ಸತ್ಯವಾದ ಸಂಗತಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 16/373 – ಶ್ರೀಮಾತೆ**

## ‘ಅಹಂ’ಕಾರದ ನಿರ್ಮೂಲನೆ

### ನಮ್ಮನ್ನು ನಾವು ಪ್ರತ್ಯೇಕಗೊಳಿಸಿಕೊಳ್ಳುವುದು (ವಿಶೇಷವಾಗುವುದು) – ಮೊದಲ ಹೆಜ್ಜೆ

*ಪ್ರಶ್ನೆ: ನಮ್ಮ ಪ್ರತ್ಯೇಕತೆಗೆ ಕಾರಣವಾಗುವ ಅಹಂಕಾರವನ್ನು ದೈವೀ ಪ್ರಜ್ಞೆಯಲ್ಲಿ ನಾವು ಹೇಗೆ ವಿಲೀನಗೊಳಿಸಬಹುದು?*

ನಿಮ್ಮ ಅಹಂಕಾರವನ್ನು ದೇವನಲ್ಲಿ ವಿಲೀನಗೊಳಿಸಿ! ಆದರೆ ಸಂಪೂರ್ಣವಾಗಿ ಪ್ರತ್ಯೇಕಗೊಳ್ಳುವ ಮೊದಲು ನಾವು ನಮ್ಮ ಅಹಂಕಾರವನ್ನು ದೇವನಲ್ಲಿ ವಿಲೀನಗೊಳಿಸಲು ಸಾಧ್ಯವಾಗುವುದಿಲ್ಲ. ಸಂಪೂರ್ಣವಾಗಿ ಪ್ರತ್ಯೇಕಗೊಳ್ಳುವುದು ಎಂದರೆ ಏನೆಂದು ನಿಮಗೆ ಗೊತ್ತೆ? ಎಲ್ಲ ಬಾಹ್ಯ ಪ್ರಭಾವಗಳನ್ನು ಪ್ರತಿರೋಧಿಸಲು ಸಮರ್ಥನಾಗುವುದೆ?

ಕೆಲವು ದಿನಗಳ ಹಿಂದೆ, ಯಾರೋ ಒಬ್ಬರಿಂದ ನನಗೆ ಪತ್ರವೊಂದು ಬಂತು. ಸಾಮಾನ್ಯ ಸಾಹಿತ್ಯದ ಪುಸ್ತಕಗಳನ್ನು (ಉದಾಹರಣೆಗೆ–ಕಾದಂಬರಿಗಳು ಅಥವಾ ನಾಟಕಗಳು) ಓದಲು ನನಗೆ ಬಹಳೇ ಹಿಂಜರಿಕೆಯಾಗುತ್ತದೆ ಎಂದು ಅವರು ಅದರಲ್ಲಿ ಬರೆದುಕೊಂಡಿದ್ದರು. ಏಕೆಂದರೆ ಅವರ ಸ್ವಭಾವವು, ಈ ಪುಸ್ತಕಗಳಲ್ಲಿನ ಪಾತ್ರಗಳ ಛಾಪುಗಳನ್ನು ಸ್ವೀಕರಿಸಲು ಮತ್ತು ಈ ಪಾತ್ರಗಳ ಭಾವನೆಗಳನ್ನು ಹಾಗೂ ಚಿಂತನೆಗಳನ್ನು, ಈ ವ್ಯಕ್ತಿಗಳ ಸ್ವಭಾವವನ್ನು ಜೀವಿಸಲು ಆರಂಭಿಸಲು ಒಂದು ದುಸ್ತರವಾದ ಪ್ರವೃತ್ತಿಯನ್ನು ಹೊಂದಿತ್ತು. ಹಾಗಿರುವ ಜನರು, ನಾವು ಯೋಚಿಸುವುದಕ್ಕಿಂತ ತುಂಬಾ ಹೆಚ್ಚಾಗಿದ್ದಾರೆ. ಅವರು ಒಂದು ಪುಸ್ತಕವನ್ನು ಓದುತ್ತಾರೆ ಮತ್ತು ಓದುತ್ತಿರುವಾಗ, ಅವರು ತಮ್ಮೊಳಗೆ ಎಲ್ಲ ರೀತಿಯ ಭಾವನೆ, ಆಲೋಚನೆ, ಆಸೆ, ಉದ್ದೇಶ, ಯೋಜನೆ, ಆದರ್ಶಗಳನ್ನೂ ಕೂಡ ಅನುಭವಿಸುತ್ತಾರೆ. ಅವರು ಪುಸ್ತಕವನ್ನು ಓದುವುದರಲ್ಲೇ ಸಂಪೂರ್ಣವಾಗಿ

ಮಗ್ನರಾಗಿರುತ್ತಾರೆ. ಆದರೆ, ಅವರಿಗೆ ಅದರ ಬಗ್ಗೆ ಅರಿವಿರುವುದಿಲ್ಲ. ಏಕೆಂದರೆ, ಒಬ್ಬ ವ್ಯಕ್ತಿಯ ಸ್ವಭಾವ ಕನಿಷ್ಠ ತೊಂಭತ್ತೊಂಬತ್ತು ಭಾಗಗಳು (ತಿನ್ನಲಿಕ್ಕೆ ಬಾರದ) ಮೃದು ವಸ್ತುವಿನಿಂದ ಮಾಡಲ್ಪಟ್ಟಿವೆ – ಆದರೆ ನಾವು ಅದರ ಮೇಲೆ ಹೆಬ್ಬೆರಳನ್ನು ಒತ್ತಿದರೆ, ಛಾಪು ಮೂಡುತ್ತದೆ.

ಈಗ ಎಲ್ಲವೂ ಒಂದು "ಹೆಬ್ಬೆರಳಾಗಿದೆ": ಒಂದು ವ್ಯಕ್ತಪಡಿಸಿದ ಚಿಂತನೆ, ಒಂದು ಓದಿದ ವಾಕ್ಯ, ನೋಡಿದ ಒಂದು ವಸ್ತು, ಬೇರೆಯವರು ಮಾಡುವುದನ್ನು ಗಮನಿಸುವುದು, ಮತ್ತು ನಮ್ಮ ನೆರೆಯವರ ಇಚ್ಛೆಯನ್ನು ಗಮನಿಸುವುದು – ಎಲ್ಲವೂ ಒಂದು "ಹೆಬ್ಬೆರಳಾಗಿದೆ." ಈ ಎಲ್ಲ ಬಯಕೆಗಳು, ಈ ರೀತಿಯಾಗಿ ಒಂದಕ್ಕೊಂದು ಬೆಸೆದುಕೊಂಡ (ಶ್ರೀಮಾತೆಯವರು ತಮ್ಮ ಬೆರಳುಗಳನ್ನು ಒಂದರೊಳಗೊಂದು ಸೇರಿಸುತ್ತಾರೆ), ಪ್ರತಿಯೊಂದು ಮೇಲುಗೈ ಸಾಧಿಸಲು ಪ್ರಯತ್ನಿಸುತ್ತಾ ಮತ್ತು ಒಳಗೆ, ಹೊರಗೆ ಒಂದು ರೀತಿಯ ನಿರಂತರ ವಿವಾದವನ್ನು ಉಂಟುಮಾಡುತ್ತ... ನಾವು ನೋಡಿದಾಗ ಎಲ್ಲ ಬಯಕೆಗಳೂ ಅಲ್ಲಿವೆ, ನಿಮಗೆ ಗೊತ್ತೆ. ನೋಡಿ, ಆ ರೀತಿಯಾಗಿ ವಿದ್ಯುತ್ ಪ್ರವಾಹದಂತೆ ಅದು ಜನರ ಒಳಗೆ ಹೋಗಿ ಹೊರಗೆ ಬರುತ್ತದೆ. ಇದೆಲ್ಲದರ ಅರಿವು ನಮಗೆ ಇರುವುದೇ ಇಲ್ಲ, ಮತ್ತು ಇದು, ತಮ್ಮನ್ನು ತಾವು ಅಭಿವ್ಯಕ್ತಗೊಳಿಸಿಕೊಳ್ಳಲು ಪ್ರಯತ್ನಿಸುತ್ತಿರುವ ಎಲ್ಲ ಬಯಕೆಗಳ ಒಂದು ನಿರಂತರ ಸಂಘರ್ಷವಾಗಿದೆ; ಮತ್ತು ಅದರಲ್ಲಿ ಬಲಶಾಲಿ–ಯಾದವರು ಯಶಸ್ವಿಯಾಗುತ್ತಾರೆ. ಆದರೆ, ಇವುಗಳಲ್ಲಿ ಅನೇಕರಿರುವುದರಿಂದ ಮತ್ತು ನಾವು ಏಕಾಂಗಿಯಾಗಿ ಅನೇಕರೊಡನೆ ಹೋರಾಡಬೇಕಾಗಿರುವುದರಿಂದ, ಇದು ಸುಲಭವಲ್ಲ.

ಹೀಗೆ ನಾವು ಸಾಗರದ ಅಲೆಗಳ ಮೇಲೆ ಬೆಂಡಿನಂತೆ ಎಸೆಯಲ್ಪಡುತ್ತೇವೆ... ಒಂದು ದಿನ ನಾವು ಇದನ್ನು ಬಯಸುತ್ತೇವೆ, ಮರುದಿನ ಅದನ್ನು ಬಯಸುತ್ತೇವೆ, ಒಂದು ಕ್ಷಣ ನಾವು ಈ ಬದಿಯಿಂದ ತಳ್ಳಲ್ಪಡುತ್ತೇವೆ, ಮತ್ತೊಂದು ಕ್ಷಣ ಆ ಬದಿಯಿಂದ, ಈಗ ನಾವು ನಮ್ಮ ಮುಖವನ್ನು ಆಕಾಶದೆಡೆಗೆ ಎತ್ತುತ್ತೇವೆ (ಶ್ರೀಮಾತೆಯವರು ಆ ರೀತಿ ಚಲನೆಯನ್ನು ಮಾಡುತ್ತಾರೆ). ಈಗ ನಾವು ಒಂದು ಆಳವಾದ ಕಂದಕದಲ್ಲಿ ಮುಳುಗಿಹೋಗುತ್ತೇವೆ. ಹೀಗೆ ನಾವು ಹೊಂದಿದಂಥ ಅಸ್ತಿತ್ವವು ಇದಾಗಿದೆ!

ಮೊದಲು ನಾವು ಜಾಗೃತರಾಗಬೇಕು, ಸಶಕ್ತರಾಗಿರಬೇಕು, ತನ್ನ ಸುತ್ತಲಿನ ಎಲ್ಲದರಿಂದ ಸ್ವತಂತ್ರವಾಗಿ, ತನ್ನಿಂದ ತಾನೇ, ತನ್ನಲ್ಲಿ ತಾನೇ ಅಸ್ತಿತ್ವದಲ್ಲಿರುವಂಥ, ಏನನ್ನಾದರೂ ಕೇಳಬಹುದಾದಂಥ, ಏನನ್ನಾದರೂ ಓದಬಹುದಾದಂಥ, ಬದಲಾಗದೆ ಏನನ್ನಾದರೂ ನೋಡಬಹುದಾದಂಥ ವಿಶೇಷ ವ್ಯಕ್ತಿಯಾಗಬೇಕು. ಅವನು ಅವನಿಗೆ ಬೇಕಾದದ್ದನ್ನು ಮಾತ್ರ ಹೊರಗಿನಿಂದ ಸ್ವೀಕರಿಸುತ್ತಾನೆ; ಅವನ ಯೋಜನೆಗೆ ಹೊಂದದಿರುವುದನ್ನು ಅವನು ತಾನಾಗಿಯೇ ತಿರಸ್ಕರಿಸುತ್ತಾನೆ ಮತ್ತು ಅವನು ಒಪ್ಪಿಕೊಳ್ಳದ ಹೊರತು ಯಾವುದೂ ಅವನ ಮೇಲೆ ಅಚ್ಚೊತ್ತಲು ಸಾಧ್ಯವಿಲ್ಲ. ಆಗ ನಾವು ಒಂದು ಪ್ರತ್ಯೇಕ ಅಸ್ತಿತ್ವವಾಗಿ ಮಾರ್ಪಡಲು ಆರಂಭಿಸುತ್ತೇವೆ! ನಾವು ಪ್ರತ್ಯೇಕ ಅಸ್ತಿತ್ವವಾದಾಗ, ನಾವು ಅದನ್ನು ಒಂದು ನಿವೇದನೆಯನ್ನಾಗಿ ಮಾಡಬಹುದು.

## ನಮ್ಮನ್ನು ನಾವು ಪ್ರತ್ಯೇಕಗೊಳಿಸಿಕೊಳ್ಳುವುದು – ಎರಡನೆ ಹೆಜ್ಜೆ

ನಾವು ಏನೋ ಒಂದನ್ನು ಹೊಂದಿರದ ಹೊರತು ಅದನ್ನು ಕೊಡಲು ಸಾಧ್ಯವಿಲ್ಲ. ಮೊದಲು, ನೀವು (ಏನಾಗಬೇಕೊ ಅದು) ಆಗಿರಬೇಕು, ಆಮೇಲೆ ನಿಮ್ಮನ್ನು ನೀವೇ ಕೊಡಬಹುದು.

ಎಲ್ಲಿಯವರೆಗೆ ನಾವು ಅಸ್ತಿತ್ವದಲ್ಲಿಲ್ಲವೋ, ಅಲ್ಲಿಯವರೆಗೆ ನಾವು ಏನನ್ನೂ ಕೊಡಲು ಸಾಧ್ಯವಿಲ್ಲ.

ಮತ್ತು ನೀವು ಹೇಳುವಂತೆ, ಬೇರ್ಪಡಿಸುವ ಅಹಂಕಾರವು ಕಣ್ಮರೆಯಾಗಬೇಕಾದರೆ, ಪೂರ್ತಿಯಾಗಿ, ಸಂಕೋಚವಿಲ್ಲದೆ ಸಂಪೂರ್ಣವಾಗಿ ನಿಮ್ಮನ್ನು ನೀವು ಒಪ್ಪಿಸಿಕೊಳ್ಳಲು ಸಮರ್ಥರಾಗಿರಬೇಕು. ಮತ್ತು ನಮ್ಮನ್ನು ನಾವು ಒಪ್ಪಿಸಿಕೊಳ್ಳಲು ಸಮರ್ಥರಾಗಬೇಕಾದರೆ, ಮೊದಲು ನಾವು ಅಸ್ತಿತ್ವದಲ್ಲಿರಬೇಕು. ಮತ್ತು ಅಸ್ತಿತ್ವದಲ್ಲಿರಲು ನಾವು ಒಬ್ಬ ವಿಶೇಷ ವ್ಯಕ್ತಿಯಾಗಿರಬೇಕು.

ನಿಮ್ಮ ದೇಹವನ್ನು ಈಗಿರುವ ಹಾಗೆ ಅಷ್ಟು ಗಡುಸಾಗಿ ಮಾಡಿಲ್ಲದಿದ್ದರೆ — ಅದು ಬಹಳ ಗಡುಸಾಗಿದೆ, ಅಲ್ಲವೇ? — ಹಾಗಾದರೆ, ಅದೆಲ್ಲವನ್ನೂ ಅಷ್ಟು ಸ್ಥಿರಗೊಳಿಸಲು ಆಗದಿದ್ದರೆ, ನೀವು ಹೊದಿಕೆಯನ್ನು (ಚರ್ಮವನ್ನು) ಹೊಂದಿಲ್ಲದಿದ್ದರೆ, ಇಲ್ಲಿ, ಹೀಗೆ, ಗಟ್ಟಿಯಾಗಿ, ಬಾಹ್ಯವಾಗಿ ನೀವು ಪ್ರಾಣಿಕ ಮತ್ತು ಮಾನಸಿಕ ಕ್ಷೇತ್ರಗಳಲ್ಲಿ ಇರುವುದರ ಪ್ರತಿಫಲನವಾಗಿದ್ದರೆ, ಅದು ಲೋಳೆ

ಮೀನಾಗಿರುವುದಕ್ಕಿಂತ (jelly-fish) ಕೆಟ್ಟದ್ದಾಗುತ್ತಿತ್ತು! ಎಲ್ಲವೂ ಇನ್ನೊಂದರೊಂದಿಗೆ ಹೀಗೆ ಒಂದಾಗುತ್ತಿತ್ತು.... ಓ, ಎಂಥಾ ಗೊಂದಲವಾಗುತ್ತಿತ್ತು! ಅದಕ್ಕಾಗಿಯೇ ಮೊದಲು ತುಂಬಾ ಗಡುಸಾದ ರೂಪವನ್ನು ಕೊಡುವುದು ಅವಶ್ಯಕವಾಗಿತ್ತು. ನಂತರ ನಾವು ಅದರ ಬಗ್ಗೆ ದೂರುತ್ತೇವೆ. "ಭೌತಿಕ ಶರೀರ ಸ್ಥಿರವಾಗಿದೆ, ಅದೊಂದು ಉಪದ್ರವವಾಗಿದೆ; ಅದಕ್ಕೆ ನಮ್ಯತೆ ಇಲ್ಲ, ಅದಕ್ಕೆ ಕೋಮಲತೆ ಇಲ್ಲ, ದೇವನಲ್ಲಿ ವಿಲೀನಗೊಳಿಸಲು ನಮ್ಮನ್ನು ಸಮರ್ಥರನ್ನಾಗಿಸುವಂಥ ಸ್ಥಿರತೆ ಅದಕ್ಕಿಲ್ಲ" ಎಂದು ನಾವು ಹೇಳುತ್ತೇವೆ. ಆದರೆ ಇದು ತುಂಬಾ ಅವಶ್ಯವಾಗಿತ್ತು, ಏಕೆಂದರೆ ಇದಿಲ್ಲದೆ... ನೀವು ನಿಮ್ಮ ದೇಹದಿಂದ ಸುಮ್ಮನೆ ಹೊರಗೆ ಹೋದರೆ (ನಿಮ್ಮಲ್ಲಿ ಹೆಚ್ಚಿನವರಿಗೆ ಇದನ್ನು ಮಾಡಲು ಸಾಧ್ಯವಿಲ್ಲ, ಏಕೆಂದರೆ ಪ್ರಾಣಿಕ ಪುರುಷನ ರಚನೆ ಭೌತಿಕ ಪುರುಷನ ರಚನೆಗಿಂತ ಕಡಿಮೆ ವಿಶೇಷವಾಗಿದೆ), ನೀವು ನಿಮ್ಮ ದೇಹದಿಂದ ಹೊರಗಡೆ ಬಂದು ಪ್ರಾಣಿಕ ಪ್ರಪಂಚದೊಳಗೆ ಹೋದರೆ, ಅಲ್ಲಿ ಎಲ್ಲ ಸಂಗತಿಗಳು ಒಂದಕ್ಕೊಂದು ಬೆರೆತುಕೊಂಡಿರುವುದನ್ನು ನೀವು ಕಾಣುವಿರಿ, ಅವುಗಳು ಕೂಡಿಕೊಂಡಿವೆ, ಅವುಗಳು ವಿಭಜನೆಯಾಗುತ್ತವೆ; ಎಲ್ಲ ರೀತಿಯ ಕಂಪನಗಳು, ಬಲದ ಪ್ರವಾಹಗಳು ಬರುತ್ತವೆ ಮತ್ತು ಹೋಗುತ್ತವೆ, ಪ್ರಯಾಸ ಪಡುತ್ತವೆ, ಒಂದನ್ನೊಂದು ನಾಶಮಾಡಲು ಪ್ರಯತ್ನಿಸುತ್ತವೆ, ಒಂದರ ಸ್ಥಾನವನ್ನು ಇನ್ನೊಂದು ತೆಗೆದುಕೊಳ್ಳುತ್ತವೆ, ಒಂದನ್ನೊಂದು ಹೀರಿಕೊಳ್ಳುತ್ತವೆ, ಒಂದನ್ನೊಂದು ಹೊರಗೆ ಬಿಸಾಡುತ್ತವೆ... ಮತ್ತು ಅದು ಹೀಗೆಯೇ ಮುಂದುವರೆಯುತ್ತದೆ! ಆದರೆ, ಇದೆಲ್ಲದರಲ್ಲಿ ನಿಜವಾದ ವ್ಯಕ್ತಿತ್ವವನ್ನು ಕಂಡುಹಿಡಿಯುವುದು ತುಂಬಾ ಕಷ್ಟದ ಸಂಗತಿಯಾಗಿದೆ.

**ನಮ್ಮನ್ನು ನಾವು ಪ್ರತ್ಯೇಕಗೊಳಿಸಿಕೊಳ್ಳುವುದು – ಮೂರನೆ ಹೆಜ್ಜೆ**

ಇವು ಬಲಗಳಾಗಿವೆ, ಚಲನೆಗಳಾಗಿವೆ, ಬಯಕೆಗಳಾಗಿವೆ, ಕಂಪನಗಳಾಗಿವೆ.

ಅಲ್ಲಿ ಪ್ರತ್ಯೇಕ ಅಸ್ತಿತ್ವಗಳಿವೆ, ವ್ಯಕ್ತಿತ್ವಗಳಿವೆ! ಆದರೆ ಇವೆಲ್ಲಾ ಪ್ರಭಾವಗಳಾಗಿವೆ. ಆ ಜಗತ್ತಿನಲ್ಲಿ ಪ್ರತ್ಯೇಕ ಅಸ್ತಿತ್ವ ಹೊಂದಿದ ಜನರು ನಾಯಕರಾಗಿದ್ದಾರೆ ಇಲ್ಲವೆ ದೆವ್ವಗಳಾಗಿದ್ದಾರೆ! ಮತ್ತು ಈಗ, ಮನದಲ್ಲಿ... (ಮೌನ) ನೀವು ನಿಮ್ಮ ಭೌತಿಕ ಮನದ ಬಗ್ಗೆ ಅರಿವನ್ನು ಮೂಡಿಸಿಕೊಂಡರೆ ಮಾತ್ರ... ಕೆಲವು ಜನರು ಅದನ್ನು ಸಾರ್ವಜನಿಕ ಸ್ಥಾನವೆಂದು ಕರೆದಿದ್ದಾರೆ, ಯಾಕೆಂದರೆ ಎಲ್ಲವೂ ಅಲ್ಲಿಗೆ ಬರುತ್ತದೆ,

ಅದನ್ನು ದಾಟಿ ಹೋಗುತ್ತದೆ, ಮುಂದೆ ಹೋಗುತ್ತದೆ, ಮತ್ತೆ ಬರುತ್ತದೆ.... ಎಲ್ಲ ಕಲ್ಪನೆಗಳು ಅಲ್ಲಿ ಹೋಗುತ್ತವೆ, ಅವುಗಳು ಒಂದು ಸ್ಥಳವನ್ನು ಪ್ರವೇಶಿಸಿ, ಇನ್ನೊಂದರಿಂದ ಹೊರಹೋಗುತ್ತವೆ, ಕೆಲವು ಇಲ್ಲಿರುತ್ತವೆ, ಕೆಲವು ಅಲ್ಲಿರುತ್ತವೆ, ಮತ್ತು ಅದೊಂದು ಸಾರ್ವಜನಿಕ ಸ್ಥಳ, ಅಷ್ಟು ಚೆನ್ನಾಗಿ ವ್ಯವಸ್ಥೆಗೊಳಿಸದ ಸ್ಥಳ, ಸಾಮಾನ್ಯವಾಗಿ ಕಲ್ಪನೆಗಳು ಭೇಟಿಯಾಗಿ ಒಂದಕ್ಕೊಂದು ಡಿಕ್ಕಿ ಹೊಡೆಯುತ್ತವೆ, ಎಲ್ಲಾ ರೀತಿಯ ಅನಾಹುತಗಳಾಗುತ್ತವೆ. ಆದರೆ ನಂತರ: "ನಾನು ನನ್ನ ಮನಸ್ಸನ್ನು ಏನೆಂದು ಕರೆಯಬಹುದು?" ಅಥವಾ "ನನ್ನ ಮನಸ್ಸೆಂದರೆ ಏನು?" ಎನ್ನುವುದರ ಬಗ್ಗೆ ನಮಗೆ ಅರಿವಾಗುತ್ತದೆ.

ಕೇವಲ ಈ ಚಿಕ್ಕ ವಿಷಯವನ್ನು ರೂಪಿಸಲು ಅಂದರೆ ನಮ್ಮ ಸ್ವಂತ ಯೋಚಿಸುವ ಮಾರ್ಗವನ್ನು ರೂಪಿಸಿಕೊಳ್ಳಲು ಸಫಲವಾಗಬೇಕಾದರೆ, ನಮಗೆ ಎಚ್ಚರಿಕೆಯ, ಬಹಳ ಜಾಗರೂಕತೆಯ, ಬಹಳ ಸಮಂಜಸತೆಯ, ಬಹಳ ಸುಸಂಬದ್ಧ ಕಾರ್ಯದ, ಸಂಯೋಜನೆಯ, ಆಯ್ಕೆಯ, ರಚನೆಯ ಹಲವು ವರ್ಷಗಳ ಸಮಯ ಬೇಕಾಗುತ್ತದೆ. ನಮ್ಮ ಸ್ವಂತದ್ದೇ ಆದ ಯೋಚಿಸುವ ರೀತಿಯನ್ನು ಹೊಂದಿದ್ದೇವೆಂದು ನಾವು ನಂಬುತ್ತೇವೆ. ಎಂದಿಗೂ ಇಲ್ಲ. ಇದು, ಜನರು ಯಾರ ಜೊತೆ ಮಾತನಾಡುತ್ತಿದ್ದಾರೆ, ಅಥವಾ ಯಾವ ಪುಸ್ತಕಗಳನ್ನು ಓದಿದ್ದಾರೆ ಅಥವಾ ಅವರು ಇರುವ ಮನಃಸ್ಥಿತಿಯ ಮೇಲೆ ಪೂರ್ತಿಯಾಗಿ ಅವಲಂಬಿಸಿರುತ್ತದೆ. ನಿಮಗೆ ಒಳ್ಳೆಯ ಅಥವಾ ಕೆಟ್ಟದಾದ ಜೀರ್ಣಶಕ್ತಿ ಇದೆಯೋ ಎನ್ನುವದರ ಮೇಲೆಯೂ ಕೂಡ ಇದು ಅವಲಂಬಿಸಿದೆ, ನೀವು ಸರಿಯಾದ ಗಾಳಿ ಬೆಳಕಿನ ವ್ಯವಸ್ಥೆ ಇಲ್ಲದ ಕೋಣೆಯಲ್ಲಿ ಕೂತಿದ್ದೀರಾ ಅಥವಾ ನೀವು ತೆರೆದ ಗಾಳಿಯಲ್ಲಿ ಇದ್ದೀರಾ ಎನ್ನುವುದರ ಮೇಲೂ ಅವಲಂಬಿಸಿದೆ; ನಿಮ್ಮ ಮುಂದೆ ಸುಂದರವಾದ ಉದ್ಯಾನವನ ಇದೆಯೋ ಇಲ್ಲವೋ ಎನ್ನುವದರ ಮೇಲೆ ಅದು ಅವಲಂಬಿಸಿದೆ; ಸೂರ್ಯನ ಬೆಳಕಿದೆಯೋ ಅಥವಾ ಮಳೆ ಇದೆಯೋ ಅದರ ಮೇಲೂ ಅದು ಅವಲಂಬಿಸಿದೆ! ನಿಮಗೆ ಅದರ ಅರಿವಿಲ್ಲ, ಆದರೆ ನೀವು ಎಲ್ಲ ರೀತಿಯ ವಿಷಯಗಳ ಬಗ್ಗೆ ಯೋಚಿಸುತ್ತೀರಿ, ನಿಮಗೆ ಸಂಪೂರ್ಣವಾಗಿ ಸಂಬಂಧವಿಲ್ಲದ ವಿಷಯಗಳ ಒಂದು ಕುಪ್ಪೆಯ ಪ್ರಕಾರ ಸಂಪೂರ್ಣ ಭಿನ್ನವಾದಂಥ ವಿಷಯಗಳ ಬಗ್ಗೆ! ಮತ್ತು ಇದೊಂದು ಸಂಘಟಿತ, ಸುಸಂಬದ್ಧ, ತಾರ್ಕಿತ ಚಿಂತನೆಯಾಗಬೇಕಾದರೆ, ಒಂದು ದೀರ್ಘವಾದ ಸಮಗ್ರ ಕಾರ್ಯದ ಅವಶ್ಯಕತೆ ಇದೆ.

ನಂತರ, ಅದರ ಅತ್ಯುತ್ತಮವಾದ ಅಂಶವೆಂದರೆ, ನೀವು ಒಂದು ಸುಂದರವಾದ, ಉತ್ತಮವಾಗಿ ರಚಿಸಲ್ಪಟ್ಟ, ಅತಿ ಬಲಶಾಲಿ, ಅತಿ ಪ್ರಭಾವಿ ಮಾನಸಿಕ ರಚನೆಯನ್ನು ಮಾಡುವುದರಲ್ಲಿ ನೀವು ಯಶಸ್ವಿಯಾದಾಗ, ನಿಮಗೆ ಮೊದಲು ಹೇಳುವ ವಿಷಯ "ನೀವು ದೇವನೊಂದಿಗೆ ಒಂದಾಗಲು ಇದನ್ನು ತಡೆಯಲೇಬೇಕು!" ಎನ್ನುವ ವಿಷಯ. ಆದರೆ ನೀವು ಅದನ್ನು ಮಾಡದ ತನಕ, ನೀವು ದೇವನೊಡನೆ ಒಂದಾಗಲು ಸಾಧ್ಯವಿಲ್ಲ, ಏಕೆಂದರೆ ನಿಮ್ಮ ಬಳಿ ದೇವನಿಗೆ ಕೊಡಲು ನೀವೇ ಅಲ್ಲದ ವಸ್ತುಗಳ ರಾಶಿಯ ಹೊರತು ಬೇರೆ ಏನೂ ಇಲ್ಲ! ನಿಮ್ಮನ್ನು ನೀವೇ ಕೊಡಲು ಸಾಧ್ಯವಾಗಬೇಕಾದರೆ ಮೊದಲು ನೀವು ಅಸ್ತಿತ್ವದಲ್ಲಿರಬೇಕು. ನಾನು ಸ್ವಲ್ಪ ಸಮಯದ ಹಿಂದೆ ಹೇಳಿದ್ದನ್ನೇ ಮತ್ತೆ ಹೇಳುತ್ತಿದ್ದೀನಿ.

**ನಿಮ್ಮ ದೇಹವನ್ನು ದೇವನಿಗೆ ಅರ್ಪಿಸಿ**

ನಿಜವಾಗಿಯೂ, ಪ್ರಪಂಚದ ಈಗಿನ ಸ್ಥಿತಿಯಲ್ಲಿ, ನಾವು ದೇವನಿಗೆ ಕೊಡಬಹುದಾದ ಒಂದೇ ವಸ್ತುವೆಂದರೆ ನಮ್ಮ ದೇಹ. ಆದರೆ ಅದನ್ನೇ ಅವರು ಆತನಿಗೆ ಕೊಡುವುದಿಲ್ಲ. ಹೌದು, ಒಬ್ಬರು ತಮ್ಮ ಕೆಲಸವನ್ನು ಮುಡಿಪಿಡಲು ಪ್ರಯತ್ನಿಸಬಹುದು! ಆದರೂ, ಇಲ್ಲಿ ನಿಜವಲ್ಲದ ಅನೇಕ ಅಂಶಗಳಿವೆ!

ನೀವು ನಿಮ್ಮ ದೇಹವನ್ನು ದೇವನಲ್ಲಿ ವಿಲೀನಗೊಳಿಸಲು ಬಯಸುತ್ತೀರಾ? ಒಮ್ಮೆ ಪ್ರಯತ್ನ ಮಾಡಿ ನೋಡಿ! ನೀವು ಇದನ್ನು ಹೇಗೆ ಮಾಡುವಿರಿ? ನೀವು ನಿಮ್ಮ ಮನಸ್ಸನ್ನು ವಿಲೀನಗೊಳಿಸಬಹುದು, ನಿಮ್ಮ ಪ್ರಾಣವನ್ನು ವಿಲೀನಗೊಳಿಸಬಹುದು, ನಿಮ್ಮ ಎಲ್ಲಾ ಮನೋವೃತ್ತಿಗಳನ್ನು ಒಂದುಗೂಡಿಸಬಹುದು, ನಿಮ್ಮ ಎಲ್ಲಾ ಆಕಾಂಕ್ಷೆಗಳನ್ನು ಒಂದುಗೂಡಿಸಬಹುದು, ನೀವು ಅದೆಲ್ಲವನ್ನು ಒಂದುಗೂಡಿಸಬಹುದು, ಆದರೆ ನಿಮ್ಮ ದೇಹ — ನೀವು ಅದನ್ನು ಹೇಗೆ ಮಾಡ್ತೀರಾ? ನೀವದನ್ನು ಒಂದು ಕುದಿಯುವ ಪಾತ್ರೆಯಲ್ಲಿ ಕರಗಿಸಲಾರಿರಿ! (ನಗು) ಆದರೂ ನೀವು ಖಚಿತವಾಗಿ ಹೇಳಬಹುದಾದ ಏಕಮಾತ್ರ ಸಂಗತಿಯು ಇದಾಗಿದೆ, "ಇದೇ ಆಗಿದೆ", ಮತ್ತು ಅದಕ್ಕೆ ಒಂದು ಹೆಸರನ್ನು ಕೊಡಬಹುದು; ಆದಾಗ್ಯೂ ನಿಮ್ಮ ಹೆಸರು ಕೂಡ ಒಂದು ಆಚಾರವಾಗಿದೆ... ಆದರೂ, ನಿಮ್ಮನ್ನು ನೀವು ಒಂದು ನಿರ್ದಿಷ್ಟ ಹೆಸರಿನಿಂದ ಕರೆಯುವ ಅಭ್ಯಾಸವನ್ನು ನೀವು ಹೊಂದಿದ್ದೀರಿ — ಅಂದರೆ, "ಇದು, ಇದು ನಾನಾಗಿದ್ದೇನೆ." ನಿಮ್ಮನ್ನು ನೀವು

ಕನ್ನಡಿಯಲ್ಲಿ ನೋಡಿಕೊಳ್ಳಿರಿ, ಮತ್ತು ಇಪ್ಪತ್ತು ವರ್ಷಗಳ ಹಿಂದೆ ನೀವೇನಾಗಿದ್ದೀರಿ ಎನ್ನುವುದು ಈಗ ನೀವು ಏನಾಗಿದ್ದೀರಿ ಎನ್ನುವುದಕ್ಕಿಂತ ತುಂಬಾ ಭಿನ್ನವಾಗಿದೆ ... ಅದು ಗುರುತಿಸಲಾರದಷ್ಟು ಬದಲಾಗಿದೆ ಆದರೂ ಏನೋ ಒಂದು ನಿಮ್ಮಿಂದ "ಹೌದು, ಇದು ನಾನೇ" ಎಂದು ಹೇಳಿಸುತ್ತದೆ. ಹೌದಾ? "ನಾನು ಇಂಥವನು" – ಪೀಟರ್, ಲೂಯಿಸ್, ಜಾಕ್, ಆಂಡ್ರೆ, ಯಾರೇ ಆಗಿರಬಹುದು...

(ಮೌನದ ನಂತರ) ನಮ್ಮನ್ನು ನಾವು ನೋಡಿಕೊಂಡರೆ, ಪ್ರತಿ ಏಳು ವರ್ಷಗಳಿಗೊಮ್ಮೆ (ದೇಹದ) ಎಲ್ಲಾ ಕೋಶಗಳು ಸಹ ಬದಲಾಗುತ್ತವೆ, ಮತ್ತು ಒಂದು ರೀತಿಯ ಅಭ್ಯಾಸದಿಂದ ಮಾತ್ರ ಅದು ಮೊದಲಿನಂತೆಯೇ ಉಳಿಯುತ್ತದೆ. ಅದು ಅದೇ ರೀತಿ ಉಳಿಯುತ್ತದೆಯೇ? ನಿಮ್ಮ ತುಂಬಾ ಚಿಕ್ಕ ವಯಸ್ಸಿನ ಭಾವಚಿತ್ರಗಳು ನಿಮ್ಮ ಹತ್ತಿರ ಇವೆಯಾ? ಮತ್ತು ನೀವು ಹತ್ತು, ಇಪ್ಪತ್ತು, ಮೂವತ್ತು ವರ್ಷಗಳ ವಯಸ್ಸಿನಲ್ಲಿ ಇದ್ದಾಗಿನ ಭಾವಚಿತ್ರಗಳು — ಏಕೆಂದರೆ ನಾವು ಹಾಗೆ ಮಾಡಬೇಕು ಅನ್ನೋ ಆಸೆಯಿಂದ ನಮ್ಮನ್ನು ನಾವು ಗುರುತಿಸಿಕೊಳ್ಳುತ್ತೇವೆ; ಇಲ್ಲದಿದ್ದರೆ, ನಿಜವಾಗಿಯೂ, ನಾವು ಹಿಂದಿನಂತೆಯೇ ಇರುವುದಿಲ್ಲ.... ನೀವು ಇಷ್ಟು ಎತ್ತರವಿದ್ದಾಗ ಮತ್ತು ಈಗ ನೀವು ಇಷ್ಟೆತ್ತರ ಇರುವಾಗ, ಅದು ಗಮನಾರ್ಹವಾದ ವ್ಯತ್ಯಾಸವನ್ನು ಮಾಡುತ್ತದೆ! ಹಾಗಾಗಿ, ನಾವು ಅದಾಗಿದ್ದೇವೆ...

**ಅಹಂಕಾರದ ಅವಶ್ಯಕತೆ**

ನಾನು ಇದೆಲ್ಲವನ್ನೂ ನಿಮಗೆ ಹೇಳುವುದು ನಿಮ್ಮನ್ನು ನುಂಗಿಹಾಕುವುದಕ್ಕಾಗಿ ಅಲ್ಲ. ನಿಮ್ಮ ಅಹಂಕಾರವನ್ನು ದೇವರಲ್ಲಿ ವಿಲೀನಗೊಳಿಸುವ ಬಗ್ಗೆ ಮಾತನಾಡುವ ಮೊದಲು, ಮೊದಲು ನೀವು ಯಾರು ಎನ್ನುವುದರ ಬಗ್ಗೆ ಕೊಂಚ ತಿಳಿದುಕೊಳ್ಳಬೇಕು ಎಂದು ಹೇಳುವ ಸಲುವಾಗಿ ಮಾತ್ರ ಇದು. ಈ ಅಹಂಕಾರವು ಅಲ್ಲಿದೆ. ನೀವು ಜಾಗೃತರಾಗಬೇಕು, ಸ್ವತಂತ್ರ ಜೀವಿಗಳಾಗಬೇಕು, ವಿಶೇಷ ವ್ಯಕ್ತಿಗಳಾಗಬೇಕು ಎನ್ನುವುದಕ್ಕಾಗಿ ಇದರ (ಅಹಂಕಾರದ) ಅವಶ್ಯಕತೆ ಇದೆ – ಸ್ವತಂತ್ರ ಎಂಬ ಅರ್ಥದಲ್ಲಿ ನಾನು ಹೇಳುವುದು – ನೀವು, ಎಲ್ಲವೂ ಅಡ್ಡಾದಿಡ್ಡಿಯಾಗಿರುವಂಥ ಸಾರ್ವಜನಿಕ ಸ್ಥಾನವಾಗದಿರಲು ಎಂದು! ನೀವು ನಿಮ್ಮಲ್ಲೇ ಇರಲು ಸಾಧ್ಯವಾಗುವಂತೆ. ಅದಕ್ಕಾಗಿಯೇ ಅಹಂಕಾರ ಎಂಬುದು ಅಲ್ಲಿದೆ. ಅದು ಹಾಗಿದೆ; ಅದಕ್ಕಾಗಿಯೇ ಚರ್ಮವೂ ಇದೆ, ಹಾಗೆಯೇ... ಸತ್ಯವಾದರೂ, ಭೌತಿಕ ಶಕ್ತಿಗಳು

ಚರ್ಮದ ಮೂಲಕ ಹಾದು ಹೋಗುತ್ತವೆ. ಕೊಂಚ ದೂರ ಹೋಗುವಂಥ ಒಂದು ಕಂಪನವಿದೆ. ಆದರೂ, ನಾವು ಇನ್ನೊಬ್ಬರೊಳಗೆ ಒಂದಾಗುವುದನ್ನು ತಡೆಯುವುದು ನಮ್ಮ ಚರ್ಮವಾಗಿದೆ. ಆದರೆ ಬೇರೆ ಎಲ್ಲಾ ವಿಷಯಗಳೂ ಕೂಡ ಹಾಗೆಯೇ ಇರಬೇಕು.

(ಕೊಂಚ ನೀರವತೆಯ ನಂತರ) ಆಮೇಲೆ ನಾವು ಇದೆಲ್ಲವನ್ನೂ ದೇವರಿಗೆ ಅರ್ಪಿಸುತ್ತೇವೆ. ಇದಕ್ಕೆ ವರ್ಷಗಳ ಕೆಲಸ ಬೇಕಾಗುತ್ತದೆ. ನೀವು ಕೇವಲ... (ಮೌನ)... ನಿಮ್ಮ ಬಗ್ಗೆ ಜಾಗೃತರಾಗಬೇಕಾಗಿಲ್ಲ, ಎಲ್ಲದರ ಬಗ್ಗೆಯೂ ಜಾಗೃತರಾಗಬೇಕು, ಆದರೆ ನೀವು "ನಿಮ್ಮನ್ನು" ಎಂದು ಕರೆಯುವುದನ್ನು ನಿಮ್ಮ ಚೈತ್ಯ ಕೇಂದ್ರದ, ನಿಮ್ಮ ಅಸ್ತಿತ್ವದ ದೈವೀ ಕೇಂದ್ರದ ಸುತ್ತ ಕ್ರಮಗೊಳಿಸಬೇಕು, ಇದರಿಂದ ಅದು ಪ್ರತ್ಯೇಕ, ಸುಸಂಗತವಾದ, ಸಂಪೂರ್ಣ ಜಾಗೃತವಾದ ಅಸ್ತಿತ್ವವಾಗುತ್ತದೆ. ಮತ್ತು ಈ ದೈವೀ ಕೇಂದ್ರವನ್ನು ಸಂಪೂರ್ಣವಾಗಿ ಈಗಾಗಲೇ ದೇವರಿಗೆ ಮುಡಿಪಿಡಲಾಗಿರುವುದರಿಂದ (ಶ್ರೀಮಾತೆಯವರು ಅರ್ಪಿಸುವ ಸನ್ನೆಯನ್ನು ಮಾಡುತ್ತಾರೆ), ಎಲ್ಲವೂ ಸಾಮರಸ್ಯವಾಗಿ ಅದರ ಸುತ್ತ ಸಂಯೋಜನೆಗೊಂಡರೆ, ಎಲ್ಲವೂ ದೇವರಿಗೆ ಅರ್ಪಿತವಾಗುತ್ತದೆ. ಹಾಗಾಗಿ, ದೇವರು ಅದು ಯೋಗ್ಯವಾಗಿದೆ ಎಂದು ಭಾವಿಸಿದಾಗ, ಸಮಯವು ಕೂಡಿ ಬಂದಾಗ, ಪ್ರತ್ಯೇಕತೆಯ ಕಾರ್ಯವು ಪೂರ್ಣವಾದಾಗ, ದೇವರಲ್ಲಿ ನೀವು ವಿಲೀನಗೊಳ್ಳಲು ಮತ್ತು ಇನ್ನು ಮುಂದೆ ಆತನಿಗಾಗಿ ಮಾತ್ರ ಜೀವಿಸಲು ಅವನು ಅನುಮತಿ ನೀಡುವನು.

ಆದರೆ ಈ ನಿರ್ಣಯವನ್ನು ತೆಗೆದುಕೊಳ್ಳುವವನು ದೇವರಾಗಿರುತ್ತಾನೆ. ನೀವು ಮೊದಲು ಈ ಎಲ್ಲಾ ಕೆಲಸವನ್ನು ಮಾಡಿರಲೇಬೇಕು, ಒಬ್ಬ ಜಾಗೃತ ಜೀವಿಯಾಗಿರಬೇಕು, ಕೇವಲ ಮತ್ತು ವಿಶೇಷವಾಗಿ ದೇವನ ಸುತ್ತ ಕೇಂದ್ರೀಕೃತವಾಗಿ ಮತ್ತು ಆತನಿಂದ ನಿಯಂತ್ರಿತವಾಗಿರಬೇಕು. ಮತ್ತು ಅದೆಲ್ಲ ಆದ ಮೇಲೂ, ಇನ್ನೂ ಒಂದು ಅಹಂಕಾರವಿದೆ; ಏಕೆಂದರೆ ನಿಮ್ಮನ್ನು ಪ್ರತ್ಯೇಕ ವ್ಯಕ್ತಿಯನ್ನಾಗಿಸುವುದು ಈ ಅಹಂಕಾರವಾಗಿದೆ. ಆದರೆ ಈ ಕೆಲಸವು ಪರಿಪೂರ್ಣವಾಗಿ, ಪೂರ್ಣವಾಗಿ ನೆರವೇರಿದ ನಂತರ, ಆ ಕ್ಷಣದಲ್ಲಿ, ನೀವು ದೇವರಿಗೆ ಹೇಳಬಹುದು, "ನಾನಿಲ್ಲಿದ್ದೇನೆ, ನಾನು ಸಿದ್ಧನಾಗಿದ್ದೇನೆ. ನಿಮಗೆ ನಾನು ಬೇಕೇ?" ಮತ್ತು ದೇವರು, ಸಾಮಾನ್ಯವಾಗಿ "ಹೌದು" ಎಂದು ಹೇಳುತ್ತಾನೆ. ಎಲ್ಲವೂ ಮುಗಿದಿದೆ, ಎಲ್ಲವೂ ಪೂರ್ಣಗೊಂಡಿದೆ.

ಮತ್ತು ನೀವು ದೈವೀ ಕೆಲಸಕ್ಕಾಗಿ ನಿಜವಾದ ಸಾಧನವಾಗುತ್ತೀರಿ. ಆದರೆ ಮೊದಲು ಆ ಸಾಧನವನ್ನು ನಿರ್ಮಿಸಲೇಬೇಕು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/253–61 – ಶ್ರೀಮಾತೆ**

ನಾನು ಒಂದೇ ಒಂದು ಸಂಗತಿಯನ್ನು ಕೇಳುತ್ತೇನೆ:
ಅಹಂಕಾರಕ್ಕೆ ಕಿವಿಗೊಡಬೇಡಿ

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 11/308 – ಶ್ರೀಮಾತೆ**

## ಭಯವೇತಕೆ

**– ಅನು: ಶ್ರೀಮತಿ ವಿಶಾಲಾಕ್ಷೀ ಸತ್ಯನ್, ಬೆಂಗಳೂರು**

*ಯಾರಾದರೂ ಏಕೆ ಭಯಪಡುವರು?*

ಏಕೆಂದರೆ ನಾವು ಅಹಂಕಾರಯುಕ್ತರಾಗಿ ಇರುವದರಿಂದ ಎಂಬುದು ನನ್ನ ಭಾವನೆ.

ಇದಕ್ಕೆ ಮೂರು ಕಾರಣಗಳು ಇವೆ. ಮೊದಲನೆಯದು, ನಮ್ಮ ಸುರಕ್ಷತೆಯ ಬಗೆಗಿನ ಅತ್ಯಧಿಕ ಕಾಳಜಿ. ಮುಂದಿನದು ನಮಗೆ ಗೊತ್ತಿಲ್ಲದೇ ಇರುವ ವಿಷಯಗಳು ಒಂದು ಅಸಮಾಧಾನಭರಿತ ಭಾವನೆಯನ್ನು ಯಾವಾಗಲೂ ನಮಗೆ ತರುವುದು. ಚೇತನದಲ್ಲಿ ಅದು ಭಯವಾಗಿ ಪರಿವರ್ತನೆಯಾಗುವದು. ಎಲ್ಲದಕ್ಕಿಂತಲೂ ಹೆಚ್ಚಾಗಿ, ದಿವ್ಯದಲ್ಲಿ ಅಸಂಕಲ್ಪಿತ ಶ್ರದ್ಧೆಯ ಅಭ್ಯಾಸವು ಇಲ್ಲದೆ ಇರುವುದು. ವಿಷಯಗಳಲ್ಲಿ ನಾವು ಸಾಕಷ್ಟು ಆಳವಾಗಿ ಪ್ರವೇಶಿಸಿ ನೋಡಿದರೆ ಇದೇ ನೈಜ ಕಾರಣವಾಗಿರುವದು. 'ಅದು' ಅಸ್ತಿತ್ವದಲ್ಲಿ ಇದೆಯೆಂದು ಅನೇಕ ಜನರಿಗೆ ಗೊತ್ತೇ ಇಲ್ಲ. ಆದರೆ ಬೇರೆ ಮಾತುಗಳಲ್ಲಿ ಅವರಿಗೆ ಹೀಗೆ ಹೇಳಬಹುದು: "ನಿನ್ನ ನಿಯತಿಯಲ್ಲಿ ನಿನಗೆ ನಂಬಿಕೆ ಇಲ್ಲ ಅಥವಾ ಅನುಗ್ರಹದ ಬಗ್ಗೆ ನಿನಗೆ ಏನೇನೂ ಗೊತ್ತಿಲ್ಲ" – ಅದು ಏನೇ ಆಗಿರಲಿ, ನೀನು ಇಷ್ಟ ಬಂದ ಹಾಗೆ ಅದನ್ನು

ತೋರ್ಪಡಿಸಬಹುದು. ಆದರೆ ಶ್ರದ್ಧೆಯಿಲ್ಲದಿರುವದೇ ಅದಕ್ಕೆ ಮೂಲ ಕಾರಣ. ಪ್ರತಿಯೊಂದು ಪರಿಸ್ಥಿತಿಯಲ್ಲೂ ಅತ್ಯುತ್ತಮವಾದುದೇ ಸಂಭವಿಸುವದು ಎಂಬ ನಂಬಿಕೆ ನಿನಗೆ ಇದ್ದರೆ ನಿನಗೆ ಭಯವು ಇರುವದಿಲ್ಲ. ......ತನ್ನೊಳಗೆ ದಿವ್ಯತೆಯ ಸನ್ನಿಧಿ ಇರುವದೆಂಬ ಭಾವನೆಯು ಎಲ್ಲದಕ್ಕಿಂತಲೂ ಬಲಿಷ್ಠವಾದುದು.

ಭಯದಿಂದ ಇದು ಮಾತ್ರ ನಿನ್ನನ್ನು ಗುಣಪಡಿಸುವುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 4/211–12 – ಶ್ರೀಮಾತೆ**

## ಅಹಂ

ಪ್ರಪಂಚದ–ಮಾತೆ ನಿರ್ಮಿಸಿದಳು ಈ ಅಹಂಕಾರದ ಗೊಂಬೆಯನು
ಪ್ರಕೃತಿಯ ಕೆಲಸದ ಚಿಕ್ಕ ಲಾಭಕೋರನು, ಆತನ ಜೀವನ–ಗೇಣಿಯು
ದಾರಿ ತಪ್ಪಿಸಿತು ಆಕೆಯ ಶ್ರದ್ಧೆಯ,
ತನ್ನದೆಂದು ಒತ್ತಿ ಒತ್ತಿ ಹೇಳುವನು, ಹಾಗೆ ಎಲ್ಲಾ ಹೊಣೆಯಲಿ ನುಣುಚಿಕೊಳ್ಳುವನು
ನಮ್ಮ ಜೀವನದ ಪ್ರತಿಯೊಂದು ಚಲನೆಯಲ್ಲಿ ನಮ್ಮ
ಅಹಂಕಾರ ತುಂಬಿಕೊಳ್ಳುವುದು;

ಸತ್ತೆಯ ರೂಪಾಂತರದ ಪ್ರತಿಯೊಂದು ನೂಲಿನೆಳೆಯಲ್ಲಿ ಅಂತರ್ಗತವಾಗಿಹುದು,
ನಮ್ಮ ಸ್ವಾರ್ಥರಹಿತತೆಯನ್ನು ಅತ್ಯಧಿಕವಾಗಿ ಬಡಾಯಿ ಕೊಚ್ಚಿಕೊಂಡಾಗ,
ಕ್ಷುದ್ರ ಭಾಗವೊಂದನ್ನು ಕದಿಯುವದು; ಯಾವ ಮೂಲೆಯನ್ನು ಬರಿದಾಗಿ
ಬಿಡುವುದಿಲ್ಲ.

ಒಂದೇ ಒಂದು ಅನಿರ್ಬಂಧಿತ ಹಾದಿ ಇದೆ; ಅದೇನಮ್ಮ ಹೃದಯ ಮತ್ತು
ಆತ್ಮ ನೀಡುವದು,
ನಮ್ಮ ದೇಹ ಹಾಗೂ ಮನವನು ಕೊಡುವುದು ಮತ್ತು ಪ್ರತಿಯೊಂದು
ಕಣವನು,

ಮತ್ತು ಜೀವಿಸಲು ನಿನ್ನ ಪ್ರಪಂಚದ ಅನಂತತೆಯಲ್ಲಿ ಮುಳುಗಿರುವದು.
ನಂತರ ಬೆಳಕಿನಲ್ಲಿ ಕಳೆದು ಹೋಗಿ, ಅಧಮ ಪ್ರಭಾವವು ಮಸುಕಾಗುವುದು.

ಆಗ ಪ್ರಕೃತಿ, ಆಕೆಯ ಪ್ರತಿರೋಧವ ತೊರೆದು,
ಚೇತನದ ವಿಸ್ತೃತ ಪ್ರಶಾಂತತೆಯ ಒಂದು ಉಸಿರಾಟವಾಗುವಳು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 2/615 – ಶ್ರೀ ಅರವಿಂದರು**

## ಆಧ್ಯಾತ್ಮಿಕ ಅನುಭವಗಳು ಮತ್ತು 'ಅಹಂ'

### ಸಾಧನೆಯಲ್ಲಿ ಅಹಂಕಾರದಿಂದ ಬಿಡುಗಡೆ

ಬಲವಾದ ಅನುಭವಗಳಿಂದ ಸಹಜವಾಗಿ ಸತ್ತೆಯ ಒಂದು ನಿರ್ದಿಷ್ಟ ಆನಂದ ಪರವಶತೆಯು ಆಗಮಿಸುವದು ಮತ್ತು ಪವಾಡ ಅಥವಾ ಬೆರಗಿನ ಭಾವವೂ ಅದರ ಜೊತೆಗೂಡಬಹುದು, ಆದರೆ ಆನಂದಾತಿಶಯದಲ್ಲಿ ಅಹಂಕಾರದ ಭಾವವು ಇರಬಾರದು.

*

ನೀನು ಯಾವುದರ ಬಗ್ಗೆ ಜಾಗರೂಕನಾಗಿರಬೇಕೆಂದರೆ, ಶಕ್ತಿ ಮತ್ತು ಬಲಿಷ್ಠತೆಯ ಭಾವಗಳು ನಿನ್ನೊಳಗೆ ಬಂದಾಗ ಅಥವಾ ನೀನು ಅನುಭವಗಳನ್ನು ಹೊಂದಿದಾಗ, ಯಾವುದೇ ಬಗೆಯ ಅಹಂಕಾರ ಅಥವಾ ಪ್ರಾಣಿಕ ಅಪೇಕ್ಷೆ, ಗರ್ವ, ಮಹತ್ವಾಕಾಂಕ್ಷೆ, ಇತರರ ಮೇಲೆ ಪ್ರಭಾವ ಬೀರಲು ಅಪೇಕ್ಷಿಸುವದು – ನಿನ್ನನ್ನು ವಶಪಡಿಸಿಕೊಳ್ಳಲು ಬಿಡಬಾರದು. ಅದು ಶ್ರೀಮಾತೆಯ ಕಾರ್ಯವನ್ನು ನೆರವೇರಿಸುವ ರೂಪವನ್ನು ತಳೆದಿದ್ದರೂ ಸಹ – ಏಕೆಂದರೆ ಇದೇ ನಿನ್ನ ಅತಿ ದೊಡ್ಡ ದುರ್ಬಲತೆ. ಇದು ಯಾವಾಗಲೂ ಒಳಗೆ ಪ್ರವೇಶಿಸಿ ನಿನ್ನ ಪ್ರಗತಿಯನ್ನು ಹಾಳು ಮಾಡುವುದು. ಮತ್ತು ನೀನು ಅನುಭವಗಳನ್ನು ಪಡೆದಾಗಲೂ ಸಹ ಭಾವೋದ್ವೇಗಕ್ಕೆ ಒಳಗಾಗಿ ಅವುಗಳಿಂದ ಉದ್ರೇಕಿತನಾಗಿ ವಿವೇಚನೆಯನ್ನು ಕಳೆದುಕೊಳ್ಳಬೇಡ. ಏಕೆಂದರೆ, ಹಾಗಾದಾಗ ಅನುಭವಗಳು ಪ್ರಾರಂಭಿಕ ಹಂತದಲ್ಲಿ ಉತ್ತಮವಾದವಾಗಿದ್ದರೂ, ಪ್ರಾಣಿಕ ಶಕ್ತಿಗಳು ಉದ್ವೇಗದಿಂದ ಪ್ರಾಧಾನ್ಯವನ್ನು ಪಡೆದು ತಮ್ಮದೇ ಆದ ಕುರೂಪಗಳೊಂದಿಗೆ ಮುನ್ನುಗ್ಗುವವು ಆಂತರ್ಯದಲ್ಲಿ ಯಾವಾಗಲೂ

ಸಮಾಧಾನವನ್ನು ಹೊಂದಿ ಮೌನವಾಗಿ ಸ್ಥಿರಚಿತ್ತನಾಗಿರು. ಜಾಗರೂಕನಾಗಿರು – ಯಾವಾಗಲೂ ವಿವೇಚಿಸು. ಈ ರೀತಿಯಾಗಿ ಪಡೆದ ಪ್ರಗತಿಯು ಹೆಚ್ಚು ನಿಧಾನವಾಗಿ ಇರಬಹುದು. ಅಥವಾ ಹಾಗೆ ಕಾಣಿಸಬಹುದು ಆದರೆ ಅದು ಹೆಚ್ಚು ನಿಶ್ಚಿತವಾದುದಾಗಿರುವದು.

*

ನೈಜ ಆಧ್ಯಾತ್ಮಿಕ ಅನುಭವವು ಅಹಂಕಾರದೊಂದಿಗೆ ಸಂಬಂಧಿತವಾಗಿರಬಾರದು. ಅಹಂಕಾರವು ಏನು ಮಾಡಬಹುದೆಂದರೆ ಅನುಭವವನ್ನು ಪಡೆದುದಕ್ಕೆ ಹೆಮ್ಮೆಯಿಂದ "ನಾನು ಎಷ್ಟೊಂದು ಶ್ರೇಷ್ಠನಾದವನು" ಎಂದು ಯೋಚಿಸಬಹುದು. ಅಥವಾ ಅದು ಈ ರೀತಿಯೂ ಯೋಚಿಸಬಹುದು, "ನಾನೇ ಆತ್ಮ, ದಿವ್ಯತೆ, ಆದುದರಿಂದ ನನ್ನ ಸಂಕಲ್ಪಕ್ಕೆ ಅನುಗುಣವಾಗಿ ನಾನು ಅಲ್ಲಿ ಹೋಗಿ ಕೆಲಸ ಮಾಡುವೆ. ಏಕೆಂದರೆ ನನ್ನೊಳಗೆ ಸಂಕಲ್ಪಿಸುವುದು ದಿವ್ಯತೆ". ಆತ್ಮದ ಅನುಭವವು ಇತರ ಭಾಗಗಳ ಮೇಲೆ ಮೌನವನ್ನು ಹೇರಿ ಚೈತ್ಯವನ್ನು ಬಿಡುಗಡೆಗೊಳಿಸಿದರೆ ಮಾತ್ರ ಅಹಂಕಾರವು ಕಾಣದಾಗುವದು. ಸ್ವತಃ ಅಹಂಕಾರವೇ ಅಲ್ಲದಿದ್ದರೂ, ಅಹಂಕಾರ ಪ್ರವೃತ್ತಿಯ ಚೂರುಗಳು ಮತ್ತು ಉಳಿಕೆಗಳು ಉಳಿದಿರಬಹುದು. ಅವುಗಳನ್ನು ಸಹ ತೆಗೆದು ಹಾಕಬೇಕು.

*

**ಅಹಂಕಾರವನ್ನು ಕಡಿಮೆ ಮಾಡುವುದು**

ಹೌದು, ಬಲವಾದ ಅನುಭವ ಉಂಟಾದಾಗ, ಅಹಂಕಾರದ ಪ್ರವೃತ್ತಿಯು ಬಹಳ ಕಡಿಮೆಯಾಗುವುದು. ಆದರೆ ಅದು ಸಂಪೂರ್ಣವಾಗಿ ಹೊರಟು ಹೋಗುವುದಿಲ್ಲ. ಉಪಕರಣವಾಗುವುದರ ಮೂಲಕ ಅದು ಆಶ್ರಯ ಪಡೆಯುವುದು ಮತ್ತು – ಚೈತ್ಯದ ತಿರುಗುವಿಕೆ ಇಲ್ಲದಿದ್ದರೆ – ಅದು ಸುಲಭವಾಗಿ ಯಾವುದಾದರೂ ಶಕ್ತಿಯ ಉಪಕರಣವಾಗ ಬಯಸಿ ಅಹಂಕಾರವನ್ನು ತೃಪ್ತಗೊಳಿಸತೊಡಗುವದು. ಅಂತಹ ಸಂದರ್ಭಗಳಲ್ಲಿ, ಅಹಂಕಾರವು ತಾನು ಪ್ರಮುಖ ಪಾತ್ರಧಾರಿಯಲ್ಲದಿದ್ದರೂ ಉದ್ದೇಶ ಸಾಧನೆಯು ತನ್ನಿಂದಲೇ ಆಗುತ್ತಿದೆ ಎಂದು ಭಾವಿಸಿ ಬಲವಾಗಿ ನೆಲೆಯೂರಿರಬಹುದು.

*

ಆಧ್ಯಾತ್ಮಿಕ ಸ್ತರಗಳಲ್ಲಿ ಅಹಂಕಾರವು ಇರುವುದಿಲ್ಲ. ಆದರೂ ಆಧ್ಯಾತ್ಮಿಕ ಅನುಭವವು ಉಂಟಾದಾಗ, ಕೆಳಗಿನ ಸ್ತರಗಳಲ್ಲಿಯ ಅಹಂಕಾರವು ಗರ್ವದ ಮೂಲಕ ಅಥವಾ ಅನುಭವವನ್ನು ತಪ್ಪಾಗಿ ಸ್ವೀಕರಿಸುವುದರ ಮೂಲಕ ಅತಿಶಯಿಸಬಹುದು. ಅಹಂಕಾರವನ್ನು ಯಾರಾದರೂ ವಿಸ್ತಾರವಾದ ವ್ಯಾಪ್ತಿಯುಳ್ಳ ಮಾನಸಿಕ ಮತ್ತು ಭಾವನಾತ್ಮಕ ಸ್ತರಗಳಿಗೆ ಪ್ರವೇಶಿಸುವುದರ ಮೂಲಕವೂ ಅತಿಶಯಿಸಬಹುದು. ಉನ್ನತ ಮತ್ತು ಕೆಳಗಿನ ಚೇತನಗಳು ಸತ್ತೆಯಲ್ಲಿ ಸಾಮರಸ್ಯದಿಂದ ಒಡಗೂಡದಿದ್ದರೆ ಮತ್ತು ಉನ್ನತದ ಸ್ವಭಾವವಾಗಿ ಕೆಳಗಿನದು ಪರಿವರ್ತನೆಯಾಗಿರದಿದ್ದರೆ ಈ ರೀತಿಯ ಕೃತ್ಯಗಳು ಸಂಭವಿಸುತ್ತಲೇ ಇರುವವು.

*

ಅಧಿಮನಸ್ಸಿನ ಶಕ್ತಿಗಳು ಅವರೋಹಿಸಿದಾಗಲಿನ ಮೊದಲ ಫಲಿತಾಂಶವೇ ಅಹಂಕಾರವನ್ನು ಅತಿಶಯಿಸುವುದು. ಆದ್ದರಿಂದ ಆಗ ಅಹಂಕಾರವು ತಾನು ಬಹಳ ಬಲಶಾಲಿ, ಯಾರಿಂದಲೂ ತಡೆಯಲು ಅಸಾಧ್ಯವಾದವನು, ದಿವ್ಯತೆಯನ್ನು ಪಡೆದಿರುವೆ ಹಾಗೂ ಪ್ರಕಾಶಮಾನವಾಗಿರುವೆ ಎಂದು ಆ ಗುಣಗಳನ್ನು ಹೊಂದಿರದಿದ್ದರೂ ಸಹ ಭಾವಿಸುವುದು ಈ ವಿಷಯದ ಬಗ್ಗೆ ಸ್ವಲ್ಪ ಅನುಭವವಾಗುತ್ತಿದ್ದಂತೆ ಮಾಡಬೇಕಾದ ಮೊದಲ ಕೆಲಸವೆಂದರೆ ಈ ಅಧಿಕಗೊಂಡ ಅಹಂಕಾರದಿಂದ ದೂರ ಸರಿಯುವುದು. ಅದಕ್ಕಾಗಿ ನೀನು ಹಿಂದೆ ಸರಿದು ನಿಂತು, ಆ ಚಲನೆಯು ನಿನ್ನನ್ನು ಸೆಳೆದುಕೊಂಡು ಹೋಗದಂತೆ ನೋಡಿಕೊಳ್ಳಬೇಕು. ಆದರೆ ಗಮನಿಸಿ, ಅರ್ಥಮಾಡಿಕೊಳ್ಳಬೇಕು, ಎಲ್ಲಾ ಮಿಶ್ರಣವನ್ನು ನಿರಾಕರಿಸಬೇಕು, ಪರಿಶುದ್ಧವಾದ ಮತ್ತು ಇನ್ನೂ ಹೆಚ್ಚು ಪರಿಶುದ್ಧವಾದ ಬೆಳಕು ಮತ್ತು ಕ್ರಿಯೆಗಾಗಿ ಅಭೀಪ್ಸೆಯನ್ನು ಹೊಂದಿರಬೇಕು. ಚೈತ್ಯವು ಮುಂದೆ ಬಂದರೆ ಮಾತ್ರ ಇದೆಲ್ಲವನ್ನೂ ಪರಿಪೂರ್ಣವಾಗಿ ಮಾಡಲು ಸಾಧ್ಯ. ಮನಸ್ಸು ಮತ್ತು ಭಾವನೆ, ಅದರಲ್ಲೂ ಭಾವನೆ ಇವುಗಳನ್ನು ಸ್ವೀಕರಿಸಿದಾಗ ಗ್ರಹಣ ಮಾಡಿ ಅಹಂಕಾರದ ವಸ್ತುಗಳಿಗಾಗಿ ಉಪಯೋಗಿಸಲು ಸರ್ವೇಸಾಮಾನ್ಯವಾಗಿ ಬಯಸುವದು. ಇದು ಪ್ರಾಯೋಗಿಕವಾಗಿ ಅಹಂಕಾರದ ಅಪೇಕ್ಷೆಗಳನ್ನು ಉನ್ನತ ವಸ್ತುವಿನ ಸೇವೆಯೊಂದಿಗೆ ಮಿಶ್ರಣ ಮಾಡಿದಂತೆಯೇ ಆಗುವದು.

*

## ಸಾಧನೆಯಲ್ಲಿ ಅಹಂಕಾರದ ನೆರಳು

ಯಾರಾದರೂ ಶಾಂತಿ, ಪ್ರಕಾಶ ಮತ್ತು ಪ್ರೇಮದ ತಳಹದಿಯಿಲ್ಲದೆ ಶಕ್ತಿಗಳನ್ನು ಬರಮಾಡಿಕೊಂಡರೆ ನೈಜ ಶಕ್ತಿಗಿಂತಲೂ ಹೆಚ್ಚಾದ ಶಕ್ತಿಯ ಭಾವವು ಇರುವದು. ಕೆಲವು ಮಿಶ್ರಿತ ಮತ್ತು ಸಂಬಂಧಿತವಾಗಿರುವ ಸಾಮರ್ಥ್ಯಗಳು ಇರುವವು – ಕೆಲವೊಮ್ಮೆ ಸ್ವಲ್ಪ ಪರಿಣಾಮಕಾರಿ, ಕೆಲವೊಮ್ಮೆ ಪರಿಣಾಮರಹಿತ – ದಿವ್ಯತೆಯ ನಿಯಂತ್ರಣಕ್ಕೆ ಇವು ಒಳಗಾಗಿ, ಶರಣಾಗತಿಯನ್ನು ತೋರಿದರೆ ಆಗ ಅವುಗಳನ್ನು ನೈಜವಾದ ಶಕ್ತಿಗಳನ್ನಾಗಿ ಅಭಿವೃದ್ಧಿ ಪಡಿಸಬಹುದು. ಆದರೆ ಅಹಂಕಾರವು ಮಧ್ಯೆ ಪ್ರವೇಶಿಸಿ ಅವು ಬಹಳ ಹಿರಿದಾದ ಮತ್ತು ಅನನ್ಯವೆಂಬಂತೆ ತೋರ್ಪಡಿಸಿ ಶರಣಾಗಲು ನಿರಾಕರಿಸುವದು. ಆಗ ಸಾಧಕನು ಪ್ರಗತಿಯನ್ನು ಪಡೆಯುವದಿಲ್ಲ – ಆತನು ತನ್ನದೇ ಆದ ಕಲ್ಪನೆಗಳ ಕಾಡಿನಲ್ಲಿ ಅಲೆಯತೊಡಗುವನು. ಆಗ ಆತನಿಗೆ ವಿಮರ್ಶನಶೀಲತೆಯಾಗಲಿ ಅಥವಾ ವಿವೇಚನೆಯಾಗಲಿ ಇರುವದಿಲ್ಲ. ಆತನು ತನಗೆ ಅರ್ಥವಾಗದಿರುವ ಅಥವಾ ತಾನು ಜಯಸದಿರುವ ಅಸ್ಪಷ್ಟ ಶಕ್ತಿಗಳ ನಡುವೆ ಬಿದ್ದು ತೊಳಲಾಡುವನು.

ಶಕ್ತಿಗಳು ಎಲ್ಲಿ ಬೇಕಾದರೂ ಬರಬಹುದು. ಅಸುರರು ತಮ್ಮ ಶಕ್ತಿಗಳನ್ನು ಹೊಂದಿರುವರು. ಆದರೆ ಆ ಶಕ್ತಿಗಳಿಗೆ ಶಾಂತಿ, ಬೆಳಕು ಮತ್ತು ಪ್ರೇಮವು ಇರುವದಿಲ್ಲ – ಅವು ಅಂಧಕಾರದ ಶಕ್ತಿಗಳಾಗಿರುವವು ಅಷ್ಟೇ.

*

ಮಾನವರು ತಮ್ಮ ಚಿಕ್ಕ ಚಿಕ್ಕ ವ್ಯಕ್ತಿಗತ ಅಹಂಕಾರವನ್ನು ಜಯಿಸಿ ನೆರವು ಮತ್ತು ಬೆಳಕಿಗಾಗಿ ದಿವ್ಯತೆಯ ಕಡೆಗೇ ಹೆಚ್ಚಾಗಿ ತಿರುಗುವಂತೆ ಮಾಡಲು ಕಷ್ಟ ಕಾಲವು ಭೂಮಿಗೆ ಬರುವದು. ಮಾನವನ ಬುದ್ಧಿಯು ಅಜ್ಞಾನಭರಿತವಾಗಿದೆ. ದಿವ್ಯವು ಮಾತ್ರ ಅರಿವನ್ನು ಹೊಂದಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 16/425 – ಶ್ರೀಮಾತೆ**

ಅಲ್ಲಿದ್ದ ವ್ಯಕ್ತಿಯು (ಬಾತ್ಮೀದಾರನ ಸ್ವಪ್ನದಲ್ಲಿ) ಮಾನವ ಸ್ವಭಾವದಲ್ಲಿನ ಅಹಂಕಾರದ ಭಾವನೆಗಳನ್ನು ಸಂಕೇತಿಸುವನು. ಈ ಅಹಂಕಾರವು ಮಾನವನು

ಅಲ್ಪ ಸ್ವಲ್ಪ ಸಾಕ್ಷಾತ್ಕಾರವನ್ನು ಪಡೆದಾಗ, ಇದು ಎಷ್ಟು ದೊಡ್ಡ ಅರಿವು ಎಂದು ಚಿಂತಿಸುವಂತೆ ಮಾಡುವದು. ಜೊತೆಗೆ ನಾನು ಎಷ್ಟು ದೊಡ್ಡ ಸಾಧಕನು ಎನಿಸುವಂತೆ ಮಾಡುವದು. ಆ ಮಾನವನು ಇತರರನ್ನು ಕರೆದು ತನ್ನ ಸಾಧನೆಯನ್ನು ತೋರಿಸಿ ಅವರು ಪ್ರಶಂಸಿಸಲೆಂದು ಬಯಸುವನು – ಬಹುಶಃ ಕನಸಿನಲ್ಲಿ ಇರುವವನು ಚಿಂತಿಸುವ ರೀತಿಯಲ್ಲಿ, "ನಾನು ದಿವ್ಯವನ್ನು ನೋಡಿರುವೆ, ನಿಜಕ್ಕೂ ನಾನು ದಿವ್ಯದೊಂದಿಗೆ ಒಂದಾಗಿರುವೆನೆಂಬ ಅನುಭವವಾಗುತ್ತಿದೆ – ಅದನ್ನು ನೋಡಲು ನಾನು ಪ್ರತಿಯೊಬ್ಬರನ್ನೂ ಕರೆಯುವೆ". ಈ ಮನೋಭಾವನೆಯು ಅನೇಕರ ಸಾಧನೆಗೆ ಅಡ್ಡಿಪಡಿಸಿದೆ. ಕೆಲವೊಮ್ಮೆ ಸಾಧನೆಯನ್ನೂ ಸಂಪೂರ್ಣವಾಗಿ ಹಾಳು ಮಾಡಿದೆ.

ನೀನು ವಿವರಿಸುವ ಚಿಂತನೆಗಳಲ್ಲಿ, ನಿನ್ನಲ್ಲಿರುವದೇನನ್ನೋ ನೋಡಿದೆ, ಅದು ಹೆಚ್ಚು ಕಮ್ಮಿ ಎಲ್ಲಾ ಮಾನವ ಸತ್ತೆಗಳಲ್ಲೂ ಇರುವದು. ಇತರರು ನಿನ್ನ ಬಗ್ಗೆ ಒಳ್ಳೆಯ ಅಭಿಪ್ರಾಯವನ್ನು ಹೊಂದಿ ನಿನ್ನನ್ನು ಗೌರವಿಸಲಿ ನಿನ್ನನ್ನು ಪ್ರೀತಿಸಲಿ ಎಂದು ಬಯಸುವೆ. ಜೊತೆಗೆ ಉತ್ತಮ ಸ್ಥಾನಮಾನ ಮತ್ತು ಪ್ರಶಂಸೆಗಳನ್ನು ಪಡೆಯಬೇಕೆಂದು ಆಶಿಸುವೆ. ಯಾರಾದರೂ ಸಾಧನೆಯ ಕಲ್ಪನೆಗೆ ಈ ಭಾವನೆಯನ್ನು ಸೇರಿಸಿದರೆ ಆಗ ಆ ಮಾನವನು ಅದಕ್ಕಾಗಿ ಸಾಧನೆಗೆ ತೊಡಗುವನು ಮತ್ತು ಆತನು ಪರಿಶುದ್ಧವಾದ ದಿವ್ಯಕ್ಕಾಗಿ ಮಾತ್ರ ಸಾಧನೆ ಮಾಡುವದರಿಂದ ದೂರವಾಗುವನು. ಸ್ವತಃ ಆತನ ಸಾಧನೆಯಲ್ಲಿಯೇ ಏನಾದರೂ ಅಡೆತಡೆಯಾಗಬಹುದು ಅಥವಾ ಆತಂಕ ಉಂಟಾಗಬಹುದು ಅಥವಾ ಪರಿಸ್ಥಿತಿ ಹೀಗಿದ್ದರೂ, ಆಧ್ಯಾತ್ಮಿಕ ಅನುಭವವು ಬಂದರೆ, ಸ್ವಪ್ನದಲ್ಲಿಯ ಮಾನವನ ರೀತಿಯಲ್ಲಿ, ತನ್ನ ಅಹಂಕಾರವನ್ನು ಉಲ್ಬಣಿಸಲು ಅನುಭವವನ್ನೂ ತಪ್ಪಾಗಿ ಉಪಯೋಗಿಸಬಹುದಾದ ಅಪಾಯವೂ ಸಹ ಇದೆ. ಈ ಮಾನವ ದೋಷಗಳು ಯಾವುವು? ಅವುಗಳ ವಿಸ್ತಾರವಾದ ಮತ್ತು ಸ್ಥಿರವಾದ ಜ್ಞಾನ ಮತ್ತು ಅನುಭವವನ್ನು ನಾವು ಪಡೆಯಲೇಬೇಕೆಂದು ಈ ಕನಸುಗಳು ನಮಗೆ ಬರುವವು. ಇದರಿಂದ ನಾವು ಅವುಗಳನ್ನು ದೂರತಳ್ಳಲು ಸಹಾಯವಾಗುವದು. ನಾವು ಅವುಗಳನ್ನು ಗುರುತಿಸಿ, ಜಾಗೃತಾವಸ್ಥೆಯಲ್ಲಿ ಬಂದಾಗ ಅವುಗಳಿಗೆ ಪ್ರವೇಶ ನೀಡಬಾರದು. ಈ ವಿಷಯಗಳು ನಿಮ್ಮೊಳಗೆ ಮಾತ್ರವಲ್ಲ ಎಲ್ಲಾ ಮಾನವ ಸ್ವಭಾವದಲ್ಲಿ ಇರುವವು. ಇವುಗಳನ್ನು ನಾವು ಹೊರದೂಡಬೇಕು ಅಥವಾ ಸಮೀಪ

ಬರದಂತೆ ಮುನ್ನೆಚ್ಚರಿಕೆ ವಹಿಸಬೇಕು. ಆಗ ಮಾತ್ರ ಸಂಪೂರ್ಣ, ಸ್ವಾರ್ಥರಹಿತ, ಸತ್ಯ ಮತ್ತು ಪರಿಶುದ್ಧವಾಗಿರುವದು ನಮ್ಮ ದಿವ್ಯದ ಕಡೆಗಿನ ಸಮರ್ಪಣೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 30/29–32 – ಶ್ರೀ ಅರವಿಂದರು**

## ಅಹಂಕಾರದ ಮುಂದಿನದು: ದಿವ್ಯ ಪ್ರೇಮದ ಅನ್ವೇಷಣೆ

ಒಂದು ಅಗಾಧವಾದ ಶಕ್ತಿಯಾಗಿ ತನ್ನ ಎಲ್ಲಾ ತೀವ್ರತೆಗಳೊಂದಿಗೆ ಇರುವುದು ದಿವ್ಯ ಪ್ರೇಮ. ಆದರೆ ಬಹುಪಾಲು ಜನರು – ಅಂದರೆ ಶೇಕಡ 99% ಜನರು – ಇದರ ಅನುಭವವನ್ನು ಹೊಂದುವುದೇ ಇಲ್ಲ. ತಾವೇನಾಗಿದ್ದಾರೋ, ಆ ಪ್ರಮಾಣಕ್ಕೆ ಅನುಗುಣವಾಗಿ ಅವರು ಅದನ್ನು ಅನುಭವಿಸುವರು; ಈ ರೀತಿ ಕಲ್ಪಿಸಿಕೊಳ್ಳಿ, ಉದಾಹರಣೆಗೆ, ದಿವ್ಯ ಪ್ರೇಮದಿಂದ ಒಡಗೂಡಿದ ಕಂಪನಭರಿತ ವಾತಾವರಣದಲ್ಲಿ ನೀವು ಮುಳುಗಿರುವಿರೆಂದುಕೊಳ್ಳಿ – ನೀವು ಅದರ ಬಗ್ಗೆ ಸಂಪೂರ್ಣವಾಗಿ ಜಾಗೃತರಾಗಿಲ್ಲ. ಕೆಲವೊಮ್ಮೆ, ಬಹಳ ಅಪರೂಪವಾಗಿ, ಕೆಲವು ಕ್ಷಣಗಳ ಕಾಲ, "ಏನೋ ಒಂದರ" ಅನುಭವವು ಇದ್ದಕ್ಕಿದ್ದಂತೆ ಆಗುವದು. ಆಗ ನೀವು ಈ ರೀತಿ ಹೇಳುವಿರಿ, "ದಿವ್ಯ ಪ್ರೇಮವು ನನ್ನ ಬಳಿ ಬಂದಿತು!" ಎಂತಹ ತಮಾಷೆ! ನೀವು ಸಹಜವಾಗಿ ಯಾವುದೋ ಒಂದು ಕಾರಣಕ್ಕೆ, ಸ್ವಲ್ಪಮಟ್ಟಿಗೆ ನಿಮ್ಮನ್ನು ನೀವು ತೆರೆದುಕೊಂಡಿದ್ದಿರಿ. ಆದುದರಿಂದ ನಿಮಗೆ ಅದರ ಅನುಭವವಾಯಿತು. "ಆದರೆ ಅದು ದಿವ್ಯ ಪ್ರಜ್ಞೆಯ ರೀತಿಯಲ್ಲಿ ಯಾವಾಗಲೂ ಇದೆ. ಪುನಃ ಅದೇ ವಿಷಯ. ಅದು ಎಲ್ಲಾ ಕಾಲದಲ್ಲಿಯೂ ತೀವ್ರ ಗತಿಯಲ್ಲಿ ಇರುವದು. ಆದರೆ ನಮಗೆ ಅದರ ಅರಿವು ಇಲ್ಲ. ಅಥವಾ ಈ ರೀತಿಯಲ್ಲಿ, ವಿಚ್ಛಿನ್ನವಾಗಿ; ಇದ್ದಕ್ಕಿದ್ದಂತೆ ನಾವು ಉತ್ತಮ ಅವಸ್ಥೆಯಲ್ಲಿ ಇರುವೆವು, ಆದರಿಂದ ಯಾವುದೋ ಅನುಭವವನ್ನು ಪಡೆಯುವೆವು ಮತ್ತು ಆಗ ಹೀಗೆ ಹೇಳುವೆವು; ಓ ದಿವ್ಯ ಚೇತನ, ದಿವ್ಯ ಪ್ರೇಮವು ನನ್ನ ಕಡೆ ತಿರುಗಿದೆ, ನನ್ನ ಬಳಿಗೆ ಬಂದಿದೆ!" ಅದು ಹಾಗೆ ಅಲ್ಲವೇ ಅಲ್ಲ. ನಾವು ಬಹಳ ಚಿಕ್ಕದಾಗಿ ತೆರೆದುಕೊಂಡಿದ್ದೇವೆ. ಬಹಳ ಚಿಕ್ಕದಾಗಿ, ಒಂದು ಸೂಜಿಯ ಮೊನೆಯಷ್ಟು ಮತ್ತು ಸಹಜವಾಗಿ ಆ ಶಕ್ತಿಯು ಒಳಗೆ ನುಗ್ಗುವದು. ಏಕೆಂದರೆ ಅದು ಒಂದು ಕ್ರಿಯಾಶೀಲ ವಾತಾವರಣದಂತೆ ಇದೆ; ಸ್ವೀಕರಿಸಬಹುದಾದ

ಸಾಧ್ಯತೆಯು ಉಂಟಾಗುತ್ತಿದ್ದಂತೆ, ಅದನ್ನು ಸ್ವೀಕರಿಸಲಾಗುವದು. ಆದರೆ ಇದು ಎಲ್ಲಾ ದಿವ್ಯ ವಿಷಯಗಳಿಗೂ ಅನ್ವಯಿಸುವದು. ಅವುಗಳು ಇರುವವು. ನಾವು ಅದನ್ನು ಸ್ವೀಕರಿಸುವುದಿಲ್ಲ ಅಷ್ಟೇ. ಏಕೆಂದರೆ ನಾವು ಮುಚ್ಚಿ ಹೋಗಿರುವೆವು, ತಡೆಯು ನಮ್ಮನ್ನು ಬಾಧಿಸುತ್ತಿದೆ; ಹೆಚ್ಚು ಸಮಯ ಇತರ ವಿಷಯಗಳಲ್ಲಿ ಮಗ್ನರಾಗಿರುವೆವು. ಹೆಚ್ಚು ಸಮಯ ನನ್ನಿಂದಲೇ ನಾನು ತುಂಬಿಹೋಗಿರುವೆ. ಹೀಗಾಗಿ, ಅಹಂಕಾರ ಅಥವಾ ನಾನೇ ತುಂಬಿರುವದರಿಂದ ಇನ್ನೇನಕ್ಕೂ ಜಾಗವಿಲ್ಲದಾಗಿದೆ. ಬಹಳ ಕ್ರಿಯಾಶೀಲರಾಗಿ (ನಗು) ಇತರ ವಿಷಯಗಳಲ್ಲಿ ಮುಳುಗಿಹೋಗಿರುವೆವು. ವಿಷಯಗಳಿಂದ ನಾವು ತುಂಬಿರುವೆವು, ದಿವ್ಯಕ್ಕೆ ಸ್ಥಳವಿಲ್ಲದಾಗಿದೆ.

ಆದರೆ ಆತನು ಇರುವನು. ನಿನ್ನ ಸುತ್ತಮುತ್ತಲೂ ಇರುವ ಎಲ್ಲ ಅದ್ಭುತಗಳಂತೆಯೇ ಅದು ಸಹ; ನೀನು ಅದನ್ನು ನೋಡುವದೇ ಇಲ್ಲ. ನೀನು ಅವುಗಳನ್ನು ನೋಡುವೆಯಾ?... ಇಲ್ಲ. ಕೆಲವೊಮ್ಮೆ, ನೀನು ಸ್ವಲ್ಪ ಅಧಿಕ ಗ್ರಹಣ ಶಕ್ತಿಯನ್ನು ಹೊಂದಿರುವ ಕ್ಷಣದಲ್ಲಿ, ಅಥವಾ ನಿದ್ದೆ ಮಾಡುತ್ತಿರುವಾಗ ನಿನ್ನ ಸಣ್ಣ ಸಣ್ಣ ವಿಷಯಗಳ ಬಗ್ಗೆ ನೀನು ನಿರ್ದಿಷ್ಟವಾಗಿ ಚಿಂತಿಸುತ್ತಿರುವದಿಲ್ಲ ಆಗ ಯಾವುದೋ ಒಂದು ವಿಷಯದ ಕಿರಣವು ನಿನಗೆ ಕಾಣುವದು. ಏನೋ ಒಂದು ಅನುಭವವಾಗುವದು. ಆದರೆ ಸಾಮಾನ್ಯವಾಗಿ, ನೀನು ಪುನಃ ಜಾಗೃತಾವಸ್ಥೆಗೆ ಬರುತ್ತಿದ್ದಂತೆ ಇದೆಲ್ಲವೂ ಅಳಿಸಿ ಹೋಗುವುದು – ಮೊದಲಿಗೆ ನಿನಗೆ ಗೊತ್ತಿದ್ದಂತೆ ತನ್ನಿಂದಲೇ ತನ್ನನ್ನು ಸಂಪೂರ್ಣವಾಗಿ ತುಂಬಿಸಿಕೊಂಡಿರುವ ಅಹಂಕಾರದ ಮೂಲಕ ನೋಡತೊಡಗುವೆ, ಮತ್ತು ಇಡೀ ವಿಶ್ವವು ಈ ಅಹಂಕಾರಕ್ಕೆ ಅನುಗುಣವಾಗಿಯೇ ಚಲಿಸುವದು: ನೀನು ಮಧ್ಯದಲ್ಲಿ ಇರುವೆ, ಮತ್ತು ವಿಶ್ವವು ನಿನ್ನ ಸುತ್ತಲೂ ತಿರುಗುವದು. ನೀನು ಗಮನವಿಟ್ಟು ನಿನ್ನ ಕಡೆ ನೋಡಿದಾಗ, ಅದು ಆ ರೀತಿ ಇರುವದನ್ನು ನೀನು ನೋಡುವೆ. ವಿಶ್ವದ ಬಗೆಗಿನ ನಿನ್ನ ದರ್ಶನ ಅಂದರೆ ನೀನು ಮಧ್ಯದಲ್ಲಿ ಮತ್ತು ಸುತ್ತಮುತ್ತಲೂ ವಿಶ್ವ. ಆದುದರಿಂದ ಬೇರೆ ಇನ್ನೇನಕ್ಕೂ ಅಲ್ಲಿ ಜಾಗವಿಲ್ಲ. ಹೀಗಾಗಿ ನೀನು ನೋಡುವುದು ವಿಶ್ವವಲ್ಲ. ವಿಶ್ವದಲ್ಲಿಯ ನಿನ್ನನ್ನು ನೀನು ನೋಡುವೆ. ಆದುದರಿಂದ, ಮೊದಲಿಗೆ ಪ್ರಾರಂಭಿಸಲು ನಾವು ಅಹಂಕಾರದಿಂದ ಹೊರ ಬರಬೇಕು. ನಂತರ ನಿನಗೆ ಅರ್ಥವಾಯಿತೇ? ಅದು ಅಸ್ತಿತ್ವದಲ್ಲಿ ಇಲ್ಲದೆ ಇರುವ ನಿರ್ದಿಷ್ಟ ಅವಸ್ಥೆಗೆ ಬರಬೇಕು. ಆಗ ವಸ್ತುಗಳು ಇರುವ

ಸಹಜ ಸ್ಥಿತಿಯಲ್ಲಿ ನೀನು ಅವುಗಳನ್ನು ನೋಡುವೆ. ನಂತರ, ಸ್ವಲ್ಪ ಉನ್ನತ ಜಾಗದಿಂದ ಅವುಗಳಿರುವ ಸಹಜ ಸ್ಥಿತಿಯನ್ನು ಗಮನಿಸುವೆ. ಆದರೆ ವಸ್ತುಗಳ ನೈಜವಾಗಿ ಹೀಗೆ ಇರುವವೆಂಬುದನ್ನು ತಿಳಿಯಲು ನೀನು ಸಂಪೂರ್ಣವಾಗಿ ಒಂದು ಕನ್ನಡಿಯಂತೆ ಇರಬೇಕು. ಮೌನವಾಗಿ, ಶಾಂತವಾಗಿ, ಅಚಲನಾಗಿ, ಪಕ್ಷಪಾತವಿಲ್ಲದೆ, ಯಾರಿಗೂ ಅಧಿಕ ಆದ್ಯತೆ ನೀಡದೆ ಸಮಗ್ರ ಗ್ರಹಣದ ಅವಸ್ಥೆಯಲ್ಲಿ ಇರಬೇಕು. ನೀನು ಹಾಗೆ ಇದ್ದಾಗ, ನೀನು ಗಮನಿಸದೆ ಇರುವ ಅನೇಕ ವಿಷಯಗಳು ಇರುವವೆಂಬ ಸತ್ಯವು ನಿನಗೆ ಗೋಚರಿಸುವದಲ್ಲದೆ ಅವು ನಿನ್ನಲ್ಲಿ ಕ್ರಿಯಾಶೀಲವಾಗ ತೊಡಗುವವು.

ಆಗ ನೀನು ವಿಶ್ವದಲ್ಲಿರುವ ಒಂದು ಚಿಕ್ಕ ಚುಕ್ಕೆಯೊಳಗೆ ಬೇರೆಯಾಗಿ ಇರುವ ಬದಲು ಆ ವಿಷಯಗಳಲ್ಲಿ ಇರಲು ಸಾಧ್ಯವಾಗುವದು. ನಿನ್ನ ಅಹಂಕಾರದಿಂದ ದೂರ ಸರಿಯಲು ಅನೇಕ ವಿಧಾನಗಳು ಇವೆ. ಆದರೆ ನಿನ್ನ ಪ್ರಕಾರ ಮಾತ್ರವಲ್ಲದೆ ವಸ್ತುಗಳು ನಿಜಕ್ಕೂ ಯಾವ ರೀತಿ ಇವೆ ಎಂದು ಅರಿಯಲು ನೀನು ಪ್ರಾರಂಭಿಸಿದರೆ ಆಗ ಅದು ಅನಿವಾರ್ಯವಾಗುವದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/134–138 – ಶ್ರೀಮಾತೆ**

## ‘ಅಹಂ’ಕಾರವನ್ನು ತ್ಯಜಿಸಲೇಬೇಕು

**– ಅನು: ಶ್ರೀ ಕಿಶೋರಕುಮಾರ ಕಾಸಾರ, ಕಲಬುರ್ಗಿ**

### ಅಹಮಿಕೆಯ ಕಾಲವು ಮುಗಿದಿದೆ

ಶತ ಶತಮಾನಗಳಿಂದ ಮನುಕುಲವು ಈ ಸಮಯಕ್ಕಾಗಿ ಕಾಯುತ್ತಿದೆ. ಅದು ಈಗ ಬಂದಿದೆ. ಆದರೆ, ಅದು ಬಹಳ ಕಷ್ಟಕರವಾಗಿದೆ.

ನಾನು ನಿಮಗೆ ಹೇಳುತ್ತಿರುವುದೇನೆಂದರೆ, ನಾವು ಈ ಭೂಮಿಯಲ್ಲಿ ಕೇವಲ ವಿಶ್ರಾಂತಿ ಪಡೆಯಲು ಅಥವಾ ಆನಂದವನ್ನು ಹೊಂದಲು ಬಂದಿಲ್ಲ. ಬದಲಿಗೆ ನವ್ಯ ಸೃಷ್ಟಿಯೊಂದರ ರಚನೆಗೆ ಮಾರ್ಗವನ್ನು ಕಲ್ಪಿಸಲು ಬಂದಿದ್ದೇವೆ.

ನೀವು ಈ ಕ್ಷಣ ಭೂಮಿಯ ಮೇಲಿದ್ದೀರಿ ಎಂದರೆ, ಹಿಂದೊಂದು ಕಾಲದಲ್ಲಿ ನೀವೇ ಈ ಭೂಮಿಯನ್ನು ಆಯ್ಕೆ ಮಾಡಿಕೊಂಡಿದ್ದೀರಿ ಎಂದರ್ಥ. ನಿಮಗೀಗ

ಅದರ ನೆನಪಿಲ್ಲದಿರಬಹುದು. ಆದರೆ, ನನಗೆ ಅದರ ನೆನಪಿದೆ. ಹಾಗಾಗಿ ನನಗೆ ಅದು ಗೊತ್ತಿದೆ. ನಮ್ಮ ಆಯ್ಕೆಯ ಮೇರೆಗೆಯೇ ನಾವು ಇಲ್ಲಿ ಬದುಕುತ್ತಿದ್ದೇವೆ. ಬರಲಿರುವ ಆ ನವ್ಯ ಸೃಷ್ಟಿಯ ರಚನೆಯ ಕಾರ್ಯಕ್ಕೆ ನಾವು ಉನ್ನತಿಯನ್ನು ಸಾಧಿಸಬೇಕಿದೆ. ಅದಕ್ಕಾಗಿ ಶ್ರಮಿಸಬೇಕಿದೆ. ನಮ್ಮೆಲ್ಲ ದೌರ್ಬಲ್ಯಗಳನ್ನು, ನಮಗೆ ನಾವೇ ಹಾಕಿಕೊಂಡ ಗಡಿರೇಖೆಗಳನ್ನು ಜಯಿಸಬೇಕಿದೆ. ಎಲ್ಲದಕ್ಕೂ ಮೊದಲು ನಿಮ್ಮೊಳಗೆ ಮನೆ ಮಾಡಿರುವ ಅಹಮಿಕೆಗೆ "ನಿನ್ನ ಸಮಯವು ಮುಗಿದಿದೆ." ಎಂದು ಅದನ್ನು ನಮ್ಮೊಳಗಿಂದ ಹೊರದಬ್ಬಬೇಕಿದೆ. ಏಕೆಂದರೆ, ನಮಗೆ ಅಹಮಿಕೆಯ ಅಡಿಯಾಳಾಗಿರುವ ಜನರು ಬೇಕಿಲ್ಲ. ಬದಲಿಗೆ ದಿವ್ಯ ಪ್ರಜ್ಞೆಯನ್ನು ಹೊಂದಿರುವ ಜನಾಂಗವು ಬೇಕಿದೆ. ಬರಲಿರುವ ಆ ದಿವ್ಯ ಜನಾಂಗವು ಭೂಮಿಯಲ್ಲಿ ಸುಪ್ರಮಾನಸದ ಸೃಷ್ಟಿಗೆ ಅವಕಾಶ ಮಾಡಿಕೊಡುತ್ತಾರೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 11/307**

ಅಹಮಿಕೆಯು ತೊಲಗಿ ತೆರವಾದ ನಮ್ಮೊಳಗಿನ ತಾಣದಲ್ಲಿ ದಿವ್ಯ ಪ್ರಜ್ಞೆಯನ್ನು ತಂದು ಸ್ಥಾಪಿಸಬೇಕು. ಶ್ರೀ ಅರವಿಂದರೇ ಸ್ವತಃ ಇದನ್ನು ಸುಪ್ರಮಾನಸ ಎಂದು ಕರೆದಿದ್ದಾರೆ. ನಮ್ಮ ನಮ್ಮೊಳಗೇ ತಪ್ಪು ತಿಳುವಳಿಕೆಗಳು ಹರಿದಾಡಬಾರದೆಂದು ನಾವೆಲ್ಲರೂ ಅದನ್ನು ಸುಪ್ರಮಾನಸವೆಂದೇ ಕರೆಯಬೇಕು. ಏಕೆಂದರೆ ಯಾರಾದರೂ ತಪ್ಪಿ ಅದನ್ನು "ದಿವ್ಯತೆ" ಎಂದು ಕರೆದರೆ, ಉಳಿದವರು ಅದನ್ನು "ದೈವೀಕತೆ" ಅಥವಾ "ಭಗವಂತ" ಎಂದು ಕಲ್ಪಿಸಿಕೊಂಡು ಎಲ್ಲ ವ್ಯವಸ್ಥೆಯನ್ನು ಹಾಳು ಮಾಡಿಬಿಡುತ್ತಾರೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 11/316**

ಮೊಟ್ಟಮೊದಲು ಮನುಕುಲವು ಸೃಷ್ಟಿಯಾದಾಗ ಅಹಮಿಕೆಯು ಒಂದು ಸಮನ್ವಯದ ಅಂಶವಾಗಿತ್ತು. ಆ ಅಹಮಿಕೆಯ ಸುತ್ತಲೂ ವಿವಿಧ ರೂಪದ ಸ್ಥಿತಿಗಳನ್ನು ಒಟ್ಟು ಮಾಡಲಾಗಿತ್ತು. ಆದರೆ, ಈಗ ಅತಿಮಾನವತೆಯ ಅವತರಣವಾಗುವದರಿಂದ ಈ ಅಹಮಿಕೆಯ ನಾಶವಾಗಬೇಕಿದೆ. ಮತ್ತು ಈ ಮೊದಲು ಅಹಮಿಕೆಯು ಆಕ್ರಮಿಸಿಕೊಂಡು ಈಗ ತೆರವಾದ ಆ ಕ್ಷೇತ್ರದಲ್ಲಿ ಚೈತ್ಯ ಪುರುಷನನ್ನು ತಂದು ಸ್ಥಾಪಿಸಬೇಕು. ಮರ್ತ್ಯತೆಯಲ್ಲಿ ದಿವ್ಯತೆಯನ್ನು ತಂದಿಳಿಸುವ ಆ ದಿವ್ಯ ಹಸ್ತಕ್ಷೇಪದ

ಕಾರಣದಿಂದಾಗಿ ಈ ಚೈತ್ಯ ಪುರುಷನು ರೂಪುಗೊಂಡಿದ್ದಾನೆ. ಈ ಚೈತ್ಯ ಪುರುಷನ ಪ್ರಭಾವದ ಅಡಿಯಲ್ಲಿಯೇ ಈ ಮರ್ತ್ಯಕ್ಕೆ ಆ ದಿವ್ಯತೆಯ ಅವತರಣವಾಗುತ್ತದೆ. ಆ ಮೂಲಕದ ಸುಪ್ರಮಾನಸವನ್ನು ಸೃಷ್ಟಿಸುತ್ತದೆ. ಈ ಚೈತ್ಯವು ಅಮರ ಚಿರಂತಯನವಾದುದರಿಂದ ಅವನ ಕಾರ್ಯದಲ್ಲಿ ಈ ಮರ್ತ್ಯವನ್ನೂ ಅಮರ್ತ್ಯವಾಗಿಸಲು ಸಾಧ್ಯವಿದೆ. ಈಗ ನಮ್ಮ ಮುಂದಿರುವ ಮೊದಲ ಕಾರ್ಯವೆಂದರೆ, ನಮ್ಮೊಳಗಿರುವ ಅಹಮಿಕೆಯನ್ನು ತೊಲಗಿಸಿ ಅಲ್ಲಿ ಚೈತ್ಯ ಪುರುಷನನ್ನು ತಂದಿರಿಸಿಕೊಳ್ಳುವುದು. ಅಂದಿನಿಂದಲೇ ರೂಪಾಂತರಣವು ಆರಂಭಗೊಳ್ಳುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 11/434**

**ಅದಕ್ಕೆ ಒಂದೇ ಒಂದು ಮಾರ್ಗವಿದೆ**

ಆ ಸಾಧನೆಯ ಮಟ್ಟವನ್ನು ಏರಬೇಕಾದರೆ ನಮಗೆ ಒಂದೇ ಒಂದು ಮಾರ್ಗವಿದೆ. ಅದುವೇ ಅಹಮಿಕೆಯ ನಾಶ! ಯಾವಾಗ ನಮ್ಮಲ್ಲಿರುವ 'ನಾನು' ಎಂಬ ಭಾವನೆಯು ಅಳಿದು ಅಲ್ಲಿ ಶೂನ್ಯವು ತುಂಬುತ್ತದೆಯೋ ಆಗ ಮಾತ್ರ ಅದು ಸಾಧ್ಯವಾಗತ್ತದೆ. ಅದರ ಅನುಭೂತಿಯು ಒಂದು ರೀತಿಯಲ್ಲಿ ಸಮತಟ್ಟಾದ (ಅಪರಿಮಿತವಾದ, ನಯವಾದ, ಎಗ್ಗು–ತಗ್ಗುಗಳಿಲ್ಲದ ಯಾವುದೋ ಒಂದು ಸ್ಥಿತಿಯನ್ನು ಅದು ಸೂಚಿಸುತ್ತದೆ) ಸ್ಥಿತಿಯಾಗಿದೆ. ಅದನ್ನು ಪದಗಳಿಂದ ವರ್ಣಿಸಲು ಸಾಧ್ಯವಿಲ್ಲ. ಆದರೆ, ಅದು ನಿನ್ನ ಬೇಕು–ಬೇಡಿಕೆಗಳಿಗೆಲ್ಲ ಸ್ಪಂದಿಸುವ (ಇದನ್ನು ವಿವರಿಸುವ ಹಂತದಲ್ಲಿ ಶಬ್ದಗಳೂ ಸಹ ಸಣ್ಣದಾಗಿ ತೋರುತ್ತವೆ.) ಒಂದು ಸ್ಥಿರ ಸಂವೇದನಾ ಸ್ಥಿತಿಯಾಗಿದೆ. ವಾಸ್ತವವಾಗಿ ಹೇಳಬೇಕಾದರೆ, ಆ ಧೃಡವಾದ ಸಂವೇದನ್ನು ಅನುಭವಿಸಲು 'ಇದಕ್ಕೆ' (ದೇಹಕ್ಕೆ) ಸಾಧ್ಯವಿಲ್ಲ. ಇದನ್ನು ಕೇವಲ ಚಟುವಟಿಕೆಗಳಿಗಾಗಿ ಮಾತ್ರ ಬಳಸಲಾಗಿದೆ. ಅದರ ಅನುಭೂತಿಯನ್ನು ಪಡೆಯಲು 'ಅದಕ್ಕೆ' ಮಾತ್ರ ಸಾಧ್ಯ. ಅದು ಮಾತ್ರ ಈ ರೀತಿಯಾಗಿ ಮಾಡುತ್ತದೆ. (ಒತ್ತಡದ ಸನ್ನೆಯನ್ನು ತೋರಿಸುತ್ತಾ) ಕೊನೆಯಲ್ಲಿ ನೀವು ಅದರ ಅನುಭೂತಿ, ಅದರ ಪ್ರಜ್ಞಾಪೂರ್ವಕವಾದ ವೈಶಾಲ್ಯತೆ(ಶ್ರೀಮಾತೆಯವರು ತಮ್ಮ ತೋಳುಗಳನ್ನು ಚಾಚುತ್ತಾ ತೋರಿಸುತ್ತಾರೆ)ಗಳನ್ನೆಲ್ಲ ಕಂಡುಕೊಳ್ಳುತ್ತೀರಿ. (ಇಲ್ಲಿ 'ಕಂಡುಕೊಳ್ಳುವುದು'

ಎಂದರೆ, ಅದು ಕೇವಲ ಚಿತ್ರರೂಪದಲ್ಲಿರುವ ಕಾಣ್ಕೆಯಲ್ಲ. ಅದೊಂದು ದರ್ಶನ... ಅದು ಯಾವ ರೂಪದಲ್ಲಿ ದರ್ಶನವನ್ನು ನೀಡುತ್ತದೆಯೋ ನನಗೆ ಗೊತ್ತಿಲ್ಲ. ಆದರೆ ಅದು ಕಾಣ್ಕೆಗಿಂತಲೂ ಹಿರಿದಾದ ಸಾಕ್ಷಾತ್ಕಾರವಾಗಿದೆ.) ಆ ದರ್ಶನದಲ್ಲಿ ಅನಂತ ಶಕ್ತಿ ಮತ್ತು ಅತಿಯಾದ ಒತ್ತಡವನ್ನು ಹಾಕುತ್ತಿರುವ ವಿಶಾಲವಾದ ಕಂಪನಗಳ ಅನುಭವವಾಗುತ್ತದೆ.

ಆ ಒತ್ತಡದಡಿಯಲ್ಲಿ ಸಿಲುಕಿ ಒದ್ದಾಡುವ ಭೂಮಿಯು ಅದರ ಒತ್ತಡವನ್ನು ತಡೆದುಕೊಳ್ಳದೆ ಯಾವಾಗ ತೆರೆದುಕೊಳ್ಳುತ್ತದೆಯೋ ಆಗ 'ಅದು' ಬಂದು ಭೂಮಿಯೊಳಗಡೆ ಪ್ರವಹಿಸುತ್ತದೆ.

ಇದು ನಿಜಕ್ಕೂ ಕುತೂಹಲಕರವಾದ ಸಂಗತಿಯಾಗಿದೆ.

ಇದುವೇ ಏಕೈಕ ಪರಿಹಾರವಾಗಿದೆ. ಇದನ್ನು ಹೊರತುಪಡಿಸಿದರೆ ಬೇರಾವ ಅಭೀಪ್ಸೆ, ಪರಿಕಲ್ಪನೆ, ನಿರೀಕ್ಷೆಗಳಾವುವೂ ಇದನ್ನು ಸಾಧಿಸಲು ಸಾಧ್ಯವಿಲ್ಲ. ಇದಿನ್ನೂ ಅತಿಮಾನವ ಹಂತವಾಗಿದೆ. ಸುಪ್ರಮಾನಸದ ಹಂತವಲ್ಲ. ಇದು ಮರ್ತ್ಯವನ್ನು ಊರ್ಧ್ವದೆಡೆಗೆ ಹಿಡಿದೆತ್ತಲು ಪ್ರಯತ್ನಿಸುತ್ತಿರುವ ಅಧಿಮಾನವತೆಯಾಗಿದೆ. ಆದರೆ ಕೇವಲ ಇದರಿಂದ ಯಾವುದೇ ಪ್ರಯೋಜನೆಯಿಲ್ಲ.

ಈ ಮಾನವ ಕುಲದ ಚಿತ್ರಣವು ಬಹು ಸ್ಪಷ್ಟವಾಗಿದೆ. ಈ ಮನುಕುಲವು ಊರ್ಧ್ವದೆಡೆಗೆ ಆರೋಹಿಸಲು ಹರಸಾಹಸ ಪಡುತ್ತದೆ. ಇದು ಔನ್ನತ್ಯವನ್ನು ಮುಟ್ಟಲು, ಅದನ್ನು ಸಂಪಾದಿಸಲು ಪ್ರಯತ್ನಿಸುತ್ತಿರುತ್ತದೆ. ಆದರೆ, ಅದಕ್ಕಾಗಿ ತನ್ನತನವನ್ನು ಮಾತ್ರ ಬಿಟ್ಟುಕೊಡುವದಿಲ್ಲ. ಈ ಸಂದಿಗ್ಧತೆಯಿಂದಲೇ ಈ ಮರ್ತ್ಯಕ್ಕಿನ್ನೂ ಅಧಿರೋಹಣವು ಸಾಧ್ಯವಾಗಿಲ್ಲ. ಈ ಮರ್ತ್ಯವು ಮೊದಲು ಶರಣಾಗತಿಯನ್ನು ಸಾಧಿಸಬೇಕು. ಆಗ ಮಾತ್ರ ಆ ಔನ್ನತ್ಯವು ಬಂದು ಅದರೊಳಗೆ ಸ್ಥಾಪನೆಯಾಗುತ್ತದೆ.

ಸಂಪೂರ್ಣವಾದ ರಹಸ್ಯವು ಇಲ್ಲೇ ಇದೆ.

ಉದಾಹರಣೆಗೆ ಮರ್ತ್ಯವು ಎಲ್ಲಾ ವಸ್ತುಗಳನ್ನು ಬಲವಂತವಾಗಿ ಪಡೆದುಕೊಳ್ಳಲು, ಅವುಗಳನ್ನು ಎತ್ತಿಕೊಳ್ಳಲು ಪ್ರಯತ್ನಿಸುತ್ತವೆ. (ಹಣೆಯ ಎತ್ತರದೆಡೆ ಕೈಸನ್ನೆ ಮಾಡಿ ತೋರಿಸುತ್ತ) ಇದು ಬಹಳ ಕುತೂಹಲಕಾರಿಯಾಗಿದೆ.

ಆದರೆ ಇದರಿಂದ ಸಾಧನೆಯು ಸಾಧ್ಯವಿಲ್ಲ. ಮರ್ತ್ಯದ ಎಲ್ಲಾ ಸಾಧ್ಯತೆಗಳು ನಶಿಸಿಹೋಗಬೇಕು. ಆಗ ಮಾತ್ರ ಈ ಮಾನವೀತೆಯಲ್ಲಿ ಏನೋ ಒಂದನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯವು ಬಂದು ನೆಲೆಸುತ್ತದೆ... ಅಲ್ಲಿಯವರೆಗೆ 'ಅದು' ಇರುತ್ತದೆ. (ಶ್ರೀಮಾತೆಯವರು ಸ್ವಯಂ–ನಾಶದ ಸನ್ನೆಯನ್ನು ನೀಡುತ್ತ) ಕೊನೆಗೆ ತಾನೇ ನಶಿಸಿ ಹೋಗುವವರೆಗೂ ಈ ಶರಣಾಗತಿಯನ್ನು ಮುಂದುವರೆಸಬೇಕು.

ಹೀಗೆ ಅದೃಶ್ಯವಾಗುವದನ್ನು ಕಲಿಯುವುದೇ ಅತ್ಯಂತ ಕಷ್ಟಕರವಾದ ವಿಷಯವಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 11/216**

**ಶಕ್ತಿಯೊಡನೆ ತಾದಾತ್ಮ್ಯ**

*ಶ್ರೀಮಾತೆಯೇ, ಚೇತನಾಯುಕ್ತವಾದ ಈ ನವ್ಯಶಕ್ತಿಯು ಮರ್ತ್ಯರ ಪ್ರಯತ್ನದ ಮೂಲಕ ಕಾರ್ಯನಿರ್ವಹಿಸುತ್ತದೆಯೇ ಅಥವಾ ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತದೆಯೇ?*

ಇದರಲ್ಲಿ ವೈರುಧ್ಯವೇಕೆ? ಇದು ಮರ್ತ್ಯರ ಪ್ರಯತ್ನದ ಮೂಲಕ ಸಿದ್ಧವಾದ ತನ್ನ ಸ್ವತಂತ್ರ ನಿರ್ಧಾರದ ಮೇಲೆ ಕಾರ್ಯನಿರ್ವಹಿಸುತ್ತದೆ. ಇದು ಈ ವಿಶ್ವದಲ್ಲಿ ಹಿಂದಿನಿಂದಲೂ ಸ್ವಯಂಚಾಲಿತವಾಗಿ ನಡೆದುಕೊಂಡು ಬಂದಿದೆ. ಇದು ಪ್ರತಿಯೋರ್ವ ಮರ್ತ್ಯರಲ್ಲಿ ಸ್ವಂತ ಪ್ರಯತ್ನವನ್ನು ಮಾಡುವ ಸ್ಫೂರ್ತಿಯನ್ನು ತುಂಬುತ್ತದೆ ಮತ್ತು ಆ ಪ್ರಯತ್ನವನ್ನು ತನ್ನ ಸ್ವತಂತ್ರ ಕಾರ್ಯದಲ್ಲಿ ಬಳಸಿಕೊಳ್ಳುತ್ತದೆ. ಮರ್ತ್ಯರ ಸ್ವಂತ ಪ್ರಯತ್ನವು ಆ ಶಕ್ತಿಯ ಕಾರ್ಯ ಚಟುವಟಿಕೆಯ ಸಾಧನೆಯಲ್ಲಿ ಒಂದಾಗಿದೆ. ಅಲ್ಲದೆ ಬಹುಶಃ ಅತ್ಯಂತ ಶಕ್ತಿಶಾಲಿಯಾದ ಸಾಧನವಾಗಿದೆ. ಈ ಸ್ವಂತ ಪ್ರಯತ್ನವೆಂಬುದು ಕೇವಲ ಒಬ್ಬ ವ್ಯಕ್ತಿಯಿಂದ ಉಂಟಾದದ್ದು ಎಂದು ನೀವು ಭಾವಿಸುವದಾದರೆ ಅದು ನಿಮ್ಮ ಭ್ರಮೆಯಾಗಿದೆ. ಓರ್ವ ವ್ಯಕ್ತಿಯು, 'ತನ್ನಿಂದ ಸ್ವತಂತ್ರವಾದ ಒಂದು ವೈಶ್ವಿಕ ಶಕ್ತಿಯು ಸದಾ ಕಾರ್ಯನಿರ್ವಹಿಸುತ್ತದೆ. ಹಾಗಾಗಿ ನಾನು ನನ್ನದೇ ಆದ ಸ್ವಂತ ಪ್ರಯತ್ನವನ್ನು ಮಾಡುವ ಅವಶ್ಯಕತೆಯಿಲ್ಲ.' ಎಂಬ ನೆಪವನ್ನು ಒಡ್ಡಿ ತನ್ನ ಪ್ರಯತ್ನದಿಂದ ಹಿಂಸರಿದರೆ, ಅವನು ಈ ವಿಶ್ವದ ಏಳಿಗೆಯಲ್ಲಿ ತನ್ನ ಸಹಯೋಗವನ್ನು

ನೀಡಲು ನಿರಾಕರಿಸಿ, ಅದರಿಂದ ಜಾರಿಕೊಳ್ಳಲು ಯತ್ನಿಸುತ್ತಿದ್ದಾನೆ ಎಂದರ್ಥ. ಈ ಶಕ್ತಿಯು ಪ್ರತಿಯೋರ್ವರ ಸ್ವಂತದ ಪ್ರಯತ್ನವನ್ನು ತನ್ನಲ್ಲಿರುವ ಅತ್ಯಂತ ಶಕ್ತಿಯುತವಾದ ಸಾಧನವಾಗಿ ಬಳಸುತ್ತದೆ. ನಿಮ್ಮ ವೈಯಕ್ತಿಯ ಪ್ರಯತ್ನದಿಂದಲೇ ಈ ಶಕ್ತಿ ರೂಪುಗೊಂಡಿರುತ್ತದೆ. ನಿಮ್ಮ ಪ್ರಾಣಮಯದ ಅಹಮಿಕೆಗೆ, "ನಿನ್ನ ಅಸ್ತಿತ್ವ ನಿನ್ನೊಳಗಿಲ್ಲ" ಎಂದು ಹೇಳಿದಾಗ ಅದರ ಪ್ರತಿಕ್ರಿಯೆಯು ಹೀಗಿರುತ್ತದೆ:

"ಸರಿ, ಇನ್ನು ಮುಂದೆ ನಾನು ಏನನ್ನೂ ಮಾಡುವದಿಲ್ಲ. ನಾನು ಕ್ರಿಯಾಶೀಲನಲ್ಲವೆಂದು ಹೇಳಿದ ಮೇಲೆ ನಾನು ಕೆಲಸವನ್ನೇ ಮಾಡುವದಿಲ್ಲ." ಮತ್ತು "ಆ ದಿವ್ಯತೆಯೆ ಎಲ್ಲವನ್ನೂ ಮಾಡುತ್ತದೆ ಎಂದ ಮೇಲೆ ಅದುವೇ ಎಲ್ಲವನ್ನು ಮಾಡಲಿ, ಅದು ಅದರ ಕೆಲಸವೆ ಆಗಿದೆ. ಶ್ರೇಯಸ್ಸು ಸಿಗದ ಕೆಲಸವನ್ನು ಮಾಡಿ ಫಲವೇನು? ಹಾಗಾಗಿ ನಾನು ಇನ್ನು ಮುಂದೆ ನಿಶ್ಚಲನಾಗಿರುತ್ತೇನೆ." ಎನ್ನುತ್ತ ನಿಶ್ಚೇಷ್ಟಿತವಾಗಿಬಿಡುತ್ತದೆ. ಇದರ ಕುರಿತು ನಾನು ಹೆಚ್ಚಿನದೇನನ್ನೂ ಹೇಳುವದಿಲ್ಲ. ಇದು ಮನನೊಂದ ಸ್ವಯಂ–ಅಹಮಿಕೆಯ ಕೋಪವನ್ನು ಹೊರಹಾಕುವ ಮಾರ್ಗವಾಗಿದೆಯಷ್ಟೇ. ಆದರೆ ಅದರ ನೈಜ–ಶುದ್ಧ ಪ್ರತಿಕ್ರಿಯೆಯೆಂದರೆ, ಶಕ್ತಿಯೊಂದಿಗೆ ತಾದಾತ್ಮ್ಯ ಹೊಂದುವುದು. ತನ್ನ ಪ್ರಜ್ಞೆಯಲ್ಲಿರುವ ಎಲ್ಲಾ ಶಕ್ತಿಯೊಂದಿಗೆ ತನ್ನನ್ನು ತಾನು ತೊಡಗಿಸಿಕೊಂಡು, ತನ್ನ ಅಸ್ಮಿತೆಗಿಂತಲೂ ಅನಂತ ಪಟ್ಟು ದೊಡ್ಡದಾದ, ಯಾವುದೇ ತಪ್ಪುಗಳನ್ನು ಮಾಡದ, ನಿಷ್ಕಲ್ಮಶವಾದ, ಸದಾ ಕಾಲ ನಮ್ಮನ್ನು ರಕ್ಷಿಸುತ್ತಿರುವ, ನಮ್ಮ ಬೇಕು–ಬೇಡಿಕೆಗಳನ್ನೆಲ್ಲ ಈಡೇರಿಸುವ, ನಮ್ಮ ಸ್ವ–ಪ್ರಯತ್ನವನ್ನು ತನ್ನ ಶಕ್ತಿಯುತವಾದ ಸಾಧನವಾಗಿ ಬಳಸುವ ಶಕ್ತಿಯೊಡನೆ ಕಾರ್ಯನಿರ್ವಹಿಸಬೇಕು. ಇದರಿಂದ ತಾನು ಇನ್ನು ಮುಂದೆ ಆ ಶಕ್ತಿಯಂತೆಯೇ ಯಾವುದೇ ತಪ್ಪುಗಳನ್ನು ಮಾಡುವದಿಲ್ಲವೆಂದು, ತಾನು ಸದಾ ರಕ್ಷಣೆಯಲ್ಲಿದ್ದೇನೆಂದು, ತನ್ನ ಸ್ವ–ಪ್ರಯತ್ನದಿಂದ ಅತ್ಯುತ್ತಮ ಫಲಿತಾಂಶಗಳೇ ಲಭಿಸುತ್ತವೆ ಎಂಬ ಆನಂದವನ್ನು ಹೊಂದುತ್ತಾನೆ. ಇದುವೇ ನಿಜವಾದ ಸಾಧನೆ. ಇದರಿಂದ ನಿಮ್ಮ ಇಚ್ಛಾಶಕ್ತಿಯು ತೀವ್ರತರವಾಗಿ ವ್ಯಾಪಿಸುತ್ತದೆ. ಆಗ ಅದು ನಿಮ್ಮನ್ನು ಈ ಅನಂತದಲ್ಲಿರುವ ಒಂದು ಸೂಕ್ಷ್ಮ ವ್ಯಕ್ತಿಯೆಂಬ ಭಾವನೆಯಿಂದ ಬಿಡಿಸಿ, ನಿಮ್ಮನ್ನು ಸಾರ್ವಕಾಲಿಕವಾದ ಸತ್ಯದ ಶಕ್ತಿಯಾಗಿಸುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/5–6** **– ಶ್ರೀಮಾತೆ**

## ಕೆಲವು ನೀತಿ ಮತ್ತು ನುಡಿಗಟ್ಟುಗಳು

ಸ್ವಯಂ ಸಮರ್ಥನೆಯು ಯಾವಾಗಲೂ ಅಹಮಿಕೆ ಮತ್ತು ಅಜ್ಞಾನದ ಸಂಕೇತವಾಗಿದೆ.

ಅತಿಯಾದ ಸೂಕ್ಷ್ಮತೆಯು ಅಹಮಿಕೆ ಸಂಕೇತವಾಗಿದೆ.

ಅಹಮಿಕೆಯು ಪ್ರತಿಯೋರ್ವರ ಕಷ್ಟಕ್ಕೆ ಕಾರಣವಾಗಿದೆ.

ಮಹಾತ್ವಾಕಾಂಕ್ಷೆಯು ಈ ಬದುಕಿನ ಶಕ್ತಿಯಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 31/348, 211, 218, 239**

ಸಮತ ಎಂದರೆ ಅಹಮಿಕೆಯ ಅನುಪಸ್ಥಿತಿ ಎಂದರ್ಥವಲ್ಲ. ಬದಲಿಗೆ ಬಯಕೆ ಮತ್ತು ಬಾಂಧವ್ಯದ ಅನುಪಸ್ಥಿತಿಯಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/133**

ಅಸ್ಮಿತೆಯಿಲ್ಲದೆ ಇರುವುದು ದಿವ್ಯತೆಯಾಗಲು ಸಾಧ್ಯವಿಲ್ಲ.

ಹೆಚ್ಚಿನ ಜನರಿಗೆ ನಮ್ರತೆ ಮತ್ತು ಪರೋಪಕಾರಿ ಅಂಶಗಳು ಅಹಮಿಕೆಯ ರೂಪಗಳಾಗಿಯೇ ತೋರುತ್ತವೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 31/220, 217**

ಮಾನವನು ತನ್ನಲ್ಲಿರುವ ಅಪೂರ್ಣತೆಗಳನ್ನು ಕಂಡು ತಾನೇ ಅಸಹ್ಯ ಪಟ್ಟುಕೊಳ್ಳುವಂತೆ ಮಾಡಲು ಪಾಪ ಪ್ರಜ್ಞೆಯ ಅವತರಣವಾಯಿತು. ಇದು ಅಹಮಿಕೆಗೆ ಎದುರಾಗಿ ನಿಂತ ದಿವ್ಯತೆಯ ಅಸ್ತ್ರವಾಗಿತ್ತು. ಆದರೆ, ಮಾನವನಲ್ಲಿರುವ ಅಹಮಿಕೆಯು ತನ್ನ ಪಾಪಗಳಿಗೆ ಕಡಿಮೆ ಒತ್ತುಕೊಟ್ಟು, ಇತರರ ಪಾಪಗಳಿಗೆ ಹೆಚ್ಚಿನ ಒತ್ತುಕೊಟ್ಟು, ಆ ದಿವ್ಯತೆಯನ್ನು ಎದುರಿಸಲು ಹೆಣಗುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 12/430–31 – ಶ್ರೀ ಅರವಿಂದರು**

## ಶ್ರೀ ಅರವಿಂದರ
## 'ಊರ್ವಶಿ'

**– ಅನು: ಶ್ರೀ ಕಿಶೋರಕುಮಾರ ಕಾಸಾರ (ಸಮಷ್ಟಿ), ಕಲಬುರ್ಗಿ**

**9**

### ಅಧ್ಯಾಯ 3

ಭೂಮಿಯೊಳು ಬಿದ್ದ ಬೀಜವದು ಬೇರ್ವಿಟ್ಟು ಭೇದಿಸುತ ಭೂರುಹವಾಗಿ
ಬೆಳೆದು ಬಾನೆತ್ತರಕೇರ್ವಂತೆ,
ಮರಿನಾಗರಗಳು ಮಾತೆಯ ಮೈಗಾತು ಮುಂಬರಿದು ಮರವೇರ್ವಂತೆ,
ಹೊರಳಿ ಹುತ್ತದೊಳು ಹರಿವಂತೆ,
ಸಿಂಹಪುತ್ರರುಗಳು ಸಿಂಹಾವಲೋಕನವಗೈದು ಸಂಚರಿಸುತ ಸಾಮ್ರಾಜ್ಯವನೇ
ಸೂರೆಗೈದು ಸರ್ವಾಧಿಪತಿಯಾವಂತೆ,
ಸೋಮಕುಲದ ಸಾಮ್ರಾಟನವ ಸುವರ್ಣಾಂಗಿಯೊಡನೆ ಸಂಲಗ್ನಗೊಳಿಸಿದ
ಸಂಬಂಧಕೊಂದು ಸಾಕ್ಷ್ಯದಂತೆ
ಮೂರನೇ ಮುಂದೂಣಗಿಯ ಮುನ್ನದಲಿ ಮನೆ–ಮನವ ಮಂತ್ರಿಸುವ
ಮುದ್ದುಮಗುವೊಂದು ಮೂಡಿತ್ತು.
ಬಸಂತದಲಿ ಬಸುರಿ ಬಾಣಂತನದ ಭಾಗ್ಯಕೆ ಬಳಲಿ ಬಾಗಿದ ಮಾಮರದಂತೆ
ಮಾತಾಯಿಯೋರ್ವಳು
ಭೂ–ಭುವನಗಳ ಭಾಗ್ಯಲಿಪಿಯನ್ನೇ ಬಂಗಾರದೆಳೆಯಿಂದ ಬರೆವ
ಬಾಲಕನೋರ್ವನ ಬುವಿಗಿಳಿಸಿದ್ದಳು.
ಕಾಮನೆಯ ಕಾರಂಜಿಯು ಕಳೆದು ಕರ್ಮನೆಲೆಯ ಕೂಗು ಕೈಬೀಸಿ ಕರೆವ
ಕಾಲವದು ಕೂಡಿಬಂದಿತ್ತು.
ಕಾಡೆಂಬ ಕಾಡು ಕಾಲಕಾಲಕೆ ಕಾಪಿಡುತ ಕಾವಲಿಗಿಟ್ಟರೂ, ಕೂಡಿಕೆಲೆವ
ಕಲೆಯಿರುವ ಕಾರ್ಮಣನಿಗದು ಕಾಡೇ ಕಾಡು!
ಗಿಡದಡಿಯ ಗೂಡಿನಲಿ ಗುಡಿಚಾಪೆಗೊಟ್ಟಿಕೊಂಡಾ ಗಂಡುಹೆಣ್ಣುಗಳಿಗೆ
ಗಂಧರ್ವನಗರಗಳನಾಳ್ವ ಗುಂಡಿಗೆಯಿರಲು

ಗಂಟುಮೂಟೆಯ ಗಟ್ಟಿಕೊಂಡು ಗುಡಿಗುಂಡಾರದೆಡೆ ಸುತ್ತದೆ, ಸುತ್ತೇಳು
ಕೋಟೆಯ ಕಟ್ಟಿ ಕಲ್ಯಾಣಪಥಕೆಳೆವರವರು.
ಅದರೊಲಂತೆ ಅಪ್ಸರಧಾಮದಿಂದಿಳಿದು ಚಕ್ರವರ್ತಿನಿ ಪದಪೀಠದಲಿ
ಪ್ರತಿಷ್ಠಾಪಿತಳಿರಬೇಕಿಹ ಪುಣ್ಯಾವತಿಯು
ಪರ್ವತಗಳ ಪಂಜರದಲಿ ಪುರುಷೋತ್ತಮನೊಡನೆ ಪ್ರಯಣವ ಪೂರೈಸಿಹಳು,
ಪ್ರಸವದಿ ಪುತ್ರರತ್ನನನೇ ಪಡೆದಿಹಳು.
ಹೊಟ್ಟೆಹೊಸೆಯುತಿದ್ದ ಹಸುಳೆಯಿಂದು ಅಂಬೆಗಾಲಿಕ್ಕುತ ಅಂಬರಾಂಬರವನೇ
ಅಂಗೈಯೊಳು ಅದುಮಿಡುವ ಅಂಗಾರಕನಿಹನು.
ಧ್ರುವತಾರೆಯು ಧರೆಗಿಳಿದು ಧೂಪಾರತಿಯನೆತ್ತಿ ದೋಷಗಳನೆಲ್ಲ
ಧೂಳಿಪಟಗೊಳಿಸಿಹುದು.
ಬೆಳ್ಳಿಚುಕ್ಕೆಯದು ಬಂದು ಭ್ರೂಮಧ್ಯದಲಿ ಭಾಗ್ಯರೇಖೆಯನೇ ಬರೆದು
ಬಾನೆತ್ತರಕೇರಿಹುದು.
ಹೊತ್ತುಗಳೆದಂತೆ ಗೊತ್ತುಗುರಿಗಳೆಲ್ಲ ಒತ್ತೊತ್ತುತ ಬಂದು ಮುತ್ತಿಕೊಂಡಿರಲು
ಎಚ್ಚೆತ್ತುಕೊಂಡಿಹಳವಳು.
"ಪೌರವಕುಲರಾಜನ್ಯ, ಚಾರುಲೋಕಗಳನಾಳ್ವ ಚಕ್ರವರ್ತಿಪುತ್ರನಿಗೆ
ಚಂದ್ರಶಾಲೆಯಿದಲ್ಲ!
ಅಂತರಾತ್ಮಾಯನದ ಆನಂದವಿರದೀ ಅಟವಿಯೊಳು ಅಂತರ್‌ಪಿಶಾಚಿಯಾಗಿಂತು
ಅಲೆಯುವುದೇ?
ಮಧುಮಿಶ್ರಿತ ಮಂಜರಿಗಳಲಿ ಮುಳುಗಿ ಮರ್ತ್ಯನೆಲೆಯಾ ಮಹಾರಾಜ್ಯಗಳನೇ
ಮರೆಯುವುದೇ?
ಸಿಂಹ–ಸಾರಂಗಗಳ ಸಂಗದಲಿ ಸುಳಿದು ಸ್ವರಾಜ್ಯ–ಸಾಮ್ರಾಜ್ಯಗಳನೇ ಸಾವಿನೆಡೆ
ನೂಕುವುದೇ?
ಕರ್ಮನೆಲೆಯಾದರೂ ಕಾರ್ಮಣನಿಗದೇ ಕೈಲಾಸವಿಹುದು. ಕಾಯವಿದಕೆ
ಕಾಯಕವೇ ಕರ್ತಾರನಿಹುದು.
ಸಾವಿರ ಸಾಮಂತರ ಸೋಲಿಸಿ ಸಾಮ್ರಾಟನಾದೀ ಸೋಮನಿಗಿಂದು
ಸೋಮಾರಿತನವು ಸೋಂಕಿಹುದು.
ಅಖಂಡ ಖಂಡಗಳನೆಲ್ಲ ತುಂಡರಿಸುವ ಗುಂಡಿಗೆಯಿಂದು ಅಂಡದೊಳು
ಅವಿತು ಅಂದಗೇಡಿಯಾಗಿಹುದು.

ಇದ್ದಲ್ಲೇಬಿದ್ದ ಮೆದ್ದಹಾವಿನೊಲಿಂತು ಮೈಯ ಮುರಿಯುವುದೇ? ಮರದ
ಮೈಗಾತು ಮಲಗಿ ಮಣ್ಣಾಗುವುದೇ?
ಏಳು! ಗುಡಿಚಾಪೆಗಟ್ಟೇಳು! ಏಳುಮಲೆಯ ಮಧ್ಯೆ ಏಳುಕೋಟೆಯ ಕಟ್ಟಿದಾ
ಕನ್ಯಾಪುರಿಗಿಂದು ಕಾಲಿರಿಸೋಣ.
ಪುರಮಧ್ಯದೊಳು ಪುರಂಧರನ ಪ್ರಾಣಪೀಠದೊಲು ಪೀಠಸ್ಥವಿಹುದಲ್ಲಿ
ಪಟ್ಟಗದ್ದುಗೆಯದು.
ಸಪ್ತಸೈಂಧವವನು ಸಪ್ತಾಹ್ನಿಕದಲಿ ಸೂರೆಗೈವ ಸರ್ವಾಧಿಕಾರವನು ಸಾಕಾರದಲಿ
ಸೆರೆಹಿಡಿವ ಸಿಂಹಾಸನವಿಹುದಲ್ಲಿ.
ಮುಕ್ಕೋಟಿ ಮಾನಸರಿಗೆಲ್ಲ ಮುಕುಟವ ಮುಡಿಸಿ, ಮಂಟಪದಿ ಮೆರೆಸಿ,
ಮಂತ್ರಿಸಿದ ಮಂದಿರ –ಮಾಲಯಗಳಿಹುದಲ್ಲಿ.
ಹತ್ತುಸಮಸ್ತರಿಂದಿಡಿದು ಸಾವಿರ ಜನಪದರೊರೆಗಿನ ಸಾಮಾಜಿಕರಿಂದ
ಸಮೃದ್ಧವಿಹ ಸಾಮ್ರಾಜ್ಯವಿಹುದಲ್ಲಿ.
ಕಳೆದುಕೊಳ್ಳುವರಿಂದಿಡಿದು ಕಾಂಚಾಣ ಕೂಡಿಡುವರೊರೆಗಿನ ಕನಕಭಾಂಡಾರದ
ಕಾರಸ್ಥಾನವಿಹುದಲ್ಲಿ.
ಕುಬೇರಾದಿ–ಕುಚೇಲರುಗಳಿಂದ ಕೆಳಗುಮೇಲಾಗುತಿರುವಾ ಕನ್ಯಾನಗರಕಿಂದು
ಕಾಲಿರಿಸೋಣ.
ಗುದ್ದ–ಗದ್ದಲದಿಂದ ಗಮಿಸಿ ಸದ್ದು–ಗದ್ದಲದಿಂದ ಸುದ್ದಿಯಲಿಹ ಸೀಮೆಯೆಡೆ
ಸರಿಯೋಣ.
ಮೂರಡಿಯ ಮನೆಯಿಂದಿಡಿದು ಮುನ್ನೂರುಗಜದ ಮಹಲುಗಳೆಡೆ
ಮುಂಬರಿಯೋಣ.
ಮನೆಯಂಗಳದಿ ಮುಟ್ಟಾಟವಾಡುತಿಹ ಮುದ್ದುಮಕ್ಕಳ ಮುಂದೆಲೆಯ ಮೂಸಿ
ಮುತ್ತಿಕ್ಕುವೆನು.
ಮುಂಗಟ್ಟು ಮಾರುಕಟ್ಟೆಯೊಳು ಮೆರೆಯುತಿಹ ಮತ್ತಾರು ಮಂದಿಯೊಡನೆ
ಮುಕ್ತ ಮಾತಿಗಿಳಿವೆನು.
ಪರ್ವತರಾಜನ ಪುತ್ರಿಯರಾಗಿ ಪುಟ್ಟಿ ಪಯಣಿಸಿ ಪಾರಾವಾರವನೇ ಪತಿಯಾಗಿ
ಪಡೆವ ಪಾವನೆಯರಂತೆ
ಭಗವಂತನಿತ್ತ ಬಾಳಬಟ್ಟೆಯಲಿ ಬವಣೆ ಬೆಂಕಿಯ ಬಿಗಿದು
ಬರಿಬೂದಿಯಾಗಲಿರುವ ಬಾಲೆಯರನು ಬಿಗಿದಪ್ಪುವೆನು.

ದ್ಯೌಲೋಕದೊಳು ದಾಪುಗಾಲಿಟ್ಟ ದೇವಪಾದಗಳಿವನು ಕಾರ್ಮಣದ ಕರಿಕಲ್ಲ
ಮೇಲೆ ನಡೆಸುವೆನು ನವೆಸುವೆನು.
ಅಮೃತಶಿಲಾಫಲಕವನೇ ತೀಡಿದ ತೀರ್ಥಹಸ್ತವನಿದನು ಅಶ್ಮಭಿತ್ತಿಯಲಿ ಇರಿಸಿ
ಇಂದ್ರಿಯಗೊಳಿಸುವೆನು.
ಮಂದಾರಮೇರುವಿನಾ ಮಂಥನದಿ ಮೂಡಿದ ಮೋಹಿನಿಯಯುಣಿಸನುಂಡು
ಮಿಡಿದ ಮಂದ್ರಜಿಹ್ವೆಯಿದನು
ಭಟ್ಟ ಬಾಣಸಿಗರು ಬಡಿಸಿಟ್ಟ ಭೋಜನದಿಂದ ಬಂಧಿಸುವೆನು. ಬೆರಳಿಟ್ಟು
ಬಾಯ್ಚುಪ್ಪರಿಸುವೆನು.
ಜನ್ಮದಾರಭ್ಯ ಜಲಕನ್ಯೆಯಾದರೂ ಜನಾಂತಿಕದಿ ಜನಿತವಿಹ ಜಾಡಿಯೊಳಿಟ್ಟ
ಜಾಹ್ನವಿಯನುಂಡು ಜೀವಿಸುವೆನು.
ಮನಃದಿಂದ ಮಣ್ಣಿಗಿಳಿದಿಲ್ಲಿ ಮಾಡುವೆನು–ಮಡಿಯುವೆನು. ಮರ್ತ್ಯದೊಳಿಲ್ಲಿ
ಮುಗ್ಗರಿಸುವೆನು–ಮೇಲೇಳುವೆನು."
'ವನವಾಸರದ ವರುಷವಾಗಿರಲು ಒಪ್ಪತ್ತು, ಆಣ್ಮತನಕಿಹುದು ಆಲಸ್ಯವದು ಆಪತ್ತು.'
ಉರ್ವಶಿಯಾಡಿದ ಉತ್ಕ್ರಾಂತದ ಉಪಾಧಿಗಳಿಂದ ಉತ್ತೇಜಿತನಿಹ
ಉರ್ವಿಪತಿಯವ ಉಜ್ಜುಗಿಸಿದನು.
ಅಡವಿದೇವಿಯ ಅಂಗಳದಲಿ ಅಂಬೆಗಾಲಿಕ್ಕಿದ ಅಮೃತಾಂಶನವ ಅರಸೊತ್ತಿಗೆಯೆಡೆ
ಅಡಿಯಿರಿಸಿದನು.
ಶಶವಾಹನವನೇರಿ ಶಶಾಂಕನ ಸೇರಿ ಸುಖಿಸಬೇಕಿಹ ಶಶಿವಂಶವದು ಶಹರದೆಡೆ
ಸರಿದಿತ್ತು.
ಅಟವಿಯೊಳು ಅಂಗಾತವಾಗಿರಲಿಕ್ಕಿದ್ದ ಅದ್ರಿಕುಹರದ ಅಧಿವಾಸನವಂದಿಗೆ
ಅಂತ್ಯಗೊಂಡಿತ್ತು.
ಗವಿಯೆಡೆಗೆ ಗಮಿಸಿ ಗಾಂಪರನು ಗೋಪಾಲರಾಗಿಸಿದ ಗೋಮಂಡಲವದು
ಗುಡ್ಡದೆಡೆ ಗುಳೆಹೋಗಿತ್ತು.
ಚಂದ್ರವಂಶವದು ಚೆಲ್ಲಾಟವಾಡಿದ ಚೈತ್ರವನವಿಂದು ಚೈತನ್ಯವಿರದೆ ಚಿಂತಾವ್ಯಾಕುಲದಿ
ಚಲನಿಶ್ಚಲವಾಗಿತ್ತು.
ಕಣ್ಣಿವೆಯಲಿ ಕೂಡಿಟ್ಟ ಕಂಬನಿ ಕಾಣ್ಕೆಯಲಿ ಕಾಂತಾರವದು ಕಟೆದ ಕಲ್ಲಾಗಿ
ಕಂಡಿರಲು ಕಾಲ್ದೆಗೆದರವರು.

ಝುರಣೋದಕದಿ ಝುರಿವ ಝುರನಿರ್ಝರ ಝುಂಪಾತಗಳೆಲ್ಲ ಝಾಟಿ–ಝುಟಿಗಳೆಡೆ
ಝಾಡಿಸುತೋಡಿಸಿದವು.
ಕಾಪಿಟ್ಟ ಕಟ್ಟಡವಿಯು ಕರಗಿ ಕಾಲ್ನಡಿಗೆಯ ಕಾಡುಪಥವು ಕಣ್ಮುಂದಿರಲು
ಕ್ರಮಿಸಿದರವರು ಕಾದಲರು.
ತಾಯಿಯೋರ್ವಳು ತುಂಬುದೋಳ್ಗಳಲಿ ತನಯನನು ತಬ್ಬಿ ತೋರೆದೆಗೆ
ತಂದು ತೀಡುವೊಂತೆ
ಅಂಗವಂಗದಿಂದಿಡಿದು ಅಂಗಾರಕನಂಗಳದೆಡೆ ಅಂಬೆಗಾಲಿಕ್ಕುವ ಅಂಬೆ–
ಗಂಗಾಂಬೆಯವಳು
ತುಂಗದೆಡೆಯಿಂದ ತಳಕಿಳಿದು ತೀರದೆಡೆಯಲಿ ತಳ್ಳಂಕವಿಡಿದು ತೀರ್ಥರೂಪವದ
ತೋರಿಹಳು.
ಹರಿವ ಹೊನ್ನಪಾತ್ರದಲಿ ಹೊರಟು, ಹೂದುಂಬಿಯೊಂದು ಹೂದೋಟದಿಂದ
ಹಿರಿದು ಹುಟ್ಟಿನೆಡೆ ಹರಿವಂತೆ
ಕಾಲಾಂತರದಿಂದ ಕಣ್ಣೋಟದಿ ಕಳೆದ್ಹೋಗಿದ್ದ ಕನ್ಯಾನಗರದೆಡೆ ಕ್ರಮಿಸಿ
ಕಾರಂಜಿಯನೆಬ್ಬಿಸಿದರು.
ಕೋಟೆ–ಕೊತ್ತಳದೆಡೆ ಕಾಲಿಟ್ಟೊಡನೆ ಕಾನನವಾಸಿಯಾಗಿದ್ದ ಕುವರನು
ಕುಲಸ್ಥಾನದೆಡೆ ಕ್ರಮಿಸಿದನೆಂಬುದನರಿತ
ಇಳೆಯಬ್ಬೆ ಇಲಾದೇವಿಯು ಇದ್ದಮಂದಿರದೊಳಗಿಂದಲೇ ಇಳಿದು
ಇಂದ್ರದೃಷ್ಟಿಯಲಿ ಈಕ್ಷಿಸಿದಳು.
ಸಿಂಹದ್ವಾರದ ಸಂದಿಯೊಳಗಿಂದ ಸಿಂಹಾಸನಾರೂಢನ ಸಂಸಾರದ ಸೂಚನೆ
ಸಿಕ್ಕಿರಲು ಸುದ್ದಿ ಸಕ್ಕರೆಯಾಗಿತ್ತು.
ಕೊಂಬು ಕಹಳೆಗಳ ಕೂಗು ಕ್ರಮಿಸಿ ಕಾಂತಾರದಿಂ–ಕೈಲಾಸದೊರೆಗೆ
ಕಥೆಯನರುಹಿ ಕಾಲವಾಗಿತ್ತು.
ತುಂಬುಗಲ್ಲದ ಶಂಖಧ್ವನಿಯದು ಶಶಾಂಕನಿಲ್ಲದೆ ಸ್ಮಶಾನವಾಗಿದ್ದ ಸಪ್ತಸೈಂಧವಕೆ
ಸೆಳೆಮಿಂಚಾಡಿಸಿತ್ತು.
ಊರನಾರಿಯರೆಲ್ಲ ಉಕ್ಕೆಂದುಬಂದು ಉಪ್ಪಾರತಿಯನೆತ್ತಿ ಊರದೊರೆಯ
ಉಪಚರಿಸಿದರು.
ವೇದಮಂತ್ರಗಳಿಂ ವಂದಿಸುತ್ತ ವಿಪ್ರೋತ್ತಮಾದಿ ವಿದ್ವತ್‌ಜನರು ವಿಸ್ತಾರದಿಂದಿಳಿದು
ವೀಕ್ಷಿಸಿದರು.

ಹೊಗಳುಭಟ್ಟರು ಹೊನ್ನಕಲಶವ ಹೊತ್ತು ಹೆಗಲಲಿ ಹಿರಿಮೆಗಳ ಹಾಡ ಹಾಡುತ್ತ
ಹಾಜರಾದರು.
ಕಂಚಿನಕಂಠದಿಂ ಕಾವ್ಯವನೊರೆವ ಕವಿರಾಜರುಗಳು ಕುಲೋತ್ತಮನ ಕಥೆಯ
ಕೇಳಲೆಂದಲ್ಲಿ ಕಾಲಿರಿಸಿದರು.
ಕೋಟಿಸಾಮಂತರನು ಕಾಲಡಿಗೆ ಕೆಡವೀಗ ಕಾಲಿಡಲಾಗದ ಕುಲವೃದ್ಧರುಗಳು
ಕಾಷ್ಠಶಿಬಿಕೆಯನೇರಿ ಕಂಡರಿಸಿದರು.
ಸಾವಿರಯುದ್ಧಗಳ ಸೋಲಿಸಿ ಸಮರದೇವನ ಸೊಕ್ಕಿಳಿಸಿದ ಸಾಮ್ರಾಟರುಗಳಲ್ಲಿ
ಸೌಮ್ಯರಾಗಿ ಸಾಲಂಕೃತಗೊಂಡರು.
ಸೇನಾಪ್ರಮುಖರು ಸಾಲಾಗಿ ಸುಳಿದು ಸೋಮವಂಶದ ಸಿಂಹಸಂಸಾರವನು
ಸುಪ್ವಿಗೈದರು.
ಕೊಡಲಿ ಕೋದಂಡಗಳ ಕಾಳಗದಲಿ ಕ್ರಾಂತಿಯನೆಬ್ಬಿಸುವ ಕಲಿಗಳಲ್ಲಿ
ಕೋಡಿವರಿದಿಹರು.
ವೈಯಾಘ್ರಕೋಶದೊಳು ವಜ್ರಬಾಣಗಳಿಹ ವೀರರುಗಳಲ್ಲಿ ವಿವಿಧ ವ್ಯೂಹದಲಿ
ವಿಜೃಂಭಿಸುತಿಹರು.
ಸಾವಿರಸಾರ್ಥಮಂಡಲಗಳ ಸೊತ್ತೆಲ್ಲವನು ಸೊತ್ತ ಸೊತ್ತಾಗಿಸಿಕೊಂಡಿಹ
ಸುವರ್ಣಾಧಿಪತಿಗಳಲ್ಲಿ ಸುಳಿದಿಹರು.
ವೈಶ್ಯತನದ ವಿದ್ಯೆಯಲಿ ವೈಶ್ರವಣನನೇ ವಿಕ್ಷಿಪ್ತಗೊಳಿಸಿದ ವಣಿಜಶ್ರೇಷ್ಠಿಗಳಲ್ಲಿ
ವಿಸ್ತರಿಸಿಹರು.
ಬರಿ ಭವ್ಯಭಾಂದವರಲ್ಲ, ಬಿರುದು–ಬಿನ್ನಾಣಗಳಿರದ ಬಡವರೂ ಬಂದಿಹರಲ್ಲ!
ಬಿಜಯಂಗೈದಿಹರಲ್ಲ!
ಕೆರೆದಂಡೆಯಲಿ ಕಾಲವಾಗಲಿಹ ಕರಿಕಲ್ಲನೊಯ್ದು ಕೈಲಾಸಲಿಂಗನ ಕಂಡರಿಸುವ
ಕಲ್ಲುಕುಟಿಗಾರರಲ್ಲಿ ಕಂಡಿಹರು.
ಕೋಟಿಕಲೆಗಳ ಕೈಲಿರಿಸಿಕೊಂಡು ಕಾಂಚಾಣಕೊಂದು ಕಾಲುಮಾರ್ಗವನಿತ್ತ
ಕುಶಲಕರ್ಮಿಗಳಿಲ್ಲಿ ಕುಳಿತಿಹರು.
ಕುಲುಮೆಯೊಳು ಕಾದಲೋಹಕೆ ಕೋಟಿರೂಪವ ಕೊಟ್ಟ ಕಮ್ಮಾರನೋರ್ವನು
ಕೈಯೊಳಿದ್ದ ಕೊಡತಿಯನೆಸೆದು,
ಎತ್ತಡಲಾಗದೆನ್ನ ದೈತ್ಯದೇಹವ ದಾರಿಗಿಳಿಸಿ ದಟ್ಟಹೊಗೆಯಲಿ ಭಟ್ಟಿಬಿಳುಪಾದೆನ್ನ
ಗಟ್ಟಿಗಡ್ಡದಲೇ ಗೊಳ್ಳೆಂದಿಹನು.

ನೇಗಿಲನಿಡಿದ ನೆಲದೇಹಿಗಳು ನಿತ್ಯಕರ್ಮದ ನೆನಪನೂಕಿ
ನೃಪರಾಜ್ಞಿಯರಿಗಾಗೆಂದು ನುಗ್ಗಲಿನೊಳಲ್ಲಿ ನೂಕಿಹರು.
ಚತುರ್ವರ್ಣಗಳ ಚಾರುಮೂರ್ತಿಗಳಿಂತು ಚಂದ್ರನಾಗಮನಕೆಂದು
ಚಾರುದಿಶೆಗಳಲಿ ಚಿತ್ತಾರವಬರೆದು ಚಿತ್ತೈಸಿಹರು.
ಬರಿ ಭೂಪಾಲನಿಗೆಂದಲ್ಲ, ಬಾಳಸ್ವರ್ಗದಿಂದಿಳಿದ ಭಾಮಿನಿಯನು
ಬಿಡುಗಣ್ಣರಾಗಿಂತು ಭುಜಿಸುತಿಹರು.
ರವಿಯಿಳಿದ ರಾತ್ರಿಯಾಗಸದಿ ರಾಹುರಕ್ಕಸರ ರಾಜ್ಯಭಾರವದು ರಾರಾಜಿಸುತಿರಲು
ರೂಹೆಗೊಂಡಿಹಳವಳು ರೂಪಸಿಯು
ಕೌ–ರವದಿ ಕುಳಿತ ಕೃಷ್ಣಛಾಯೆಯ ಕಾಂತೀಕರಿಸಲು ಪಾಂಡುಪಾಷಾಣಭಿತ್ತಿಯ
ಹಿಡಿದೆತ್ತಿ ಅವತರಿಸಿಹಳವಳು ಅರ್ಜುನಿಯು.
ವಜ್ರಭಾಸದ ವಾಜಿನೀವತಿಯು, ಅರುಣಮಾರ್ಗಕವಳೇ ಆರುಷಿಯು,
ಉಸ್ರಮಯೂಖಿಳಿಹ ಉಷೋದೇವಿಯು.
ಕ್ರಾಂತಕ್ಷಣನದಾ ಕೃಣುಷೆಯೊಲಿಹ ಕನ್ಯಾನಗರದ ಕುಮಾರಿಯರೆಲ್ಲರೂ ಕಿಲದ
ಕಾಲಂದುಗೆಯ ಕಟ್ಟಿ ಕುಣಿದಿಹರು.
ಮಣ್ಣಿನಾಟದಿ ಮನವಿರಿಸಿದ ಮುದ್ದುಮಕ್ಕಳೆಲ್ಲ ಮೊಗ್ಗು–ಮಲ್ಲಿಗೆಯ ಮೇಲೋಡಿ
ಮುಂಬರಿದರು.
ಪತಿಯೊಡನೆ ಪ್ರತಿಷ್ಠಾಣಕೆ ಪದವಿರಿಸಿಹ ಪ್ರಿಯಂವದೆಯರು ಪರಂಧಾಮಳ
ಪೂಜಿಸಲೆಂದಲ್ಲಿ ಪಾಲ್ಗೊಂಡಿಹರು.
ಯುವತಿಯರು, ಯೋಷಿತೆಯರು, ಯೋಧಕುಲದ ಯಾಮಿನಿಯರೆಲ್ಲರು
ಯಜಿಸಿಹರು. ಯಜ್ಞಕಾಮಳನೇ ಯಾಚಿಸಿಹರು.
ಮಲರುಮಲ್ಲಿಗೆಗಳ ಮಾಲೆಯನು ಮುಡಿಸಿಹರು, ಮೊಗ್ಗೆಸರವ ಮಾಡಿ
ಮಣಿಕಟ್ಟಿಗೆ ಮೂರುಗಂಟಿಕ್ಕಿಹರು.
ಇಳೆಗೆ ಬಿದ್ದ ಇಂದ್ರವನದ ಹಣ್ಣಿನಂತಿಹ ಹೆಣ್ಣವಳ ಹಣೆಗಣ್ಣಿಗೆ ಮುತ್ತಿಕ್ಕಿದರು.
ಮಾನಸಳೊಡನೆ ಮಾತನಾಡಿದರು.
ನಾಕದಿಂದಿಳಿದ ನಾರಿಯವಳ ನಗೆಯು ನೆರೆದ ನೂರು ನಿರೀಶ್ವರರ
ನಾಸ್ತಿಕತೆಯನೆಲ್ಲ ನಿಸ್ತೇಜಗೊಳಿಸಿತ್ತು.
ಬೂದಿಯೊಳಗಿಂದ ಬಿರಿದು ಬಂಗಾರದಂತಾದ ಬಾಂಧವರೆಲ್ಲರೂ ಭವ್ಯಳ
ಬೆಡಗು–ಬಿನ್ನಾಣಗಳ ಬಣ್ಣಿಸಿದರು.

ಪೌರವನರೇಶನ ಪುರಜನರೆಲ್ಲ ಪಟ್ಟದರಸಿಯಾಗಲಿಹ ಪಯಸ್ವಿನಿಯ ಕಂಡು
ಕಣ್ಣೀರಾದರು.
ಹಾಸ್ಯಲಾಸ್ಯಗಳ ಹೊನ್ನಮಳೆಯ ಹರಿಸಿ ಹೂ–ಹಾಸಿಗೆಯನಿರಿಸಿ ಹರ್ಮ್ಯದೆಡೆ
ಹೊತ್ತೊಯ್ಯಲೆಂದವಳ ಹೆಜ್ಜೆಯಿರಿಸಿಹರು.
ಬಾಣತುಂಬಿದ ಬತ್ತಳಿಕೆಯ ಬೆನ್ನಿಗಿಳಿಸಿ, ಒರೆಯಲಿ ಹಿರಿದ ಕತ್ತಿಯನಿರಿಸಿ,
ಶರಧಾರಿಗಳಾಗಿ ಶಿರಸ್ತ್ರಾಣವನೇ ಇರಿಸಿ
ವಪೆಗೆ ವಜ್ರಕವಚನ ಧರಿಸಿ ದಂಡವನಿಡಿದ ಕೋದಂಡವನಿಡಿದ ಕಟ್ಟಾಳುಗಳು
ಕಾವಲಿಗೆಂದಲ್ಲಿ ಕಟಿಬದ್ಧರಿರರಲು,
ಪತ್ನಿಪುತ್ರರೊಡನಾಗಿ ಪುರಪ್ರವೇಶಿಸಿಹ ಪ್ರತಿಷ್ಠಾನಾಧಿಪತಿಯ ಪ್ರತಿಷ್ಠಾಪೂರ್ವಕದಿ
ಪ್ರಾಸಾದಕೊಯ್ಯಲೆಂದು
ಸಿದ್ಧವಿಹ ಸೇನೆಯದು ಬದ್ಧವ್ಯೂಹದಿ ಬಂದು ಭೂಪತಿಯೆದುರು ಬಾಗಿ
ಬಿತ್ತರಿಸಿತ್ತು. ತುತ್ತೂರಿನಾದವನೆತ್ತರಿಸಿತ್ತು.
ಮಾತಂಗಪಡೆಯು ಮುಂಚೂಣಿಯಲಿ ಮೆರೆದು ಮಹಾಪಡೆಯ ಮುನ್ನಡೆಸಿತ್ತು.
ಹಯಸೇನೆಯು ಹಾದಿಬೀದಿಯೊಳು ಹರಿವ ಹಂತಕರೆಡೆ ಹದ್ದುಗಣ್ಣಿರಿಸಿತ್ತು.
ರಥಿಕಬಲವು ರಾಯನಿಗೆಂದು ರತ್ನಖಚಿತವಿಹ ರಥವೊಂದ ರಸ್ತೆಗಿಳಿಸಿ ರಕ್ಷಿಸಿತ್ತು.
ಪದಾತಿದಳವು ಪುರದ ಪ್ರಾಕಾರಗುಂಟದಿ ಪದಹತಿಯನಿಟ್ಟು ಪಯಣಿಸಿತ್ತು.
ಬಣದ ಬಲಾಢ್ಯರಲ್ಲಿ ಬರ್ಜಿ–ಭಲ್ಲೆಗಳ ಬಡಿದು ಭೂಮಿಗೆ ಬೆಟ್ಟವೇ
ಬಾಯ್ಬಿರಿಯುವೊಂತೆ ಭರಾಟೆಯನೆಬ್ಬಿಸಿಹರು.
ಬಿಲ್ಲನಿಡಿದ ಬಿಲ್ಲಾಳುಗಳಿಲ್ಲಿ ಬಾಗಿಸಲೆಂಬ ಬಾಜಿಯಲಿ ಬಿದ್ದೇಳುತಿಹರು.
ಕೋದಂಡವನಿಡಿದು ಕೊಸರಾಡುತಿಹರು.
ಕತ್ತಿವರಸೆಯಲಿ ಕೋವಿದರಾದ ಕಲಿಗಳೆಲ್ಲ ಕಲೆತು, ಕದನ ಕೌಶಲ್ಯದ
ಕಾಣ್ಕೆಯನೀಯುತ ಕ್ರಮಿಸಿಹರು.
ನಗರನಾರಿಯರೆಲ್ಲ ನೆಲಕೆ ನೀರೆರೆದು, ನಾಚ್ಚುಕ್ಕಿ ರಂಗವಲ್ಲಿಯ ಬರೆದು,
ಬಾಗಿನವನಿಡಿದು ಬಾಗಿಲಿಗೆ ಬಂದಿಹರು.
ಪುರಪುರಷರೆಲ್ಲ ಪರಂಧಾಮಸುತೆಯಾಗಿಂದು ಪೌರವನ ಪಟ್ಟದರಸಿಯಾಗಿಹಳ
ಪಲ್ಲಕ್ಕಿಯನಿಡಿದು ಪಥಕಿಳಿದಿಹರು.

ಚಿಕ್ಕಮಕ್ಕಳೆಲ್ಲ ಚೊಕ್ಕಬಂಗಾರದೊಲು ಬಂದು ಬಂಧುಗಳೊಡನೆ ಬೀದಿಗಿಳಿದಲ್ಲಿಲ್ಲಿ
ಭಂಡಾಟವಾಡಿಹರು.
ನಗರಕಿಂದು ನಗರವೇ ನಾಚಿ ನಲಿದಿತ್ತು, ನಿಂತು ನೋಡಿತ್ತು, ನೃಪರಾಜ್ಞಿಯರ
ನೆದರಿಳಿಸಿತ್ತು.
ಹೊತ್ತಿಳಿವ ಹಾದಿಯಲಿ ಹೊನ್ನರಾಶಿಯನೇ ಹೊತ್ತು ಹರಿದಂತದಿ ಹೂತಿಡುವ
ಹಂಸಾರ್ಕನಂತೆ
ಸುತ್ತೇಳುಕೊತ್ತಳದೊಳಗೆ ಸುಖದಿಂದಿರುವ ಸುಲಕ್ಷಣರಾದಿ ಸಾಧ್ವೀಮಣಿಗಳ
ಸಾಕ್ಷೀಕರಿಸಿ,
ಕೋಟೆಮಾರ್ಗವ ಕ್ರಮಿಸಿ, ಪುರದ ಪ್ರಾಕಾರವ ಪೂರೈಸಿ, ಹತ್ತು ಹಾದಿಗಳಲೆಲ್ಲ
ಹಾರೈಸಿ
ನೆರೆದ ನೂರುಕನಸುಗಳ ನೌಕೆಯಾಗಿ ನೂಕಿದಾ ನಿಬ್ಬಣವು ನಾಲ್ರಂಗದಿ
ನಡೆದಿತ್ತು. ನೃಪನಿಲಯದೊಳು ನಿಂದಿತ್ತು.
ನಾಕಲೋಕದಿಂದ ನೆಲಕಿಳಿದ ನೀರನಾರಿಯನಿಂದು ನಾಲ್ಗೋಡೆಗಳ ನಡುಮನೆಯ
ನಿಯತಿಯೊಳು ನೂಕಲಾಯಿತು.
ಸೂರ್ಯಲೋಕದಾ ಸಪ್ತದ್ವಾರಗಳಲಿ ಸಂಚಾರಮುಕ್ತಳಿಹ ಸೌಖ್ಯಳನಿಂದು
ಸೀಮೆಸಂಸಾರದೊಳು ಸೆರೆಯಿಡಲಾಯಿತು.
ಮನೋಕೋಶವದು ಮುದುರಿ ಮಣ್ಣಾಗುವೊಂತೆ ಮಿನುಗುತಿರುವಾ ಮೈಯಮೇಲ್
ಮಾನವಸನವ ಮುಚ್ಚಲಾಯಿತು.
ಕಾರ್ಮೋಡಗಳ ಕರೆದು ಕಾರ್ಗಾಲ ಕರೆವ ಕೇಶವಿನ್ಯಾಸವನು ಕಳತ್ರಸೆರಗಿನೊಳು
ಕಟ್ಟಿ ಕಾರ್ಮಣಾವರಣಗೊಳಿಸಲಾಯಿತು.
ಬತ್ತಲ ದೇಹಕೆ ಪತ್ತಲನುಡಿಸಿ ಕತ್ತಲಿರದ ಹಿತ್ತಲಿನೊಳಕೆಕೊಯ್ದು ಮಿರಿಯ
ನೀರೆಯವಳನು ಬರಿಯ ನಾರಿಯಾಗಿಸಲಾಯಿತು.

(ಸಶೇಷ)

# ‘ಅಹಂ’ದ ಕಾವ್ಯಾತ್ಮಕ ಅಭಿವ್ಯಕ್ತಿ

**– ಅನು: ಪುಟ್ಟು ಕುಲಕರ್ಣಿ**

**2**

ಅಲ್ಲಿದೋ ಭಾವದಾರಿದ್ರ್ಯತನವು ತನ್ನಾಪ್ತ ತೋಷದೊಳಗೆ
ವಿಶ್ವಾಸಪೂರ್ಣ ಭಾವದುಂಬುತಲಿ ತಲ್ಲೀನಗೊಳುತ ಸಾಗೆ,
ಜೊತೆಗಿದೋ ಭೀತಿ ಮತ್ತೆ ದೌರ್ಬಲ್ಯ ಎದೆಗಪ್ಪಿಕೊಂಡು ಅರಸಿ
ಅವರದೇ ಸ್ವಪ್ನ–ನಿಕೃಷ್ಟವನ್ನು ಘನಗಭೀರದಲಿ ಇರಿಸಿ;

ಈ ಸರ್ವ ತಾನು ಅಧಮಾತಿ–ಅಧಮ, ಚಿಂತನವು ಇಂತು ಪತನ
ಆಧಾರವಿದುವು! ನೀರಸವು ಸಕಲ, ದಯನೀಯ, ಶಕ್ತಿಹೀನ,
ಶಿಥಿಲ–ಬಂಧದಾ ತೃಪ್ತ ವಿಷಯವಿದು ಅದರದೇ ಗುಣದ–ಉಸಿರು
ಅದನೆ ಉಸಿರಿಡುತ ಜೀವ–ಭಾವವನು ತುಂತುಂಬಿಕೊಂಡ ಸೂರು,

ದಿವ್ಯತ್ವ ತಾನು ಉದಿತಗೊಳ್ಳಲೆನೆ ಬಂಧನವ ತೊರೆದು ಬಂದು
ಅದಕಾಗಿ ಕ್ರಂದ ಮತ್ತೆಂದು ಇರದು ಅನುಭಾವ ಗಳಿಸಲೆಂದು;

ದೇದೀಪ್ಯಮಾನ ಹಂತಗಳಲೀಗ ಆಂದೋಲಗೊಳುತಲಿರುವ
ದಂಭ ತುಂಬಿರುವ ಬಿಂಬ–ಬಿಂಬದಲಿ ತಾನಿಂಬುಗೊಳುತಲಿರುವ
ಈ ಕೊಲ್ಲಿ–ಕೊಲ್ಲಿಗಳ ಕುಲವೆಲ್ಲ ಜೀವ–ಕಡೆಗಣಿಸುತೀಗ ಸಾಗೆ
ಆ ಸೂರ್ಯಕಾಂತಿ ತೇಜವನು ದೂರ– ದೂರಿಡುತ ಚಲನ ಹೀಗೆ

**(ಶ್ರೀ ಅರವಿಂದರ ‘ಸಾವಿತ್ರಿ’; ದಳ 2 ರೇಣು 6 ಪುಟ 216)**

**3**

ಮತ್ತೆ ಇವನೀಗ ನ್ಯಾಯಬದ್ಧತೆಯ ಅಪ್ರತಿಮ ಸಿದ್ಧನಾಗಿ
ಪ್ರತಿಭೆ ತುಂಬಿರುವ ಭೂತ–ಚತುರನಿವ ಅದ್ಭುತದ ರೂಪವಾಗಿ
ಆದರೇನಂತೆ, ಚಿತ್ತವರಳದಲೆ, ಬಡಪಾಯಿಯಂತೆ ಈಗ
ಪತನಗೊಂಡಿರುವ ಜೀವ–ಸಂಕುಲವ ಸಂಕೇತಿಸುತ್ತಲೀಗ

ಆ ದಿವ್ಯ–ಜ್ಯೋತಿಯಾ ಊರ್ಧ್ವ ನೆಲೆಯ ಸಂಪರ್ಕ–ಸೇತುವಂತೆ
ತಾನಿರುವ ದೇವ–ಸ್ಪಂದವನು ದೇಹ–ಜೀವಕ್ಕೆ ಬಳಸದಂತೆ

ಕಡಿದು ಬಿದ್ದಿರುವ ಜಲದ ಒಡಲಲ್ಲಿ, ಆ ಕಾಂತಿ–ತಂತು ಕಳೆದು
ಬದುಕ ಭ್ರಮೆಗಿಂದು ತೇಲಿ ಬದುಕಲೆನೆ, ಆ ಮೇರುದಂಡ ಮುರಿದು

ಪರಿಭ್ರಮಣದಲ್ಲಿ ಪಥ ತೊರೆದ ದಿವ್ಯದೇವಗಣವು ಸಹಿತ
ಧೂಳಿನಲಿ ಧೂಳ ಕಣವಾಗಿ ಕಾಲದೊಡಲಲ್ಲಿ ಬಂಧಿ ಸತತ.

**(ಶ್ರೀ ಅರವಿಂದರ 'ಸಾವಿತ್ರಿ'; ದಳ 2 ರೇಣು 5 ಪುಟ 152)**

**4**

ಬೃಹತ್ ಕಾಯಗಳು ದಟ್ಟ ಕತ್ತಲಲಿ, ಘನಘೋರ ಕುಸ್ತಿಯಲ್ಲಿ
ಮಂದ್ರಸಪ್ತಕದ ಸುಪ್ತಾಂತಃಪ್ರಜ್ಞೆ, ದೇವಗಣ ಉದಿಸಿತಲ್ಲಿ
ಸಂಘರ್ಷಕಾಗಿ ಜಾಗರಿಸಿತಿಲ್ಲಿ, ದಿವ್ಯತೆಗೆ ತೀಕ್ಷ್ಣ ರಾವು
ಅವಳ ತಳಮಳದ ಹೃದಯದಾ ಛಾಯೆಯಡಿಯಲ್ಲಿ ನಿತ್ಯ ಠಾವು

ಕರ್ಕಶದ ಧ್ವನಿಯ ತಾರ್ಕಿಕದ ಕಠಿಣ, ಖಿನ್ನತೆಗೆ ಕೇಂದ್ರ ಸ್ಥಿತಿಯು
ಸಂತಯಿಸಲರಿಯದಾಪರಿಯಲಿರುವ, ರಕ್ಷಕನ ಸಧ್ಯ ಗತಿಯು
ನಿತ್ಯದಲಿ ಇರುವ ಜಗದ ಯಾತನೆಯ, ಅಂತಸ್ಥ ಮಾಡಿಕೊಂಡು
ಅಚಲತೆಯ ಭಾವ ಜಡಶಿಲೆಯ ರೂಪ, ದಟ್ಟೈಯಿಸೆ ದಿಟ್ಟ ನೋವು

ಅವಕಾಶದಲ್ಲಿ ನಿರ್ಲಕ್ಷ್ಯ ದೃಷ್ಟಿ ಸ್ಥಿರವಾಗಿ ಅಕ್ಷಿ ತೆರೆದು
ಕಾಲಕಾತೀತ ನೋವುಗಳ ಕಂಡು, ಜೀವನದ ಗತಿಯ ಮರೆತು
ಬಾಧಿತನು ಆಗ ಅವನ ನಿರ್ಣಯದ ದಿವ್ಯಾತ್ಮ ಮೂಲದಂತೆ
ಬದ್ಧಿತನು ಅವನ ಪಟ್ಟಕ್ಕೆ ಮಣಿದು, ಕಾದಿರಲು ಅರಿಯದಂತೆ

ಸಾವಿರದ ಸ್ಥಿತಿಯ ಸಂಮೋಹಕತ್ವ ಆಹ್ವಾನವನ್ನು ಇತ್ತು
ಶಾಶ್ವತದ ಹಸ್ತ, ಭರವಸೆಯ ಪಾಯ, ಮರುಜೋಡಿಸುತ್ತ ಇರಲು
ಸಹವರ್ತಿಯಾಗಿ ಪಥವಿಡುತ ನಡೆದು, ಎಚ್ಚೆತ್ತು ಮತ್ತೆ ನಿಲಲು
ಜೊತೆಗೆ ದಿಟ್ಟಿಸುವ ನೀಲಿಮದ ಹಸಿತ ಜಗವು ಭಯಬೀರುತಿರಲು

**(ಶ್ರೀ ಅರವಿಂದರ 'ಸಾವಿತ್ರಿ'; ದಳ 1 ರೇಣು 1 ಪುಟ 4)**

# ವಾರ್ತಾಪತ್ರ

## ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ದಿನಾಂಕ 17ನೇ ಮತ್ತು 18ನೇ ಜನವರಿ 2026 ರಂದು ಎರಡು ದಿನಗಳ ಶ್ರೀ ಅರವಿಂದೋ ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ ಇದರ ಸಮ್ಮೇಳನವನ್ನು ಶ್ರೀ ಅರವಿಂದೋ ಸೊಸೈಟಿ ಶಾಖೆ, ಯಳವತ್ತಿಯಲ್ಲಿ ಆಯೋಜಿಸಲಾಗಿತ್ತು. ಸಮ್ಮೇಳನಕ್ಕೆ ರಾಜ್ಯದ ಕೇಂದ್ರ ಮತ್ತು ಶಾಖೆಗಳಿಂದ ಸುಮಾರು 150 ಪ್ರತಿನಿಧಿಗಳು ಆಗಮಿಸಿ ತಮ್ಮ ಶಾಖೆ ಮತ್ತು ಕೇಂದ್ರಗಳಲ್ಲಿ ನಡೆಯುತ್ತಿರುವ ಚಟುವಟಿಕೆಗಳು ಮತ್ತು ಅಭಿವೃದ್ಧಿ ಕೆಲಸಗಳ ಬಗ್ಗೆ ವರದಿಯನ್ನು ಸಲ್ಲಿಸಿದರು. ಸಮ್ಮೇಳನದ ಅಂಗವಾಗಿ ಶ್ರೀಮಾತಾರವಿಂದರ ಹಿರಿಯ ಸಾಧಕರುಗಳಿಂದ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು. ಸಮ್ಮೇಳನದ ಆತಿಥ್ಯವನ್ನು ಶ್ರೀ ಅರವಿಂದೋ ಸೊಸೈಟಿ ಯಳವತ್ತಿ ಶಾಖೆ ವಹಿಸಿತ್ತು. ಈ ಎರಡು ದಿನ ಸಮ್ಮೇಳನವು ಯಶಸ್ವಿಯಾಗಿ ಜರುಗಿತು. ಸಮ್ಮೇಳನದ ಅಧ್ಯಕ್ಷತೆಯನ್ನು ರಾಜ್ಯ ಸಮಿತಿ ಅಧ್ಯಕ್ಷರು ಡಾ॥ ಅಜಿತ್ ಸಬ್ನೀಸ್ ವಹಿಸಿದರು. ವೇದಿಕೆಯ ಮೇಲೆ ವಲಯ ಉಪಾಧ್ಯಕ್ಷರು ಉಪಸ್ಥಿತರಿದ್ದರು. ಶ್ರೀ ಅರವಿಂದೋ ಸೊಸೈಟಿ ಶಾಖೆ, ಯಳವತ್ತಿ ಅಚ್ಚುಕಟ್ಟಾಗಿ ಸಮ್ಮೇಳನಕ್ಕೆ ಬಂದಿದ್ದ ಎಲ್ಲಾ ಪ್ರತಿನಿಧಿಗಳಿಗೆ ವಸತಿ ಮತ್ತು ಊಟದ ವ್ಯವಸ್ಥೆಯನ್ನು ಮಾಡಿ ಪ್ರಶಂಸೆಗೆ ಪಾತ್ರರಾದರು.

ದಿನಾಂಕ 31ನೇ ಜನವರಿ 2026ರ ಶನಿವಾರ ಮೀರಾಂಬಿಕ ಸ್ಕೂಲ್ ಫಾರ್ ನ್ಯೂ ಏಜ್ ಶಿಕ್ಷಣ ಸಂಸ್ಥೆ ವತಿಯಿಂದ ಜ್ಯೋತಿ ಪ್ರಸರಣ ಕಾರ್ಯಕ್ರಮ ನೆರವೇರಿಸಲಾಯಿತು. ಸಂಸ್ಥೆಯ ಅಧ್ಯಕ್ಷರಾದ ಡಾ॥ ಅಜಿತ್ ಸಬ್ನೀಸ್ ಜ್ಯೋತಿ ಬೆಳಗುವುದರ ಮೂಲಕ ಚಾಲನೆ ನೀಡಿದರು. ಮುಖ್ಯ ಅತಿಥಿಗಳಾಗಿ ಶ್ರೀ ಕೊಪ್ಪರಪು ಎಸ್.ಎ. ಶೇಷ ಶೈಲೇಂದ್ರ, ಉಪ ಆಯುಕ್ತರು, ಆದಾಯ ತೆರಿಗೆ ಇಲಾಖೆ, ಬೆಂಗಳೂರು, ಗೌರವಾನ್ವಿತ ಅತಿಥಿಗಳಾಗಿ ಶ್ರೀ ಶ್ರೀನಿವಾಸ ಪಿ. ಭಾಗವತುಲ, ಮುಖ್ಯಸ್ಥರು, ಮ್ಯಾಗ್ನಾ ಗ್ರೂಪ್, ಭಾರತ ಇವರುಗಳು ಆಗಮಿಸಿದರು. ಶಾಲಾ ಪ್ರಾಂಶುಪಾಲರಾದ ಶ್ರೀಮತಿ ಶಾರದಾಂಬಾ ವಿದ್ಯಾರ್ಥಿಗಳಿಗೆ ಪ್ರತಿಜ್ಞಾ ವಿಧಿ ಬೋಧಿಸಿದರು. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ತೋರಿದ ವಿದ್ಯಾರ್ಥಿಗಳಿಗೆ ಸ್ಮರಣ ಸಂಚಿಕೆಗಳನ್ನು ನೀಡಲಾಯಿತು. ಸಂಸ್ಥೆಯ ಶಿಕ್ಷಕ ವೃಂದ, ಸಂಸ್ಥೆಯ ಮಹಾಪ್ರಬಂಧಕರು, ಪೋಷಕರು ಉಪಸ್ಥಿತರಿದ್ದರು. ಶಿಕ್ಷಕ ವೃಂದದವರು ಜ್ಯೋತಿಯನ್ನು ಹತ್ತನೇ ತರಗತಿ ವಿದ್ಯಾರ್ಥಿಗಳಿಗೆ ಹಸ್ತಾಂತರಿಸಿದರು. ಆನಂತರ, ಹತ್ತನೇ ತರಗತಿ ವಿದ್ಯಾರ್ಥಿಗಳು ಒಂಭತ್ತನೇ ತರಗತಿ ವಿದ್ಯಾರ್ಥಿಗಳಿಗೆ ಮರು

ಹಸ್ತಾಂತರ ಮಾಡಿದರು. ಶ್ರೀಮಾತಾರವಿಂದರ ಪಾದ ಚರಣಗಳಿಗೆ ಪುಷ್ಪವನ್ನು ಸಮರ್ಪಿಸಲಾಯಿತು. ನಾಡಗೀತೆಯೊಂದಿಗೆ ಕಾರ್ಯಕ್ರಮ ಸಮಾಪ್ತಿಯಾಯಿತು.

ದಿನಾಂಕ 21ನೇ ಫೆಬ್ರವರಿ 2026ರ ಶನಿವಾರ ಶ್ರೀ ಅರವಿಂದೋ ಸಂಕೀರ್ಣ ಟ್ರಸ್ಟ್ ವತಿಯಿಂದ "ಶ್ರೀಮಾತೆಯವರ ಜನ್ಮದಿನ"ವನ್ನಾಗಿ ಆಚರಿಸಲಾಯಿತು. ಬೆಳಿಗ್ಗೆ 10.00 ರಿಂದ 10.20 ರವರೆಗೆ ಸಾಮೂಹಿಕ ಧ್ಯಾನ ಹಾಗೂ ಸಂದೇಶ ಪತ್ರ ವಿತರಿಸಲಾಯಿತು. ತತ್ಸಬಂಧ ಬೆಳಿಗ್ಗೆ 10.30 ರಿಂದ 12.00 ಗಂಟೆಯವರಗೆ "Living Sri Aurobindo's Yoga in Daily Life" ಎಂಬ ವಿಷಯವಾಗಿ ಡಾ॥ ಅಜಿತ್ ಸಬ್ನೀಸ್, ಕಾರ್ಯನಿರ್ವಾಹಕ ಧರ್ಮದರ್ಶಿ, ಶ್ರೀ ಅರವಿಂದೋ ಸಂಕೀರ್ಣ ಟ್ರಸ್ಟ್, ಬೆಂಗಳೂರು ಇವರು ಉಪನ್ಯಾಸ ನೀಡಿದರು. ನಂತರ, ಶ್ರೀಮಾತಾರವಿಂದರ ಅನುವಾದದ 5 ಕನ್ನಡ ಪುಸ್ತಕಗಳು 1. ದೇವ ಮುಹೂರ್ತ – ಶ್ರೀ ಅರವಿಂದರು (ಅನುವಾದ: ಡಾ॥ ಆರ್.ಕೆ. ಕುಲಕರ್ಣಿ), 2. ಪ್ರಾರ್ಥನೆಗಳು ಹಾಗೂ ಮನನಗಳು – ಶ್ರೀಮಾತೆ (ಅನುವಾದ: ಶ್ರೀ ಪ್ರಹ್ಲಾದ್ ನರೇಗಲ್), 3. ಶ್ರೀ ಅರವಿಂದರ ಮಹಾಕಾವ್ಯ ಸಾವಿತ್ರಿ (ಸಂಕ್ಷೇಪ ಕನ್ನಡ ರೂಪ: ಡಾ॥ ಆರ್.ಕೆ. ಕುಲಕರ್ಣಿ), 4. ಉತ್ತರಪಾಡಾ ಉಪನ್ಯಾಸ – ಶ್ರೀ ಅರವಿಂದರು (ಅನುವಾದ: ಶ್ರೀ ಸಿಂಪಿ ಲಿಂಗಣ್ಣ), 5. ಶ್ರೀ ಅರವಿಂದರ ಪೂರ್ಣಯೋಗ (ಅನುವಾದ: ಶ್ರೀ ಸಿಂಪಿ ಲಿಂಗಣ್ಣ) ಬಿಡುಗಡೆಗೊಳಿಸಲಾಯಿತು.

"Devotees of Sri Aurobindo & The Mother" ವಿಷಯ ಕುರಿತು ದಿನಾಂಕ 10ನೇ ಫೆಬ್ರವರಿ 2026 ರಿಂದ 20ನೇ ಏಪ್ರಿಲ್ 2026 ವರೆಗೂ ಶ್ರೀಅರವಿಂದ ಸಂಕೀರ್ಣದ ಸಾಂಸ್ಕೃತಿಕ ಸಭಾ ಭವನದಲ್ಲಿ ಫೋಟೋ ಚಿತ್ರ ಪ್ರದರ್ಶನ ಆಯೋಜಿಸಲಾಗಿದೆ.

ದಿನಾಂಕ 28ನೇ ಫೆಬ್ರವರಿ 2026ರ ಶನಿವಾರ "ಅರೋವಿಲ್ಲೆ ದಿನ"ವನ್ನು ಆಚರಿಸಲಾಯಿತು. ಬೆಳಿಗ್ಗೆ 10.00 ರಿಂದ 10.20 ರವರೆಗೆ ಸಾಮೂಹಿಕ ಧ್ಯಾನ ಏರ್ಪಡಿಸಲಾಯಿತು. ತತ್ಸಬಂಧ ಬೆಳಿಗ್ಗೆ 10.30 ರಿಂದ 12.00 ಗಂಟೆಯವರಗೆ "Auroville, the Call of The Mother" ಎಂಬ ವಿಷಯದ ಬಗ್ಗೆ ವೀಡಿಯೋ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು.

ಸದರಿ, ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಅನೇಕ ಗುರು–ಬಂಧುಗಳು, ಸಾಧಕರು ಮತ್ತು ಇತರರು ಹಾಜರಿದ್ದರು. ಜೂಮ್ ಹಾಗೂ ಯೂಟ್ಯೂಬ್ ಮುಖಾಂತರ ಸಹ ಪ್ರಸ್ತುತ ಪಡಿಸಲಾಯಿತು.

**STATEMENT ABOUT OWNERSHIP AND OTHER PARTICULARS ABOUT NEWSPAPER AKHIL BHARAT PATRIKA**

**FORM IV**

| | | |
|---|---|---|
| 1. Place of Publication | : | Bangalore |
| 2. Periodicity of its Publication | : | Monthly |
| 3. Printer's Name | : | Dr. Ajit Sabnis |
| Nationality | : | Indian |
| Address | : | No. 39 & 38 (P) 30th Main, 9th Cross, Sri Aurobindo Marg, J P Nagar I Phase, Bangalore - 560 078. |
| 4. Publisher's Name | : | Dr. Ajit Sabnis |
| Nationality | : | Indian |
| Address | : | No. 39 & 38 (P) 30th Main, 9th Cross, Sri Aurobindo Marg, J P Nagar I Phase, Bangalore - 560 078. |
| 5. Editor's Name | : | Sri Puttu Parashuram Kulkarni |
| Nationality | : | Indian |
| Address | : | No. 39 & 38 (P) 30th Main, 9th Cross, Sri Aurobindo Marg, J P Nagar I Phase, Bangalore - 560 078. |

6. Names and addresses of individuals who own the newspaper and partners or shareholders holding More than one percent of the total capital.

| | | |
|---|---|---|
| Name | : | Sri Aurobindo Society |
| Nationality | : | |
| Address | : | No. 11, Saint Martin Street, Puducherry - 605 001. |

I, Dr. Ajit Sabnis, hereby declare that the particulars given above are true to the best of my knowledge and belief.

Sd/-

Date : 28-02-2026

Dr. Ajit Sabnis



ಫೋಟೊ: ಇಮೇಜಿಂಗ್ ಸಾವಿತ್ರಿ

**RNI No. 22511/1971**
No. of Pages **60 + 4 (Cov. Page)**
KAR Reg No.: RNP/KA/BGS/368/2024-2026
Licensed to post without prepayment License No.PMG BG/WPP-409/2024-2026
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2026
Licensed to Post at BG PSO, Mysuru Road, Bengaluru - 560 026



ಫೋಟೋ: ಇಮೇಜಿಂಗ್ ಸಾವಿತ್ರಿ

Ed. Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bengaluru - 560 078. Phone: 080 - 22449882.